

ಇನ್‌ಸ್ಟಾಲೇಷನ್ ಕಲಾ ಪ್ರಪಂಚ

ಕೆ.ವಿ. ಸುಬ್ರಹ್ಮಣ್ಯಂ

ಕರ್ನಾಟಕ ಲಲಿತಕಲಾ ಅಕಾಡೆಮಿ













ಇನ್‌ಸ್ಟಾಲೇಷನ್
ಕಲಾ ಪ್ರಪಂಚ



ಇನ್‌ಸ್ಟಾಲೇಷನ್

ಕಲಾ ಪ್ರಪಂಚ

ಕೆ.ವಿ. ಸುಬ್ರಹ್ಮಣ್ಯಂ

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ೫೬೦೦೦೨

INSTALATION KALA PRAPANCHA

A Concise history and criticism of instalation art. written by **K.V. Subramanyam,**
40/3, 10 Cross, 1st Main, Bapujinagara, G.E.F. Post, Bengalooru 560026
Published by **V. N. Mallikarjuna Swamy**, *Registrar*,
KARNATAKA LALITHAKALA ACADEMY, Kannada Bhavana, J.C. Road, Bengalooru 560002
Phone: +91-80-22480297

First Edition : 2008
Pages : viii + 16 photos + 172
Copies : 1000
Price : 190/-

D.T.P., Book Designed and Conceived by
VIBHINNA MASS COMMUNICATION
B.L. Narasimhamurthy
Mobile: 9972891207
Email: vibhinnamc@gmail.com

ಪ್ರಕಾಶಕರು:
ವಿ.ಎನ್. ಮಲ್ಲಿಕಾರ್ಜುನಸ್ವಾಮಿ, *ಆಡಳಿತಾಧಿಕಾರಿಗಳು*
ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ೫೬೦೦೦೨

ಮೊದಲ ಮುದ್ರಣ : ೨೦೦೮
ಪುಟಗಳು : viii + ೧೬ + ೧೭೨
ಪ್ರತಿಗಳು : ೧೦೦೦
ಬೆಲೆ : ೧೯೦/-

ಡಿ.ಟಿ.ಪಿ., ಮುಖಪುಟ ಮತ್ತು ಪುಸ್ತಕವಿನ್ಯಾಸ
ವಿಭಿನ್ನ ಮಾಸ್ ಕಮ್ಯೂನಿಕೇಷನ್
ಬಿ.ಎಲ್. ನರಸಿಂಹಮೂರ್ತಿ
Mobile: 9972891207

(ಮುಖಪುಟದಲ್ಲಿರುವ ಕಲಾಕೃತಿಗಳ ಕಲಾವಿದರು: ಉಮೇಶ್,
ಬಿ.ಹೆಚ್. ಶ್ರೀನಿವಾಸ್ ಪ್ರಸಾದ್, ಗೋಗಿ ಸರೋಜ್ ಪಾಲ್, ಸುರೇಖ,
ಕ್ರಿಸ್ಟೋ ಮತ್ತು ಜೇನ್ ಕ್ಲಾಡೆ, ಅನೀಶ್‌ಕಪೂರ್.
ಹಿನ್ನೆಲೆಯ ಅಭಿವ್ಯಕ್ತಿ: ಎನ್.ಎಸ್. ಹರ್ಷ.)

ಮುದ್ರಕರು
ಯಶಸ್ವಿ ಪ್ರಿಂಟ್-ಆಡ್ಸ್
86, 2ನೇ ಅಡ್ಡ ರಸ್ತೆ, ಕಾವೇರಿಪುರ
ಕಾಮಾಕ್ಷಿಪಾಳ್ಯ, ಬೆಂಗಳೂರು 560079
✆ 23583831 Mobile 9448373577
Email : yashasviads@yhaoo.co.in

ಅಧ್ಯಕ್ಷರ ಮಾತು

ಕರ್ನಾಟಕ ಲಲಿತಾಕಲಾ ಅಕಾಡೆಮಿಯು ಕಳೆದ ನಲವತ್ತಮೂರು ವರುಷಗಳಿಂದ ಲಲಿತಕಲೆಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಈ ಎಲ್ಲ ಗ್ರಂಥಗಳೂ ಕರ್ನಾಟಕದ ಕಲಾಸಕ್ತರ ಹಾಗೂ ಕಲಾವಿದರ ಮೆಚ್ಚುಗೆಗಳಿಸಿರುತ್ತವೆ. ಈ ಕಲಾ ಸಾಹಿತ್ಯ ಪ್ರಕಟಣೆಯ ಜೊತೆಗೆ ಕರ್ನಾಟಕದ ಚಿತ್ರಕಲಾ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಅನೇಕ ಹಿರಿಯ ಕಲಾವಿದರ ಸಾಧನೆಗಳೊಂದಿಗೆ ಅವರ ಸಮಗ್ರ ಪರಿಚಯವನ್ನು ನೀಡುವ "ಕಲಾವಿದರ ಮಾಲೆ" ಪುಸ್ರಕಗಳನ್ನೂ ಅಕಾಡೆಮಿಯು ಪ್ರಕಟಿಸುತ್ತಾ ಬಂದಿದೆ. ಈ ಕಲಾವಿದರ ಮಾಲೆಯು ಆಯಾ ಕಲಾವಿದರ ಕಾಲಘಟ್ಟದಲ್ಲಿ ಬೆಳೆದು ಬಂದ ಕರ್ನಾಟಕದ ಕಲಾ ಇತಿಹಾಸವನ್ನೂ ಪರಿಚಯಿಸುತ್ತದೆ. ಕಲಾವಿದರ ಪರಿಚಯದ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಅಲ್ಲದೇ ಇಂಗ್ಲೀಷ್ ಭಾಷೆಗೂ ಅನುವಾದಿಸಿ ಪ್ರಕಟಿಸಲಾಗುತ್ತದೆ. ಈ ಮೂಲಕ ನಮ್ಮ ಕಲಾವಿದರನ್ನು ಅವರ ಸಾಧನೆಯನ್ನೂ ಹೊರ ರಾಜ್ಯದ ಓದುಗರಿಗೆ ಪರಿಚಯಿಸಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕಟಿತ **"ಇನ್‌ಸ್ಟಾಲೇಷನ್ ಕಲಾ ಪ್ರಪಂಚ"** ಪುಸ್ತಕವು ಸಾಧನೆಗಳನ್ನು ಪರಿಚಯಿಸುತ್ತದೆ. ಈ ಪುಸ್ತಕದ ಲೇಖಕರೂ ಸ್ವತಃ ಕಲಾವಿದರಾಗಿದ್ದು ಪ್ರಸ್ತುತ ಕಲಾವಿದ ಜೀವನ, ಸಾಧನೆಗಳನ್ನು ಅರಿತವರಾಗಿದ್ದರಿಂದ ಈ ಕಲಾವಿದರ ಸಮಗ್ರ ಪರಿಚಯವು ಈ ಪುಸ್ತಕವು ಓದುಗರ ಗಮನಕ್ಕೆ ತರುತ್ತದೆ ಎಂದು ಭಾವಿಸಲಾಗಿದೆ.

ಈ ಮೊದಲು ಕಿರು ಅಳತೆಯಲ್ಲಿ ಪ್ರಕಟವಾಗುತ್ತಿದ್ದ ಕಲಾವಿದರ ಪರಿಚಯದ ಪುಸ್ತಕಗಳನ್ನು ಈಗ ದೊಡ್ಡ ಅಳತೆಯಲ್ಲಿ ಸಿದ್ದಪಡಿಸಿ ಓದುಗರ ಕೈಗಿತ್ತಿದ್ದೇವೆ. ಎಂದಿನಂತೆ ಕಲಾಸಕ್ತರು, ಕಲಾಇತಿಹಾಸ ಪ್ರೇಮಿಗಳೂ ಈ ಪುಸ್ತಕಗಳನ್ನು ಸ್ವಾಗತಿಸುತ್ತಾರೆಂದು ಆಶೀಸಲಾಗಿದೆ.

ಈ ಪುಸ್ತಕವನ್ನು ಮುದ್ರಿಸಿದ ಯಶಸ್ವಿ ಪ್ರಿಂಟ್-ಅಡ್ಸ್‌ನ ಮಾಲೀಕರಾದ ಶ್ರೀಮತಿ ವೀಣಾ ಎನ್. ಮೂರ್ತಿ ಅವರಿಗೂ ಪ್ರಕಟಿಸಿದ ಕರ್ನಾಟಕ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೂ ನನ್ನ ವಂದನೆಗಳು.

ವಿ.ಟಿ. ಕಾಳೆ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿಯ

ನಿಮ್ಮೊಂದಿಗೆ....

ಗ್ಯಾಲರಿಗಳ ಹಂಗಿನಲ್ಲಿರುವ ಹಲವು ಕಲಾವಿದರು 'ಇನ್‌ಸ್ಟಾಲೇಷನ್‌ಕಲೆ' ಎಂಬುದೇ ಇಲ್ಲ! ಎಂದು ಹೇಳಿಕೊಳ್ಳುತ್ತ ತಮ್ಮ ಆಪ್ತವಲಯಗಳಲ್ಲಿ ಸ್ವಯಂ ಸಮಾಧಾನ ಪಟ್ಟುಕೊಳ್ಳುತ್ತಿದ್ದಾರೆ. ಆದರೆ ನಮ್ಮ ಸಂದರ್ಭದ ಯುವ ಪೀಳಿಗೆಯ ಕಲಾವಿದ/ಕಲಾವಿದೆಯರು ರಾಷ್ಟ್ರ / ಅಂತರರಾಷ್ಟ್ರೀಯ ಮಟ್ಟಗಳಲ್ಲಿ ದೊಡ್ಡದಾಗಿ ಕಾಣಿಸಿಕೊಂಡಿರುವ ಬೆಳವಣಿಗೆ ಎಲ್ಲರ ಕಣ್ಣಿಗೂ ಕಾಣುವಂತಿದೆ. ಸುತ್ತಲಿನ ಪ್ರಕೃತಿದತ್ತ ಹಾಗೂ ಮನುಷ್ಯನ ಸೃಷ್ಟಿಯ ರೂಪಗಳ ಜತೆ ಜತೆಗೇ ಕಲಾವಿದ/ಕಲಾವಿದೆಯರ ವೈಯಕ್ತಿಕ ದರ್ಶನಗಳ ನಡುವೆ ನಕಲು ಮಾಡುವ ಆಟ ಮೀರಿ ಬೌದ್ಧಿಕ ಆಟದ ವೇದಿಕೆಯಾಗಿ ಇಂದು ದೃಶ್ಯಕಲೆಯು ವಿವಿಧ ಮಾರ್ಗಗಳಿಂದ ತನ್ನನ್ನು ಮುಟ್ಟಬಹುದೆಂದು ತೋರಿಸಿದೆ. 'ಇನ್‌ಸ್ಟಾಲೇಷನ್‌ಕಲೆ'ಯ ಪ್ರಕಾರವನ್ನು ನಮ್ಮ ಸಂದರ್ಭದ ಹಲವಾರು ಕಲಾವಿದ/ಕಲಾವಿದೆಯರು ಅಭಿವ್ಯಕ್ತಿಗೆ ದುಡಿಸಿಕೊಳ್ಳುತ್ತಿದ್ದಾರೆ.

ಚಿತ್ರ-ಶಿಲ್ಪ-ಪ್ರಿಂಟ್ ಮಾಧ್ಯಮಗಳ ಮಿತಿಗಳನ್ನು ಮೀರಿದ, ಗ್ಯಾಲರಿಯಂತಹ ಸಾಂಸ್ಥಿಕ ಕೇಂದ್ರಗಳ ರಾಜಕಾರಣ ಮೀರಿದ ಅಭಿವ್ಯಕ್ತಿ ಪ್ರಕಾರ ಇದು. ಸಾಂಸ್ಥೀಕರಣ ತತ್ವ ನೆನಪಾಗುತ್ತಿದೆಯಲ್ಲವೆ? ಈ ಎಲ್ಲವುಗಳನ್ನು ಬಲವಾಗಿ ನಿರಾಕರಿಸಿ ಇನ್‌ಸ್ಟಾಲೇಷನ್ ಕಲಾ ಪ್ರಕಾರದಲ್ಲಿ ದಿಟ್ಟ ಹೆಜ್ಜೆಗಳನ್ನು ಈಗಾಗಲೇ ಇಟ್ಟಿರುವ ಹಲವಾರು ಕಲಾವಿದರು/ಕಲಾವಿದೆಯರು ನಮ್ಮ ನಡುವೆ ಇದ್ದಾರೆ. ಅವರ ಬಗ್ಗೆ ಮಾತ್ರ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ. ಸಾಕಷ್ಟು ಚಿತ್ರಗಳನ್ನು ರಾಷ್ಟ್ರೀಯ - ಅಂತರರಾಷ್ಟ್ರೀಯ ಅಭಿವ್ಯಕ್ತಿಗಳ ಅನುಭವಕ್ಕಾಗಿ ಬಳಸಲಾಗಿದೆ. ಈ ಪ್ರಕಟಣೆಯಲ್ಲಿ ಪ್ರಸ್ತಾಪಿಸಿರುವ ಎಲ್ಲ ರಾಜ್ಯದ, ರಾಷ್ಟ್ರದ ಕಲಾವಿದ/ಕಲಾವಿದೆಯರು ಹಲವಾರು ರೀತಿಗಳಲ್ಲಿ ಈ ಲೇಖಕನಿಗೆ ಸಹಕರಿಸಿದ್ದಾರೆ.

ಈ ಇನ್‌ಸ್ಟಾಲೇಷನ್ ಕಲಾಪ್ರಕಾರದ ಪ್ರಕಟಣೆ ಮೂಡಿ ಬರಲು ಬಹು ಮುಖ್ಯವಾಗಿ 2007ರಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್ ಆಗಿದ್ದ ಬಿ.ಟಿ. ಮುನಿರಾಜಯ್ಯನವರ ಒತ್ತಾಯ ಕಾರಣವಾಗಿದೆ. ಹಾಗೆಯೇ ಈ ಪ್ರಕಟಣೆ ಓದಲು-ನೋಡಲು ಆಗುವಂತೆ ಸುಂದರವಾಗಿ ಪ್ರಕಟವಾಗಲು 2008ರ ಅವಧಿಯಲ್ಲಿ ರಿಜಿಸ್ಟ್ರಾರ್ ಆಗಿದ್ದ ವಿ.ಎನ್. ಮಲ್ಲಿಕಾರ್ಜುನಸ್ವಾಮಿಯವರು ಕಾರಣರಾಗಿದ್ದಾರೆ. ಅಕಾಡೆಮಿಯ ಅಧ್ಯಕ್ಷರು ಹಾಗೂ ಸದಸ್ಯರ ದೃಶ್ಯಕಲಾ ಸಾಹಿತ್ಯಪರ ಸಹಜ ದೃಷ್ಟಿಯೂ ಈ ಪ್ರಕಟಣೆಯ ಹಿಂದೆ ಇದೆ. ಈ ಪುಸ್ತಕವನ್ನು ನೀವು ನೋಡುತ್ತಿರುವ ರೀತಿಯಲ್ಲಿ ವಿಶೇಷವಾಗಿ ಮುದ್ರಿಸಿರುವ ಯಶಸ್ವಿ ಪ್ರಿಂಟರ್ಸ್‌ನ ಬಿ.ಎಲ್. ನರಸಿಂಹಮೂರ್ತಿಯವರ ಶ್ರಮ ಗಣನೀಯ. ಅಚ್ಚರಿಯ ಬೆಳವಣಿಗೆಯಂತೆ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳನ್ನು ಪ್ರದರ್ಶಿಸಿ ಈ ಕಲಾ ಪ್ರಕಾರಕ್ಕೆ ಪ್ರೋತ್ಸಾಹ ನೀಡಿದ, ಈ ಲೇಖಕನಿಗೆ ಹಲವು ರೀತಿಗಳಲ್ಲಿ ಸಹಕರಿಸಿದ ಗ್ಯಾಲರಿ Sakshi, Sumukha, Ske, time and space, CKP, Bodhi Art, ಗ್ಯಾಲರಿ Sara Arakkal, Max Muller Bhavan, Ideal Fine Arts Socitey, Gulbarga ಹಾಗೂ National Arts Council, Singapore, ಈ ಎಲ್ಲರಿಗೂ ನಾನು ಋಣಿಯಾಗಿದ್ದೇನೆ. ಈ ಪ್ರಕಟಣೆಯ ಓದುಗ ಮಿತ್ರರಾದ ನಿಮ್ಮ ವಿಭಿನ್ನ ದೃಷ್ಟಿಯ ನೋಟ, ಓದು ಹಾಗೂ ಅಭಿಪ್ರಾಯಗಳ ವಿನಿಮಯದ ನಿರೀಕ್ಷೆಯಲ್ಲಿದ್ದೇನೆ.

ಫೆಬ್ರವರಿ ೨೦೦೮ **ಕೆ.ವಿ. ಸುಬ್ರಹ್ಮಣ್ಯಂ**

ಪರಿವಿಡಿ

1. ಇನ್‌ಸ್ಟಾಲೇಷನ್[1] ಕಲೆಯ ಹಿಂದೆ-ಮುಂದೆ...

"In his purpose of 'Changing the definition of art', Dushamp had no power to exclude, he could only widen the language, only make us aware that art is all pervading."

-Richard Hamilton[2]

ನಮ್ಮ ಸಮಕಾಲೀನ ಶಿಲ್ಪ ತನ್ನ ಸೃಷ್ಟಿ ಸಾಧ್ಯತೆಗಳ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆಯೇ? ಎಂಬ ಪ್ರಶ್ನೆಗೆ ಹೌದು, ಹೌದು ಎಂದು ಹತ್ತು ಬಾರಿ ಹೇಳುವಷ್ಟು ನಮ್ಮ ಕಲಾವಿದ ಕಲಾವಿದೆಯರ ಅಭಿವ್ಯಕ್ತಿಯ ವೈವಿಧ್ಯ, ಹೊಸ ಹೊಸ ಮಾಧ್ಯಮ ಹಾಗೂ ಪದಾರ್ಥಗಳಲ್ಲಿ (Material) ಕಾಣಿಸಿಕೊಂಡಿದೆ. ಈ ಸೃಷ್ಟಿಪ್ರಕ್ರಿಯೆ ನಿರಂತರವಾಗಿದೆ. ಅಭಿವ್ಯಕ್ತಿಗೆ ಆಯ್ಕೆಯಾಗುವ ಮಾಧ್ಯಮಗಳು ಹಲವು. ಆದರೂ ಒಂದು ನಿರ್ದಿಷ್ಟ ಸಂದರ್ಭದ ವಿಶಿಷ್ಟ ಸಂವೇದನೆಯ ಅಭಿವ್ಯಕ್ತಿ ಪ್ರಕ್ರಿಯೆಗೆ ಆಯ್ಕೆಗೊಳ್ಳುವ ಹೊಸ ಮಾಧ್ಯಮ ಆ ಸಂದರ್ಭದ ಹೊಸ, ವಿಶಿಷ್ಟ ಜೀವಧ್ವನಿಯ ಉಸಿರಿನಂತೆ ವಿಚಿತ್ರ, ಪೂರಕ, ಗುಣಲಕ್ಷಣಗಳನ್ನು ಹೊಂದಿರುತ್ತದೆ. ಹಾಗಾಗಿ ಆ ಆಯ್ಕೆಗೆ ನಿಷ್ಪಷ್ಟ ಉದ್ದೇಶದ ಕಲಾವಿದ/ಕಲಾವಿದೆಯರ ಧೋರಣೆಯ ಹಿನ್ನೆಲೆಯೂ ಪ್ರಭಾವ ಬೀರುತ್ತದೆ. ಅಂತಹ ಅಭಿವ್ಯಕ್ತಿ ಇನ್ನಿತರ ಮಾಧ್ಯಮ-ಮೆಟೀರಿಯಲ್‌ಗಳ ನಡುವೆ ವಿಭಿನ್ನವಾಗಿರುತ್ತದೆ. ಈ ದೃಷ್ಟಿಯಿಂದ ಕಾಲಕಾಲಕ್ಕೆ ಕಲಾವಿದ/ಕಲಾವಿದೆಯರು ಕಂಡು ಕೊಂಡ ಅಂದರೆ ಕಾಲವೇ ಪಕ್ವವಾಗಿಸಿಕೊಟ್ಟ ಮಾಧ್ಯಮ, ಮೇಟೀರಿಯಲ್‌ಗಳು ಹಲವು. ಕಂಪ್ಯೂಟರ್, ಲೇಸರ್ ಶಬ್ದ ಬೆಳಕುಗಳನ್ನು ಮೀರಿ, ಬಾಹ್ಯಾಕಾಶದ ಅವಕಾಶ, ಟೆಲಿಕಮ್ಯೂನಿಕೇಶನ್‌ಗಳನ್ನೂ ದುಡಿಸಿಕೊಳ್ಳಾಗಿದೆಯಲ್ಲದೆ ಹೊಸ ಹೊಸ ಮಾಧ್ಯಮಗಳ ಸಾಧ್ಯತೆಗಳತ್ತ ಕಲಾವಿದರು /ಕಲಾವಿದೆಯರು ಕೈಚಾಚುತ್ತಲೇ ಇದ್ದಾರೆ. Virtual reality ಯ ಬಗ್ಗೆಯೂ ಗಮನ ಹರಿದಿದೆ. ಜಾಗತಿಕವಾಗಿ ಹಲವು ಬೆಳವಣಿಗೆಗಳ ನಡುವೆ 'revenge of the intellect upon art'[3] ನಂತೆ ಎಚ್ಚರಗೊಂಡು ಸ್ಥಳೀಯ ಸಾಂಪ್ರದಾಯಿಕ ಮಾಧ್ಯಮ ಪದಾರ್ಥಗಳನ್ನೂ ಮತ್ತೆ ಬಳಕೆಯಲ್ಲಿ ತರುವ ಹಲವು ಮಹತ್ವದ ಪ್ರಯತ್ನಗಳೂ ವಿಶ್ವದ ಎಲ್ಲೆಡೆ ನಡೆದಿವೆ. ಈ ಹಿನ್ನಲೆಯಲ್ಲಿ ಸಮಕಾಲೀನ ಅಭಿವ್ಯಕ್ತಿಯು ಚಿತ್ರ, ಶಿಲ್ಪ, ಪ್ರಿಂಟ್, ಮಾಧ್ಯಮಗಳ ಸಾಧ್ಯತೆಗಳನ್ನು ಮೀರಿ ಇನ್‌ಸ್ಟಾಲೇಷನ್ ಕಲೆಯ ಪ್ರಕಾರವನ್ನೂ ಅರಿಗಿಸಿಕೊಳ್ಳಲು ಇತ್ತೀಚೆಗೆ ಹೆಚ್ಚು ಗಂಭೀರವಾಗಿ ಕಾಣಿಸಿಕೊಳ್ಳುತ್ತಿದೆ. ಇಂದು ತಮ್ಮ ಸಾಧ್ಯತೆಗಳ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವ, ಅಭಿವ್ಯಕ್ತಿಯ ಮಾಧ್ಯಮಗಳಲ್ಲಿ ಅಪೂರ್ವ ಅನುಭವಗಳನ್ನು ಉಂಟು ಮಾಡುವ ಸೃಷ್ಟಿ ಪ್ರಕ್ರಿಯೆಯಲ್ಲಿ ನಮ್ಮ ಕಲಾವಿದ/ಕಲಾವಿದೆಯರು ನಿರತರಾಗಿದ್ದಾರೆ. ಸಂಪ್ರದಾಯ, ಕುಶಲತೆಗಳನ್ನು ಮೀರಿ ವಸಾಹತುಶಾಹಿ ಹಿನ್ನಲೆಯ



ಇದು ಇನಾಸ್ಟಾಲೇಷನ್ ಅಭಿವ್ಯಕ್ತಿ ಅಲ್ಲ. ಮಹಾಬಲಿಪುರದ ಕಲ್ಲಿನ ಅಪೂರ್ಣ ರಥಗಳು, ಪಲ್ಲವ ಅರಸರ ಆಶ್ರಯ-ಆಣತಿಯ ಕಾರಣಕ್ಕಾಗಿ ಮೂಡಿ ಬಂದ ಕೃತಿಗಳಿವು. ಚಿತ್ರ-1

ಆಧುನಿಕ, ಆಧುನಿಕೋತ್ತರ ದೃಷ್ಟಿ, ಧೋರಣೆಗಳ ಪ್ರಭಾವದಿಂದ ಬಿಡುಗಡೆಗೊಂಡು ಅನನ್ಯವಾಗಿ ಅಭಿವ್ಯಕ್ತಿಸುತ್ತಿದ್ದಾರೆ. ಇಲ್ಲಿ ಕನ್ನಡದ, ಜಾಗತೀಕರಣದ ಫಲವಾಗಿ ಕರ್ನಾಟಕದ ಸಂಸ್ಕೃತಿಯ ಎಚ್ಚರದಂತೆ ದೇಶೀ ಅನುಭವದ ಗ್ರಹಿಕೆಗಳು ತೀವ್ರತೆಯಿಂದ ಕಾಣಿಸಿಕೊಳ್ಳುತ್ತಿವೆ.

ನಮ್ಮ ಶಿಲ್ಪಕಲೆಯ ಪ್ರಥಮಪಲ್ಲಟ ಈ ಶತಮಾನದ ಮೊದಲೆರಡು ದಶಕಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿತು. ಆನಂತರದ ಮೂರು ನಾಲ್ಕನೆಯ ದಶಕಗಳಲ್ಲಿ ಹೆಚ್ಚು ಗಾಂಭೀರ್ಯದಿಂದ ಕಾಣಿಸಿಕೊಂಡಿತು. ಈ ಪಲ್ಲಟ ಪಶ್ಚಿಮದಂತೆ ಹಿಂದಿನ ಸಂಪ್ರದಾಯಕ್ಕೆ ತಿರುಗೇಟು ನೀಡಲು ರೂಪುಗೊಂಡದ್ದಲ್ಲ. ಬ್ರಿಟೀಷರ ವಿಕ್ಟೋರಿಯನ್ ಪ್ರಭಾವದ ಅಕೆಡೆಮಿಕ್ ಶೈಲಿಯನ್ನು ಕಾಲಕಾಲಕ್ಕೆ ಹಲವು ಬದಲಾವಣೆಗಳ ಮರುಗು ನೀಡಿ ನಮ್ಮ ಮೂಲ ನೆಲೆಯ ಸತ್ವಗಳನ್ನು ಸಂಯೋಜಿಸಿಕೊಳ್ಳುವವರಿಗೆ ಬೇಕಾಗುವಂತೆ ರೂಪಿಸಿದ

ಶಿಲ್ಪಕಲೆ ಅಂದಿನದು. ಶತಮಾನಗಳ ಹಿಂದಿನ ಗುಹಾಲಯ, ದೇವಾಲಯಗಳ ಒಳ-ಹೊರ-ಭಿತ್ತಿ-ಸೂರು, ಗೋಪುರಗಳ ಖಾಲಿ ಅವಕಾಶಗಳನ್ನು ತುಂಬುವ ಉದ್ದೇಶದ ಶಿಲ್ಪ ಸೃಷ್ಟಿಯಿಂದ ನಮ್ಮವರು ಬಹುದೂರ ನಡೆದು ಬಂದರೆಂಬುದು ಗಮನಾರ್ಹ. ಆದರೆ ಪಶ್ಚಿಮ ಹಾಗೂ ಯೂರೋಪಿನ ಪ್ರಭಾವದ ನೆರಳಿನಲ್ಲಿಯೂ ಪ್ರಾಯೋಜಿಸಿದವರೊಂದಿಗೆ ರಾಜಿಯಾಗದೆ ಶಿಲ್ಪಗಳನ್ನು ಸೃಷ್ಟಿಸಿದವರ ಪಟ್ಟಿ ಬೆಳೆಯುತ್ತ ಬಂದಿದೆ. ಇವರೆಲ್ಲ ಶಿಲ್ಪದ ಸಾಧ್ಯತೆಗಳನ್ನು ಹುಡುಕಿಕೊಂಡು ಹೊರಟವರು. ಈ ಸಾಧ್ಯತೆಗಳ ವ್ಯಾಪ್ತಿಯನ್ನು ಮೀರಲು ಇವರೆಲ್ಲ ನಡೆಸಿದ ಪ್ರಯತ್ನಗಳು ನಮ್ಮ ಸಮಕಾಲೀನ ಕಲೆಯ ಅಭಿವ್ಯಕ್ತಿಗೆ ಹೊಸ ಪುಟಗಳನ್ನು ಸೇರ್ಪಡೆ ಮಾಡುತ್ತಲೇ ಇವೆ. ಕನ್ನಡದ ಕಲಾವಿದರು ಕಲಾವಿದೆಯರು ಈ ಹೊಸ ಪುಟಗಳಲ್ಲಿ ಕಾಣಿಸಿಕೊಂಡಿರುವ ರೀತಿಯ ಹಿನ್ನೆಲೆಯ ವಿಶಿಷ್ಟ ಪ್ರಯತ್ನಗಳು ಉದ್ದೇಶ ಪೂರ್ವಕವಾದವು; ಆಕಸ್ಮಿಕ ಬೆಳವಣಿಗೆಗಳಲ್ಲ. ಚಿತ್ರ, ಶಿಲ್ಪ, ಪ್ರಿಂಟ್ ಮಾಧ್ಯಮಗಳ ಹಲವಾರು ಹಳೆಯ -ಹೊಸ ತಂತ್ರಗಳ ಸೃಷ್ಟಿಗಳೇ ಅಲ್ಲದೆ ಮಿಶ್ರಮಾಧ್ಯಮದ ಸೃಷ್ಟಿಗಳೂ ಅವುಗಳ ಸಂದರ್ಭದಲ್ಲಿ ಆಸಕ್ತಿಯನ್ನು ಉಂಟುಮಾಡಿದ್ದವು. ಹಣ, ಖ್ಯಾತಿ, ಗ್ಯಾಲರಿ ಸಂಸ್ಕೃತಿಗಳನ್ನು ಮೀರಿ ಸೃಷ್ಟಿಸಲು ಪ್ರಯತ್ನಿಸಿದವರು ಒಬ್ಬರೂ ಕಾಣುವುದು ಸಾಧ್ಯವಿಲ್ಲವೇನೋ ಅನ್ನುವಂತಹ ರೀತಿಯ ಈ ಎಲ್ಲವುಗಳ ಪ್ರಭಾವ, ಅನಿವಾರ್ಯತೆಗಳ ಸಂದರ್ಭ. ಈ ಎಲ್ಲದರ ನಡುವೆಯೇ ಹೊಸ ಬೆಳಕಿಂಡಿಗಳನ್ನು ಕಂಡುಕೊಳ್ಳುವ ಹಸಿವು ಕೆಲವರಿಗೆ ಉಂಟಾಗಿರಲೇಬೇಕು. ಕಾನ್ಸೆಪ್ಚ್ಯುಯಲಿಸಂನ ತತ್ವದ 'ಅಭಿವ್ಯಕ್ತಿಗೆ ಕಾರಣಾಗುವ ವಿಶಿಷ್ಟ ಸಂದರ್ಭ ಸೃಷ್ಟಿಗೆ ಕಲಾವಿದರೇ ಕಾರಣರಾಗುತ್ತಾರೆ[4]' ಎಂಬ ಭಾವನೆ ತಂದುಕೊಟ್ಟ ಹೊರಗಿನ ಮನಃಶಾಸ್ತ್ರೀಯ ಅಧ್ಯಯನಗಳ ವಾತಾವರಣ, ಪ್ರಭಾವ, ಇತ್ಯಾದಿಗಳು ನಮ್ಮ ಕಲಾವಿದರು ಹೊಸ ಸ್ಫೂರ್ತಿಯಿಂದ ಸೃಷ್ಟಿಸುವ ಭೂಮಿಕೆಯನ್ನು ಹುಟ್ಟುಹಾಕಿದವು.

ಇದು ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಅಲ್ಲ,
ಕೃಷಿಯ ಉದ್ದೇಶಕ್ಕಾಗಿ ರೈತರೊಬ್ಬರ ಸೃಷ್ಟಿ.

ಚಿತ್ರ-2





ಇದು Earth Art ಅಲ್ಲ,
ನಮ್ಮ ಕಡಲತೀರದ ಸಹಜ ದೃಶ್ಯ.

ಚಿತ್ರ-3




ಚಿತ್ರ-4

ಇದು
ಇನ್‌ಸ್ಟಾಲೇಷನ್
ಅಭಿವ್ಯಕ್ತಿ ಅಲ್ಲ.
ಹೊಸ ಕಟ್ಟಡಗಳಿಗೆ
''ದೃಷ್ಟಿ'' ಆಗದಂತೆ
ಟಾರ್ಪಾಲಿನ್
ಮತ್ತಿತರ ತೆರೆಗಳನ್ನು
ಮುಚ್ಚುವುದು ನಮ್ಮಲ್ಲಿ
ಸಹಜ ಕ್ರಿಯೆ. 2008.

ದೃಶ್ಯ ಸಂಸ್ಕೃತಿಯು ಕಲಾವಿದರ ಗ್ರಹಿಕೆಯ ಅನುಭವದ ಅಭಿವ್ಯಕ್ತಿಯಲ್ಲಿ ಬದಲಾದ ಬದುಕಿನ ಆಶಯಗಳಿಗೆ ಸೂಕ್ತವಾಗಿ ಹೊಂದಿಕೊಳ್ಳುವ ಕೆಲವೊಮ್ಮೆ ಅಸಾಮಾನ್ಯವೆನ್ನುವ ಹಾದಿಗಳನ್ನು ಹುಡುಕುವ ಸಂಕೀರ್ಣ ಮಾನಸಿಕ ಪ್ರವೃತ್ತಿ ವಿಶ್ವಾತ್ಮಕವಾಗಿ ಮುಂದುವರೆಯಿತು. ಕಲೆ ಎಂದರೆ ಸೌಂದರ್ಯ ಎಂಬುದನ್ನು ಧಿಕ್ಕರಿಸಿ ಕೇವಲ ಅನುಭವದ ಅಭಿವ್ಯಕ್ತಿ ಎಂಬ ಎಚ್ಚರ ಉಂಟಾಯಿತು.[5] ಇನ್‌ಸ್ಟಾಲೇಷನ್ ಕಲೆಯು ಹೊಸ ರಿಯಲಿಸಂಗೆ ಧಾವಿಸಿತು. ಲೌಕಿಕತೆ ಮತ್ತು ವೈಯಕ್ತಿಕತೆಗಳನ್ನು ಇಲ್ಲಿ ನೇರಹಾದಿಗಳಿಂದ ನೈಜವಾಗಿ ಪುನರ್ ಕಲ್ಪಿಸಿಕೊಳ್ಳುವ, ರೂಪಿಸುವ ಸಾಧ್ಯತೆಗಳನ್ನು ಕಂಡುಕೊಳ್ಳಲಾಯಿತು.

1960ರಲ್ಲಿ[6] ಬಾಲ್ಯಾವಸ್ಥೆಯಲ್ಲಿದ್ದ ಇನ್‌ಸ್ಟಾಲೇಷನ್ ಕಲಾಪ್ರಕಾರ ಇಂದು ಮಾರ್ಸೆಲ್ ಡುಷಾಂಪ್, ಕ್ಲೇಸ್ ಓಲ್ಡೆನ್‌ಬರ್ಗ್, ಆಂಡಿ ವಾರ್ಹೊಲ್, ರಾಬರ್ಟ್ ಸ್ಮಿತ್‌ಸನ್, ಜೋಸೆಫ್ ಬುಯ್ಸ್, ಕ್ರಿಸ್ಟೋ ಮತ್ತಿತರರ ಕೊಡುಗೆಗಳ ಕಾರಣ ವಿಶ್ವದ ಎಲ್ಲೆಡೆ ಪರಿಚಿತವಾಗಿದೆ. ಸಂಗೀತಗಾರ ವಾಗ್ನರ್‌ನ 'gesamtkunstwerk' ಕಲ್ಪನೆ ಇನ್‌ಸ್ಟಾಲೇಷನ್ ಕಲೆಯ ಬೇರುಗಳಲ್ಲೊಂದಾಗಿ ಪರಿಗಣಿಸಲ್ಪಟ್ಟಿದೆ. ಈ ಕಲ್ಪನೆ ದೃಶ್ಯಕಲೆಯ ಹಲವು ರೂಪ, ದೇಹವನ್ನು ದುಡಿಸಿಕೊಂಡ ಅಭಿನಯ, ಇತ್ಯಾದಿಗಳ ಒಟ್ಟುಗೂಡಿಸಿದ ಕಾರ್ಯಕ್ರಮ, ವೇದಿಕೆಯೊಂದರ ಮೇಲೆ ಕಾಣಿಸಿಕೊಳ್ಳುವ ಸಂದರ್ಭ ವೀಕ್ಷಕರಿಗೆ ಹೊಸ ಅನುಭವಕ್ಕೆ ಕಾರಣವಾಯಿತು. ವಾಗ್ನರನ ಕಲ್ಪನೆ Futurists, Dadaists, constructivists ಮತ್ತು Bauhausರ ಧೋರಣೆ, ದೃಷ್ಟಿಕೋನ, ತತ್ವಗಳನ್ನು ಅರಗಿಸಿಕೊಂಡಂತಿದೆ. ಅದೊಂದು ಹೊಸ ಪ್ರಯೋಗಾತ್ಮಕ, ಅನ್ವೇಷಣಾತ್ಮಕ ಮತ್ತು ಸ್ಥಾಪಿತ ಸಾಂಸ್ಕೃತಿಕ ವ್ಯವಸ್ಥೆಗಳ ವಿರುದ್ಧದ ಹೊಸ ಸಂಸ್ಕೃತಿಯಾಗಿ ಪ್ರಚೋದನಾತ್ಮಕವಾಗಿ ಕೆಲಸ ಮಾಡಿತು. 50ರ ದಶಕದ ಅಂತಿಮ ವರ್ಷಗಳ ನಂತರ ಇಂದು ನಾವು ಹೇಳುವ ಇನ್‌ಸ್ಟಾಲೇಷನ್ ಕಲಾ ಪ್ರಕಾರಕ್ಕೆ ಪ್ರಾರಂಭದ ಉದಾಹರಣೆಗಳಂತಹ ಅಭಿವ್ಯಕ್ತಿಗಳು ಮೂಡಿಬರಲು ಈ ಪ್ರಯೋಗ ಕಾರಣವಾಯಿತು.[7] ಹಾಗೆಯೇ ಈ ಕಲಾ ಪ್ರಕಾರಕ್ಕೆ ಪೋಷಕವಾಗುವಂತೆ, ರೋಲ್ಯಾಂಡ್ ಬಾರ್ಥೆಸ್ 'The Death of the Author' ನ ಅಂಶಗಳಿವೆ. 1968ರ ಪ್ಯಾರೀಸಿನ ರಾಜಕೀಯ ಏರಿಳಿತಗಳು, ಸುತ್ತಲಿನ ಬದುಕು ಅವನನ್ನು ಸ್ಪಂದಿಸಿವೆ. ಇನ್‌ಸ್ಟಾಲೇಷನ್ ಕಲೆಯ ಇತಿಹಾಸ ಬಾರ್ಥೆಸ್‌ನ ದೃಷ್ಟಿಯನ್ನು ವಿವರಿಸಿದಂತಿದೆ. ಇನ್‌ಸ್ಟಾಲೇಷನ್ ಕಲೆಯ ಪ್ರಕಾರದ ಅಭಿವ್ಯಕ್ತಿಯ ಮುಖ್ಯಧಾತು ಮತ್ತು ಅವಕಾಶದ (Space)ಪರಿಕಲ್ಪನೆಗಳು ಬೆಳೆದು ಬಂದ ಇತಿಹಾಸ ವಾಸ್ತುಶಿಲ್ಪ, ಚಿತ್ರ, ಶಿಲ್ಪ, ಸಂಗೀತ, ನೃತ್ಯಗಳ ಇತಿಹಾಸದಷ್ಟೆ ಸುದೀರ್ಘವಿದೆ[8] ಎಂದೂ ಹೇಳುವವರಿದ್ದಾರೆ. ಈ ಕಲೆಯ ಅಭಿವ್ಯಕ್ತಿಯ ವಿವಿಧ ಕಲಾ ಪ್ರಕಾರಗಳಾದ ವಾಸ್ತುಶಿಲ್ಪ, ಶಿಲ್ಪ, ಶಬ್ದ, ಚಲನೆ, ಮತ್ತು ಸಾಂಪ್ರದಾಯಿಕ, ಬಹುಸಾಂಸ್ಕೃತಿಕ ಆಚರಣೆಗಳು ಹಾಗೂ ಅವುಗಳ 'ಸೈಟು'ಗಳೊಂದಿಗಿನ ಅವಿನಾಭಾವ ಸಾಧಿತ ಸಂಬಂಧವೂ ವಿಶಿಷ್ಟ ಆಯಾಮಗಳನ್ನು ಪಡೆದುಕೊಳ್ಳುತ್ತ ಸಾಗಿದೆ.[9]

20ನೆಯ ಶತಮಾನದ ಉದ್ದಕ್ಕೂ ದೃಶ್ಯಕಲೆಯ ಪುಟಗಳಲ್ಲಿ ಹಲವು ಪಲ್ಲಟಗಳನ್ನು ಕಾಣುತ್ತೇವೆ.[10] ವ್ಯಕ್ತೀಕರಿಸಿದ ಕಲೆಯ ರಾಜಕಾರಣ 'the personal is political' ಆದುದನ್ನೂ ಗಮನಿಸಬಹುದು. 'ವಸ್ತು' 'ಅರ್ಥ' ಇವುಗಳ ನಿರಾಕರಣೆ



ಚಿತ್ರ-5

ಇದು ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಅಲ್ಲ. ಬೆಂಗಳೂರಿನ ತೋಟಗಾರಿಕೆ ಇಲಾಖೆಯು ಗಿಡಗಳನ್ನು ಸಂರಕ್ಷಿಸಲು ಜೋಡಿಸಿಟ್ಟ ಒಣ ಕೊಂಬೆಗಳ ತಡೆಗಟ್ಟು. 2007.



ಚಿತ್ರ-6

ಇದು ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಅಲ್ಲ. ಹಾಸನದ ಬಳಿಯ ದೇವಾಲಯವೊಂದರ ದೃಶ್ಯ. ತಮ್ಮ ತೊಂದರೆಗಳನ್ನು ಪರಿಹರಿಸಲು ಜನರು ಈ ದೇವಸ್ಥಾನದ ಬಾಗಿಲಿಗೆ ಬೀಗ ಹಾಕುವ ಪರಂಪರೆ.



ಚಿತ್ರ: ಕೆ.ವಿ.ಎಸ್.

ಚಿತ್ರ-7

ಇದು ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಅಲ್ಲ. ಬೆಂಗಳೂರಿನ ವಿಶ್ವೇಶ್ವರಯ್ಯ ಗೋಪುರದ ಪೊಲೀಸ್ ಠಾಣೆಯ ಆವರಣದಲ್ಲಿ ವಾರಸುದಾರರಿಗೆ ಕಾಯುತ್ತಿರುವ ಅನಾಥ ಕಾರು. 2008.

ಅನುಭವದ ಪ್ರಾಮುಖ್ಯತೆಗೆ ಒತ್ತು ನೀಡಲಾರಂಭಿಸಿದ ನಂತರವೂ ಅಣಕದಂತೆ ಇವೆಲ್ಲವುಗಳನ್ನು ಅರಗಿಸಿಕೊಂಡಂತೆಯೂ ಅಭಿವ್ಯಕ್ತಗಳು ಕಾಣಿಸಿಕೊಂಡವು. ಸಮೂಹ ಕಲೆಯ Elimination ತತ್ವವೂ ಸ್ವಲ್ಪ ಸದ್ದು ಮಾಡಿತು.[11] ವೈಜ್ಞಾನಿಕ ಸಾಧನೆಗಳ, ತಾಂತ್ರಿಕ ಸಾಧ್ಯತೆಗಳು 'Matter' ಮತ್ತು 'Spatiality'ಗಳ ಅಗೋಚರ ಒಳಸಂರಚನೆಗಳು ಹಾಗೂ ಚಲನಶೀಲತೆಗಳ ಪದರಗಳನ್ನು ತೆರೆದಿಟ್ಟು ಪರಿಚಯಿಸಿದವು. ರೂಪ ಮತ್ತು ಅದು ನಿಂತಸ್ಥಳ, ರೂಪ ಮತ್ತು ಸುತ್ತಲಿನ ಅವಕಾಶಗಳ ಪರಸ್ಪರ ಸಂಬಂಧದ ಬಗ್ಗೆ ದೃಶ್ಯಕಲಾವಿದರು ಹೊಸ ರೀತಿಯಲ್ಲಿ ಚಿಂತಿಸಲಾರಂಭಿಸಿದರು. ಒಂದು ಕಲಾಕೃತಿಯನ್ನು ಪ್ರದರ್ಶಿಸುವಾಗ ಸುತ್ತಲೂ ಗೋಡೆಗಳಿರುವ, ಹಾಗೂ ಸುತ್ತಲೂ ಗೋಡೆಗಳಿಲ್ಲದ ಅವಕಾಶದ(space) ನಡುವೆ ವೀಕ್ಷಕರನ್ನಿಟ್ಟು, ಕಲ್ಪಿಸಿಕೊಳ್ಳಲಾಯಿತು. 'ನಿರ್ದಿಷ್ಟ,' 'ಅನಿರ್ದಿಷ್ಟ'ಸ್ಥಳಗಳ ನಡುವೆ ಅಭಿವ್ಯಕ್ತಿಸುವ ಪ್ರಕ್ರಿಯೆಯ ಬಗ್ಗೆ ಧ್ಯಾನಿಸಲಾಯಿತು.




ಚಿತ್ರ-8

ಇದು Earth Art /
ನೆಲಾಕೃತಿ ಅಲ್ಲ
ಮೈಸೂರಿನ ಹತ್ತಿರದ ಒಂದು
ಕಾಲುವೆ
ಕಾಮಗಾರಿ.



ಚಿತ್ರ-9

ಇದು ಇನ್‌ಸ್ಟಾಲೇಷನ್
ಅಭಿವ್ಯಕ್ತಿ ಅಲ್ಲ
ಒಂದು ನಂಬಿಕೆಯ
ಆಚರಣೆ




ಚಿತ್ರ-10 *ಬೆರ್‌ಟ್ರಾಂಡ್ ಲೇವಿಯರ್‌ರವರ "Giulietta", 1993, Crashed Alfa-Romeo ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ನೋಟ.*

ಸ್ಥಳವೊಂದರ ಸಹಜ ಮೇಲ್ಮೈ ಗುಣಲಕ್ಷಣಗಳು, ದೃಶ್ಯಧ್ಯಾನದ ವಾಸ್ತುಶಿಲ್ಪೀಯ ಲಕ್ಷಣಗಳು ಹಾಗೂ ಸಾಂಸ್ಕೃತಿಕ ಪ್ರಾಮುಖ್ಯತೆ ಇತ್ಯಾದಿಗಳೆಲ್ಲವೂ ಕಲಾವಿದ/ಕಲಾವಿದೆಯೊಬ್ಬರ ಅಭಿವ್ಯಕ್ತಿಯ ಒಳಗಿನ ಜೀವಂತಿಕೆಯ ಸತ್ವಗಳಾಗಿ ಸಹಕರಿಸುವ ಅಂಶಗಳು ಪರಿಗಣನೆಗೆ ಬಂದವು. ಈ ಎಲ್ಲ ಅಂಶಗಳೊಂದಿಗೆ ಕಲಾವಿದನು/ಳು ಮುಖಾಮುಖಿಯಾಗಲೇ ಬೇಕಾದ ಸಂದರ್ಭ ಸೃಷ್ಟಿಯಾಯಿತು. ಒಂದು ಕಟ್ಟಡದ ರಚನೆಯ ಮೇಲಿಟ್ಟ ಟೆಲಿಫೋನ್ ಹೇಗೆ ಆ ಫೋನನ್ನು ಬಳಸುವವನ 'ದೇಹ ಮತ್ತು ಮನಸ್ಸು'ಗಳನ್ನು ಹೊರಗಿನ ಇತರ ಟೆಲಿಫೋನ್ ಜಾಲ ಬಂಧಗಳೊಂದಿಗೆ ವಿಸ್ತರಿಸುತ್ತದೆಯೋ ಹಾಗೆ ಇಲ್ಲಿ ಕಲಾವಿದನು/ಕಲಾವಿದೆಯ ಚಟುವಟಿಕೆಗಳು

ಅಭಿವ್ಯಕ್ತಿಯನ್ನು 'ಸ್ಥಳ' ಮತ್ತು ಅದರ'ಸಂದರ್ಭ'ದೊಂದಿಗೆ ಕಲ್ಪನಾತ್ಮಕ ಹಾಗೂ ದೈಹಿಕವಾಗಿ ಒಟ್ಟುಗೂಡಿಸುತ್ತವೆ. ಇಂತಹ ಇನ್‌ಸ್ಟಾಲೇಷನ್‌ಕಲೆಯ ವೀಕ್ಷಕರಿಗೆ ಅಡ್ಡಿ-ಅಡ್ಡಗೋಡೆಗಳಾಗದ ದೈಹಿಕ, ಸಂವೇಧನಾವಾಹಕ ಲಕ್ಷಣಗಳು, ನೈಜ ಅವಕಾಶ ನೈಜ ಕಾಲ, ಶಬ್ದ, ಪದಾರ್ಥ, ಮಣ್ಣಿನ ವಾಸನೆ ಇವುಗಳೆಲ್ಲವೂ ನೋಡುಗರಿಗೆ ಹತ್ತಿರವಾಗಿ ಎಲ್ಲದರ ನಡುವೆ ನಡೆದಾಡುವಂತಾಗುತ್ತದೆ. ಅದರ ಅವಿಭಾಜ್ಯ ಅಂಗವೇ ತಾನು ಎಂಬಂತೆಯೂ ಆಗುತ್ತದೆ. ಹೀಗಾಗಿ ಕಲಾವಿದನ /ಕಲಾವಿದೆಯ ಅಭಿವ್ಯಕ್ತಿಗೆ ಜೀವಂತಿಕೆ ಉಂಟಾಗುತ್ತದೆ. ಕಲಾವಿದನ/ಕಲಾವಿದೆಯ ದೇಹ, ಮನಸ್ಸುಗಳು, ವೀಕ್ಷಕರ ದೇಹ ಮನಸ್ಸುಗಳೊಂದಿಗೆ ಸೌಂದರ್ಯಾತ್ಮಕ 'ತುರ್ತು, ಸಂಪರ್ಕ ಸಾಧಿಸಲ್ಪಡುತ್ತವೆ.[12] ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ತಾಂತ್ರಿಕತೆಗಳು ನೋಡುಗನು ತನ್ನ ದೇಹ ಹಾಗೂ ಮನಸ್ಸುಗಳನ್ನು ಇನ್‌ಸ್ಟಾಲೇಷನ್ ಅವಕಾಶದಲ್ಲಿ ವಿಸರ್ಜಿಸಿ ಅನುಭವಿಸಲು ಹೊಸ ಹೊಸ ಸಾಧ್ಯತೆಗಳನ್ನೂ ಉಂಟುಮಾಡಬಲ್ಲವು. ಈ 'ಅವಕಾಶ'ದ (Space) ಪಾತ್ರ ಹಿಂದಿಗಿಂತಲೂ ಇಂದು ಹೆಚ್ಚು ಮುಖ್ಯವಾಗಿದೆ. 20ನೆಯ ಶತಮಾನದ ಪಶ್ಚಿಮ ಹಾಗೂ ಯೂರೋಪಿನ ದೃಶ್ಯಕಲೆಯಲ್ಲಿ 'Figure' ಅಥವಾ 'object'ಗೆ ನೀಡಲಾಗುತ್ತಿದ್ದ

ಕೆ.ಟಿ. ಶಿವಪ್ರಸಾದ್‌ರವರ ಒಂದು ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ನೋಟ. ಚಿತ್ರ-11





ಚಿತ್ರ-12ಎ. 12ಬಿ

ಶಕುಂತಲಾ ಕುಲಕರ್ಣಿಯವರ "MAZE" ಒಂದು ಸ್ಥಳ ನಿರ್ದಿಷ್ಟ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ಎರಡು ನೋಟಗಳು. 1998.



ಪ್ರಾಮುಖ್ಯತೆ 'ground'ನತ್ತ ಹರಿಯಿತಷ್ಟೆ.[13] ಬಹುಮುಖ್ಯವಾಗಿ ಕಲಾವಿದ/ ಕಲಾವಿದೆಯರು ಹಣ, ಗ್ಯಾಲರಿ, ಮಾರಾಟ ಇತ್ಯಾದಿಗಳ ರಾಜಕಾರಣದಿಂದ ರೋಸಿಹೋಗಿ ಸರಕು ಸಂಸ್ಕೃತಿಯಿಂದ ಕಲೆಯನ್ನು ಬಿಡುಗಡೆಗೊಳಿಸಲು ತಮ್ಮ ದೃಷ್ಟಿಯನ್ನು ಇನ್‌ಸ್ಟಾಲೇಷನ್ ಕಲೆಯತ್ತ ಬೀರಿದರು. 'Installation, as a generic term, covers a large area of practice and enquiry within contemporary art. It is suggestive of the notion of exhibition' or 'display' and of an actual activity which is to day as widespread as any other way of making art' ಎನ್ನುವ ನಿಕೋಲಾಸ್ ಡೇ ಆಲಿವೈರಾ, ನಿಕೋಲಾ ಆಕ್ಸ್‌ಲೇ ಮತ್ತು ಮೈಖೇಲ್ ಪೆಟ್ರಿಯವರುಗಳು 'Installation art' ಗ್ರಂಥದ ಮುನ್ನುಡಿಯಲ್ಲಿ ಇನ್‌ಸ್ಟಾಲೇಷನ್ ಕಲೆಯ Ultimate definitionಅನ್ನು ಹೀಗೇ ಎಂದು ಸ್ಪಷ್ಟವಾಗಿ ಹೇಳಲಾಗದು ಎಂದು ಹೇಳುತ್ತಾರೆ. ಇಂದಿಗೂ ಹಲವು ಹೊಸ ಹೊಸ ಸಾಧ್ಯತೆಗಳನ್ನು ತೋರುವ, ಬಹುರೀತಿಯಲ್ಲಿ ನಿರ್ವಹಿಸಿಕೊಳ್ಳಬಹುದಾದ 'ಮಣಿಯುವಿಕೆಯನ್ನು ಅರಗಿಸಿಕೊಂಡಿರುವ ಕಲಾಪ್ರಕಾರ ಇದು. ಅವರು ಇನ್ನೂ ಮುಂದುವರಿದು. 'Installation, as a hybrid discipline is made up of multiple histories, it includes architecture and performance art in its parentage and the many directions within contemporary visual arts have also exerted their influence..... Installation works may be created on the site and later recreated else where, dates and titling can some times be variable, the same work or a slightly altered work may appear with different dates and titles' ಎಂದೂ ಉದ್ಗರಿಸುತ್ತಾರೆ (1994)

ಇನ್ನೂ ಕೆಲವರ ವಿವರಣೆಗಳನ್ನು ಗಮನಿಸಿ. An 'Installation', however, is usually formed of many components or at least several. Materials are diverse and complex' - *S.G.Conklin*[14]

Installation art is art that, through the use of sculptural materials and other media, seeks to modify the way we experience a particular space.

Installation art is not necessarily confined to galley space and can refer to any material intervention in every day public or private spaces.

-From wikipedia, the free encyclopedia

Installations to day are often moveble piecess, not the least ephemeral transported from exhibition to exhibition, sometimes with slight timely adoptations to fit a more peculiar context.

-Lamoureux canadian art historian.

"Ability to form a perceivable space, modelled or aranged towards the presence of the viewer"

- Oskar batchmann German art historian


ಇಂತಹ ಹಲವಾರು ವಿವರಣೆಗಳನ್ನು ದಾಖಲಿಸುತ್ತಾ ಹೋಗಬಹುದು. ಆದರೆ ಈ ಬೆಳವಣಿಗೆಯ ನಡುವೆ ಪ್ರಕಟಗೊಂಡ ಈ ಅಭಿಪ್ರಾಯ ಓದಿ 'Half or more of the best new work in the last few years has been neither painting nor sculpture. Usually it has been related closely or distantly, to one or the other the work is diverse, and much in it that is not in painting and sculpture is also diverse. But there are some things that occur nearly in common..... The disinterest in painting and sculpture is a disinterest in doing it again.....'[15]

- Judd in 'Specific objects,' P.74

ಕ್ರಿಸ್ಪೈನ್ ಮಿಚೈಲ್, 'ಯಂತ್ರ' Khoj-2001 ರ ಒಂದು ಇನ್‌ಸ್ಟಾಲೇಷನ್ ಅಭಿವ್ಯಕ್ತಿ.
Medium/ Material : Lime, red Chillies, Turmeric, Mustard plants and Mango Trees


ಚಿತ್ರ-13





ಚಿತ್ರ - 14

ನವಜೋತ್ ಅಲ್ತಾಫ್ ಮಧ್ಯಪ್ರದೇಶದ ಆದಿವಾಸಿ ಮಹಿಳಾ ಕಲಾವಿದೆಯರೊಂದಿಗೆ ಸೃಷ್ಟಿಸಿದ ಬೋರ್‌ವೆಲ್. 2002.



ಚಿತ್ರ - 15

ಬಸ್ತಾರಿನ ಆದಿವಾಸಿ ಕಲಾವಿದೆಯರೊಂದಿಗೆ ಸೇರಿ ನವಜೋತ್ ಅಲ್ತಾಫ್ ಸೃಷ್ಟಿಸಿದ Naplar Project, 2001 *ನೆಯ ಒಂದು ನೋಟ.*

ಇಲ್ಲಿ ಸಾರ್ವಜನಿಕ ಕಲೆ ತನ್ನ ಸೌಂದರ್ಯಾತ್ಮಕ ಅಂಶದ ಜತೆಜತೆಗೇ 'ಉಪಯುಕ್ತತೆ'ಯನ್ನೂ ಅಳವಡಿಸಿಕೊಂಡಿದೆ.

ಇನ್‌ಸ್ಟಾಲೇಷನ್ ಆರ್ಟ್ ಪ್ರಕಾರದ ಎಲ್ಲೆಗಳನ್ನು ಗುರುತಿಸುವುದು ಇಂದಿಗೂ ಸಾಧ್ಯವಾಗಿಲ್ಲ. ಅದರ ನಿಷ್ಪಷ್ಟ ಅರ್ಥ, ಸ್ವರೂಪ ನಿರೂಪಣೆಯನ್ನು ಎಲ್ಲರಿಗೂ ಸಂತೃಪ್ತಿಯಾಗುವಂತೆ ಇಂದಿನವರೆಗೆ ಮಾಡಲಾಗಿಲ್ಲ.

ಚಿತ್ರ, ಶಿಲ್ಪಗಳಿಂದ ದೂರವಾದ ಹಲವರ ನಡವಳಿಕೆಗಳೇ ಅಭಿವ್ಯಕ್ತಿಯ ರೂಪ ಪಡೆದು ಇನ್‌ಸ್ಟಾಲೇಷನ್‌ಗಳು ಮೂಡಿಬಂದವು.[16] 20ನೆಯ ಶತಮಾನದ ಬಹುಮುಖ್ಯ

ಚಿತ್ರ - 16

ಮೈಖೇಲ್ ಸಿಂಗರ್‌ರವರ 'Lily pond ritual' ಇನ್‌ಸ್ಟಾಲೇಷನ್ ಅಭಿವ್ಯಕ್ತಿ 1975 (Bamboo and jute rope, Herriman State park, Harriman, Newyork)



ಕಲಾ ಪ್ರಕಾರಗಳಲ್ಲಿ ಒಂದಾಗಿರುವ ಇನ್‌ಸ್ಟಾಲೇಷನ್ ಕಲೆಯಲ್ಲಿ ಕಲಾವಿದ/ಕಲಾವಿದೆ ತನಗೆ ಪರಿಚಿತವಾದ ಪದಾರ್ಥ, ವಸ್ತುಗಳನ್ನು ತೆರೆದ ಅವಕಾಶದಲ್ಲಿ ದೊಡ್ಡರೀತಿಯಲ್ಲಿ ಹೊಸತನದಿಂದ ವೀಕ್ಷಕರ ಮುಂದಿರಿಸುತ್ತಾರೆ. ಈ ರಚನೆ ಬಹು ಸಂಕೀರ್ಣವೂ. ಬೃಹತ್ತಾದುದೂ ಆಗಿರಬಲ್ಲದು. ಇದರ ವ್ಯಾಪ್ತಿ ಎಷ್ಟೆಂದರೆ ಗ್ಯಾಲರಿಯ ಅವಕಾಶಮೀರಿ ಹೊರಗೆ ಪ್ರಕೃತಿಯ ನಡುವೆ ನಿರ್ದಿಷ್ಟ ಸೈಟಿನಲ್ಲಿ ಸಂಯೋಜಿಸಿ ರಚಿಸಬೇಕಾಗಬಹುದು.

1938ರಲ್ಲಿಯೇ ಮಾರ್ಸೆಲ್ ಡೂಷಾಂಪ್ 1200 ಇದ್ದಿಲು ಚೀಲಗಳನ್ನು ಗ್ಯಾಲರಿಯೊಂದರಲ್ಲಿ ಬಳಸಿ ಅಭಿವ್ಯಕ್ತಿಸಿದ್ದುಂಟು. ಹಾಗಾಗಿ ಇನ್‌ಸ್ಟಾಲೇಷನ್ ಇಡೀ ಕೊಠಡಿಯನ್ನು ಆವರಿಸಬಹುದು. ಹೊರಗಿನ ತೆರೆದ ಪ್ರಕೃತಿಯ ಅವಕಾಶವನ್ನೂ ದೊಡ್ಡ ರೀತಿಯಲ್ಲಿ ದುಡಿಸಿಕೊಳ್ಳಬಹುದು. ಬಹುಮುಖ್ಯ ಅಂಶವೆಂದರೆ ಇಲ್ಲಿ ವೀಕ್ಷಕರು ಸಹಜವಾಗಿ ಪಾಲ್ಗೊಳ್ಳುವಂತಿರಬೇಕು. ಒಂದು ರೀತಿಯಲ್ಲಿ eclectic ಆದ ಅಭಿವ್ಯಕ್ತಿ. ಆದರೆ Institutionalತತ್ವದ ವಿರುದ್ಧ ಬಂಡೆದ್ದವರ ರಾಜಮಾರ್ಗದಂತಹ ಪ್ರಕಾರ ಇದು. ಗ್ಯಾಲರಿ ಮ್ಯೂಸಿಯಂಗಳ ಹಂಗನ್ನು ಧಿಕ್ಕರಿಸಿದ ದೃಷ್ಟಿ. ಕಾಲಾ ನಂತರ ಬದಲಾದದ್ದೂ ಉಂಟು. Assemblage ಮತ್ತು Happenings ಅಭಿವ್ಯಕ್ತಿ ಪ್ರಕಾರಗಳೊಂದಿಗೆ ಇನ್‌ಸ್ಟಾಲೇಷನ್ ಕಲೆ (1960) ತನ್ನ ಬೇರುಗಳನ್ನು ಭದ್ರಪಡಿಸಿಕೊಂಡಿದೆ.

ಆ ಸಂದರ್ಭದಲ್ಲಿ Funk ಕಲಾವಿದ ಎಡ್‌ಕಿನ್ ಹೋಲಿ, ಪಾಪ್ ಕಲಾವಿದರು, Assemblageಗಳ ಜಾರ್ಜ್ ಸೆಗಾಲ್, ಕ್ಲೇಸ್ ಓಲ್ಡೆನ್ ಬರ್ಗ್ ಮತ್ತು ಟಾಮ್ ವೆಸೆಲ್‌ಮನ್, Happenings ಗಳ ಅಲ್ಲಾನ್ ಕಾಪ್ರೊರೋವ್, ಜಿಮ್ ಡೈನ್, ರೆಡ್ ಗ್ರೂಮ್ಸ್ ಮತ್ತಿತರರು ಅಭಿವ್ಯಕ್ತಿಸುತ್ತಿದ್ದ ಸಂದರ್ಭ. 'Enivronment' ಎಂಬ ಪದವನ್ನು

ಅಮೇರಿಕಾದ ಕಲಾವಿದೆ ಜೆನ್ನಿ ಹೋಲ್‌ಝರ್‌ರವರ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ನೋಟ.
Soloman R. Guggenheim Museum, Newyork, 1989-90.
material : led sign, red granite benches.

ಚಿತ್ರ - 17



ಚಿತ್ರ - 18

Ayse Erkman ರವರ "Sculpture on air", 1997 ರ ಅಭಿವ್ಯಕ್ತಿಯ ಒಂದು ದೃಶ್ಯ.



ಆಗ ಬಳಸಲಾಗುತ್ತಿತ್ತು. ಈ ದೃಷ್ಟಿಯ ಅಭಿವ್ಯಕ್ತಿಯ ಕಲಾವಿದ/ಕಲಾವಿದೆಯರು ವೀಕ್ಷಕರನ್ನು ತಮ್ಮ ಅಭಿವ್ಯಕ್ತಿಗಳ ಜತೆ ಜತೆಗೇ ಸಮೀಕರಿಸಿಕೊಳ್ಳುವ ಮಹತ್ವಾಕಾಂಕ್ಷೆಯನ್ನು ಸಾಧಿಸಲು ಹಾಗೂ ಸಾಂಪ್ರದಾಯಿಕ ಸಾಂಸ್ಥಿಕ ಸೃಷ್ಟಿ ಪ್ರಕ್ರಿಯೆಯನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಲು ತಮ್ಮ ಸುತ್ತಲಿನ ವಾತಾವರಣವನ್ನು

ಅವಕಾಶವನ್ನು ದುಡಿಸಿಕೊಳ್ಳಲು ಪ್ರಾರಂಭಿಸಿದರು.[17] ದುಬಾರಿಯಾದ, ಯಾವದಿಕ್ಕಿನಿಂದ ಬೇಕಿದ್ದರೂ ಆ ದಿಕ್ಕಿನಿಂದ ವೀಕ್ಷಕರು ಪ್ರವೇಶಿಸಿ-ಭಾಗವಹಿಸಿ ಹೋಗಬಹುದದಾಗಿದ್ದಂತಹ ಅಭಿವ್ಯಕ್ತಿಗಳವು. ನಿರ್ದಿಷ್ಟ, ಒಪ್ಪಿತ ಅರ್ಥಗಳ, ಅನುಭವಗಳ ವಿರುದ್ಧದ, ಹೊಸ ದೃಷ್ಟಿಕೋನದ ಪರವಾದ ಚಳವಳಿಯಂತಹ ಬೆಳವಣಿಗೆ ಅದು.

ಒಂದು ರೀತಿಯಲ್ಲಿ Fluidityಯನ್ನು ಹೊಂದಿದ ಈ ಕಲಾಪ್ರಕಾರ ವೀಕ್ಷಕರನ್ನು ಪ್ರಚೋದಿಸುವ ಅಂಶಗಳನ್ನು ಮೈಗೂಡಿಸಿಕೊಂಡಿತು. ಹೀಗಾಗಿಯೇ ಜನರಿಗೆ ಹೆಚ್ಚು ಹತ್ತಿರವಾಗಿ ಜನಪ್ರಿಯವಾಯಿತು[18]. 1960[19]ರ ನಂತರ ಇನ್‌ಸ್ಟಾಲೇಷನ್‌ಕಲೆ ಹಲವು ಹಾದಿಗಳಲ್ಲಿ ವಿಭಿನ್ನ ದೃಷ್ಟಿಕೋನದ ಕಲಾವಿದ/ಕಲಾವಿದೆಯರಿಂದ ಬೆಳವಣಿಗೆ ಕಂಡಿತು. Popart, op art, Fluxus, Minimalism, performance art, sound art, kinetic art, Situationistart, International, Conceptual art, Earth art, Arte povera ಮತ್ತು site works ಮೊದಲಾದವನ್ನು ಇಲ್ಲಿ ಹೆಸರಿಸಬಹುದು.

ಜಾಸನ್ ರ್‍ಹೋಡ್ಸ್‌ರವರ "The great sea battles of wilhelm, 1994-95. ಚಿತ್ರ - 19





ಚಿತ್ರ - 20

Karsten Bott ರವರ "Von Jedem Eins" (one of each), 2001
ಒಂದು ರೀತಿಯ 'Archieve of Daily life' ನ ಒಂದು ಮುಖ.

ಈ ಬೆಳವಣಿಗೆಗಳ ನಡುವೆ ಒಂದು ನಿರ್ದಿಷ್ಟ ರೀತಿಯ ಕಲಾಪ್ರಕಾರಕ್ಕೆ Installation ಎಂಬ ಪರಿಭಾಷೆಯನ್ನು ಬಳಸಲಾಗಿದ್ದು ಮೊದಲಿಗೆ 1969ರಲ್ಲಿ.[20] ಇಂದು ನಾವು ಇನ್‌ಸ್ಟಾಲೇಷನ್ ಕಲಾಪ್ರಕಾರಕ್ಕೆ ಮೇಲ್ನೋಟಕ್ಕೆ ಹೊಂದುವಂತಹ ಹಲವನ್ನು ಇತಿಹಾಸಪೂರ್ವಕಾಲ ಹಾಗೂ ಇತಿಹಾಸ ಕಾಲಗಳೇ ಅಲ್ಲದೆ ಸಮಕಾಲೀನವಾಗಿ ಭಾರತವೇ ಅಲ್ಲದೆ ವಿಶ್ವದ ಹಲವೆಡೆ ಗಮನಿಸಬಹುದು. ಆದರೆ ಇನ್‌ಸ್ಟಾಲೇಷನ್ ಧೋರಣೆಯ ಸೃಷ್ಟಿಗಳನ್ನು ಗುರುತಿಸಿ ನಿರ್ಧರಿಸಿದ್ದೇ 20ನೇ ಶತಮಾನದ ಮಧ್ಯಭಾಗದಲ್ಲಿ! ಅದೂ ಕಲಾವಿದರ ಸಹಿ, ಅಭಿವ್ಯಕ್ತಿಗಳ ರಾಜಕಾರಣದ ಫಲವಾಗಿ. ಅಲ್ಲನ್ ಕಾಪರೋವ್ 'Environment'ಎಂಬ ಪದವನ್ನು 1958ರಲ್ಲಿ ಅವನ ರೂಪಾಂತರಗೊಂಡ ಒಳಾಂಗಣ ಅವಕಾಶಗಳನ್ನು ವಿವರಿಸಲು ಬಳಸಿದನು. ಈ ಪದದ ವ್ಯಾಪ್ತಿಗೆ 'project art' ಮತ್ತು 'temporary art' ಎಂಬ ಶಬ್ದಗಳೂ ಸೇರ್ಪಡೆಗೊಂಡವು.



ಚಿತ್ರ - 21

ಟ್ರಾಸೆ ಎಮಿನ್‌ರವರ "My Bed" (1998) ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ನೋಟ. ಕಲಾವಿದೆಯ ಖಾಸಗಿ ಮತ್ತು ಆತ್ಮ-ಚರಿತ್ರೆಯ ಹೊಳಹುಗಳ ಅಭಿವ್ಯಕ್ತಿ.

ಈ ಪ್ರಕಾರದಲ್ಲಿ ವೀಕ್ಷಕರ ಇಡೀ ದೇಹ ಹಾಗೂ (ಇಂದ್ರಿಯಗಳ) ಸಂವೇದನಾವಾಹಕಗಳ ಅನುಭವವನ್ನು ಅವಲಂಬಿಸಲಾಗಿದೆ. ಇಲ್ಲಿ 'ಕಲೆ' ಮತ್ತು 'ಬದುಕು' ಇವುಗಳೆರಡರ ನಡುವಿನ ಅಡ್ಡರೇಖೆಯನ್ನು ಇಲ್ಲವಾಗಿಸುವ ಆಶಯವಿದೆ. ಕಲೆಯನ್ನು ಮೀರಿ ಪ್ರಕೃತಿಯನ್ನು Model ಆಗಿ ಸ್ವೀಕರಿಸಿದರೆ ನಾವು ಸಾಮಾನ್ಯ ಬದುಕಿನ ದೃಷ್ಟಿಯನ್ನು ಮೀರಿದ ವಿಶಿಷ್ಟ ಕಲಾಪ್ರಕಾರವೊಂದನ್ನು ಯೋಚಿಸಬಹುದೆಂಬುದನ್ನು ಸಾಧಿಸಲಾಯಿತು.

2. ವೀಕ್ಷಕರು ಅಭಿವ್ಯಕ್ತಿಯ ಅವಿಭಾಜ್ಯ ಅಂಶವಾಗಿ...

ವೀಕ್ಷಕನ ಎಲ್ಲ ಇಂದ್ರಿಯಗಳ ಅನುಭವವನ್ನು ಪರಿಣಾಮಕಾರಿಯಾಗಿ ದುಡಿಸಿಕೊಳ್ಳುವ ಉದ್ದೇಶದಿಂದ ಕಲಾತ್ಮಕವಾಗಿ ಅವನನ್ನು ನಿರ್ವಹಿಸಿಕೊಂಡಾಗ ಉಂಟಾಗುವ ಅನುಭವದ ವಿಶಿಷ್ಟತೆಯನ್ನು 1849ರಲ್ಲಿಯೇ ರಿಚರ್ಡ್ ವ್ಯಾಗನರ್ ನೃತ್ಯನಾಟಕವೊಂದರಲ್ಲಿ ಈ ಮೊದಲೇ ಉಲ್ಲೇಖಿಸಿರುವಂತೆ ಕಂಡುಕೊಂಡ ಸಂದರ್ಭ.[20A] ಪುರಾತನ ಗ್ರೀಕ್ ರಂಗಭೂಮಿಯ ಸ್ಫೂರ್ತಿ. ಮುಖ್ಯ ಅಭಿವ್ಯಕ್ತಿಯ ಕಲಾಪ್ರಕಾರಗಳಾದ ಚಿತ್ರ, ಅಕ್ಷರ ಸಾಹಿತ್ಯ, ಸಂಗೀತ ಇತ್ಯಾದಿಗಳೆಲ್ಲವುಗಳ ಸಮ್ಮಿಲನ, ಸಂಪೂರ್ಣ ಕಲಾತ್ಮಕ ವಿಸರ್ಜನೆಯಂತಹ ವಿಶಿಷ್ಟನೆಲೆಯ ಸಾಧನೆ, ವಾಸ್ತುಶಿಲ್ಪ, ಸುತ್ತಲಿನ ವಾತಾವರಣ ಮತ್ತು ಪ್ರೇಕ್ಷಕ ವರ್ಗಗಳನ್ನು ಒಮ್ಮೆಲೇ ದುಡಿಸಿಕೊಳ್ಳಲಾಯಿತು. ನಾಟಕ ಹಾಗೂ ಇನ್‌ಸ್ಟಾಲೇಷನ್‌ಗಳ ನಡುವೆ ಒಂದು ಶಕ್ತಿಯುತ ಸಮಾನತೆ ಇದೆ. ಅದು ವೀಕ್ಷಕನ ಅವಲಂಬನೆ. ಇಲ್ಲಿ ವೀಕ್ಷಕ ತನ್ನ ಸುತ್ತಲಿನ ಆಗುಹೋಗುಗಳಲ್ಲಿ ತನ್ನನ್ನು

ಹೆರಮ್ಯಾನ್ ಪ್ರಿಗನ್‌ರವರ 'Spiral Hill Skystair, 1998-2005 Ruhrgebeit, Germany.

ಚಿತ್ರ - 22





ಕ್ಯೂಬಾದ ಜಾರ್‌ಜೆ ಪಾರ್ಡೋ ರವರ ಒಂದು ಸ್ಥಳ ನಿರ್ದಿಷ್ಟ ಇನ್‌ಸ್ಟಾಲೇಷನ್, 1997. 'ಕಲೆ' ಮತ್ತು 'ವಿನ್ಯಾಸ'ಗಳ ನಡುವೆಯ ವೈವಿಧ್ಯಮಯ ದೃಷ್ಟಿ.. ಚಿತ್ರ - 23

ಅರ್ಪಿಸಿಕೊಂಡುಬಿಡುತ್ತಾನೆ; ತನ್ನ ಸ್ವಂತ ಗುರುತಿನ ರಾಜಕಾರಣವನ್ನೂ ರಕ್ಷಿಸಿಕೊಂಡಿರುತ್ತಾನೆ. ತಾನು ಹೊರಗಿನಿಂದ ಬಂದು ಇಲ್ಲಿ ಕುಳಿತ್ತಿದ್ದೇನೆ ಎಂಬ ಪ್ರಜ್ಞೆ ಸಾಂಪ್ರದಾಯಿಕ ರಂಗಭೂಮಿಯ ವೀಕ್ಷಕನಿಗೆ ಇರುತ್ತದೆ. ನಿರ್ದಿಷ್ಟ ಉದ್ದೇಶದಿಂದ ಸೃಷ್ಟಿಸುವ ಅನುಭವವನ್ನು ಹಾಗೆಯೇ ಗ್ರಹಿಸುತ್ತಾನೆ. ಆದರೆ ಇನ್‌ಸ್ಟಾಲೇಷನ್ ಕಲೆಯ ವೀಕ್ಷಕ 'ಕುತೂಹಲ', 'ಕಾತರ' ಎಲ್ಲವುಗಳನ್ನೂ ಒಳಗೊಂಡೂ ಅನುಭವದಲ್ಲಿ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡೂ ತಾನು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದೇನೆ ಎಂಬ ಎಚ್ಚರಹೊಂದಿರುತ್ತಾನೆ. ತತ್ಕಾಲಿಕವಾಗಿಯಾದರೂ ಇನ್‌ಸ್ಟಾಲೇಷನ್ ತೆರೆದುತೋರುವ ಅಪೂರ್ವಲೋಕದ ದೃಶ್ಯಾತ್ಮಕ ಅನುಭವದ ಅನ್ವೇಷಣೆಯಲ್ಲಿ ತೊಡಗುತ್ತಾನೆಂಬುದೇ ಇನ್‌ಸ್ಟಾಲೇಷನ್ ಕಲೆಯ ಟ್ರೇಡ್‌ಮಾರ್ಕ್. ಅವನು (1)ಸುತ್ತಲಿನ ಎಲ್ಲವನ್ನೂ ಸರ್ವೆ ಮಾಡುತ್ತಲೇ ಇನ್‌ಸ್ಟಾಲೇಷನ್ನಿನ ಮೌಲ್ಯಮಾಪನದಲ್ಲೂ ತೊಡಗುತ್ತಾನೆ. (2) ತನ್ನೊಳಗೆ ಮರುಕಳಿಸಿದ ಹಿನ್ನೆನಪುಗಳ ಹಿನ್ನೆಲೆಯಲ್ಲಿ ಪ್ರಸ್ತುತ ಅನುಭವವನ್ನು ಗ್ರಹಿಸುತ್ತಾನೆ.

ಅಲ್ಲಿನ ಸಂಪೂರ್ಣ ಭ್ರಮಾತ್ಮಕ ವಾತಾವರಣದಿಂದ ತನ್ನನ್ನು ಎಚ್ಚರವಾಗಿಯೂ ಇಟ್ಟುಕೊಳ್ಳುತ್ತಾನೆ. ವೀಕ್ಷಕನೊಬ್ಬನು ನೋಡುವ ಇನ್‌ಸ್ಟಾಲೇಷನ್ ಆ ವೀಕ್ಷನ ಹಾಜರಿಯನ್ನು ಅವಲಂಬಿಸಿರುತ್ತದೆ; ಅವನನ್ನು ದೃಷ್ಟಿಯಲ್ಲಿಟ್ಟುಕೊಂಡೇ ಆ ನಿರ್ದಿಷ್ಟ ದೃಶ್ಯಲೋಕ ನಿರ್ಮಿತಗೊಂಡಿರುತ್ತದೆ. ವೀಕ್ಷಕ ತನ್ನೊಂದಿಗೆ ತನ್ನ ಸಾಮಾಜಿಕ ಅಭ್ಯಾಸಗಳನ್ನೂ, ಹಲವು ನಿರೀಕ್ಷೆಗಳನ್ನೂ ಇಟ್ಟುಕೊಂಡೇ ಆ ವಾತಾವರಣ ಪ್ರವೇಶಿಸಿರುತ್ತಾನೆ.[21] ಅಲ್ಲಿನ ಹೊಸ ಅನುಭವ ಅವನು ಇಷ್ಟಪಟ್ಟರೂ ಇಷ್ಟಪಡದಿದ್ದರೂ ಅವನ ನೋಟವಿಭಿನ್ನವಾದರೂ ಅವನ ಮೊದಲಿನ ಮನಸ್ಥಿತಿ ಪಲ್ಲಟಗೊಳ್ಳುವುದಿಲ್ಲ.[22]

ಕ್ರಿಸ್ಟೊ ಮತ್ತು ಜೇನ್ ಕ್ಲಾಡೆರವರ
'Wrapped Trees' Foundation Beyeler and Berower Parks, Riehen, Basel, Switzerland, 1997-1998, Polyester fabric and acrylic rope.

ಚಿತ್ರ - 24







ಚಿತ್ರ - 25

ಕ್ರಿಸ್ಟೋ ಮತ್ತು ಜೇನ್ ಕ್ಲಾಡೆರವರ 'Wrapped walk ways' project for jacob L. Loose Park kansas city, Missouri Collage, 1978 pencil, Enamel paint, Photograph, wax crayon and charcoal, 38 x 28 cm.

ಉಮೇಶ್, ಎನ್.ಎಸ್.ಹರ್ಷ, ಶೀಲಾಗೌಡ ಮೊದಲಾದವರ ಇನ್‌ಸ್ಟಾಲೇಷನ್ ಕಲಾ ಸಂದರ್ಭಗಳಲ್ಲಿ ಪಾಲ್ಗೊಂಡಿದ್ದ ವೀಕ್ಷಕರ ಪ್ರತಿಕ್ರಿಯೆಗಳು ಕುತೂಹಲಕಾರಿ.

2000ದ ನಂತರ ವೈಯಕ್ತಿಕ ಅಭಿವ್ಯಕ್ತಿಯ ಕಥಾನಕಗಳಿಗೆ ಪೂರಕವಾದಂತೆ ವಿಡಿಯೋ ಮಾಧ್ಯಮ ಹೆಚ್ಚು ನೆರವಾಯಿತು. ನಮ್ಮ ಹಲವಾರು ಕಲಾವಿದ /ಕಲಾವಿದೆಯರು ವಿಡಿಯೋ ಮಾಧ್ಯಮದಲ್ಲಿ ಅಭಿವ್ಯಕ್ತಿಸಿದರೆ ಒಂದೆರಡು ವಿಡಿಯೋ ಕಲೆಯ ಕಾರ್ಯಾಗಾರಗಳೂ ನಡೆದವು. ಆದರೆ ಈ ಬೆಳವಣಿಗೆ ವರ್ಣಚಿತ್ರದ 2 ಆಯಾಮಗಳನ್ನು




ಅನೀಶ್ ಕಪೂರ್ ರವರ "tarantara", 1999, PVC, 50-25 Meters. View of work insalled at the Baltic centre for contemporary art, Gateshead, U.K.



ಅನೀಶ್ ಕಪೂರ್ ರವರ "Mother as a Mountain", (Red,1985,medium: wood, gesso, and pigment, 140-275-105 cm




"Memorial',1993.231-216-84 cm,
ಮಾಧ್ಯಮ: oil, tin, neon.
ಸಂಗ್ರಹ: ಕಲಾವಿದರು, ನವದೆಹಲಿ.





ವೀವಾನ್ ಸುಂದರಂರವರ ಒಂದು ಅಭಿವ್ಯಕ್ತಿ Metal frames stacked in a two meter high column.



೯ನೆಯ ಟ್ರೈನಾಲೆಯಲ್ಲಿ ಎಲ್ಲರ ಗಮನ ಸೆಳೆದ ವೇದಾನಾಯಗಂರವರ. "Mankind to 20080......."
non-site ಇನ್‌ಸ್ಟಾಲೇಷನ್‌ನ ಒಂದು ನೋಟ. ನವದೆಹಲಿಯ ರವೀಂದ್ರಭವನ ಗ್ಯಾಲರಿ 1997



Jeanne-claude and christo ರವರ wrapped Reichstag, Berlin, 1971-1995, Aerial view Polypropylene fabric and blue rope.



ಸೈಮೊನ್ ಮೊರೆಟ್ಟಿಯವರ 'A Space for conversation', 2000



ಕ್ರಿಸ್ಟೋ ಮತ್ತು ಜೇನ್ ಕ್ಲಾಡೆಯವರುಗಳ "The gates" ನ್ಯೂಯಾರ್ಕ್‌ನಗರದ ಸೆಂಟ್ರಲ್ ಪಾರ್ಕಿನ ಸ್ಥಳ ನಿರ್ದಿಷ್ಟ ಇನ್‌ಸ್ಟಾಲೇಷನ್. 1979–2005.



9ನೆಯ ಟ್ರೈ-ನಾಲೆಯಲ್ಲಿ ಗೋಗಿ ಸರೋಜ್ ಪಾಲ್‌ರವರ "Simhav lokan - Red Saryu has Eyes", ಒಂದು non-site installation ನೋಟ. 1997




ವೇದನಾಯರ್‌ರವರ ಒಂದು ಇನ್‌ಸ್ಟಾಲೇಷನ್ ನೋಟ.



Christo and Jeanne-clude ರವರ *"The Umbrellas", Japan-USA, 1984-1991 (California site) 1760 Yellow Umbrellas each 6cm high and 8.66m in diameter.* ಅವರು *"All our works is about freedom"* ಹೇಳಿಕೆ ಗಮನಾರ್ಹ.


ಬೆಲ್ಜಿಯಮ್‌ನ *wim Delvoye* ರವರ ಸ್ಥಳ ನಿರ್ದಿಷ್ಟ ಅಭಿವ್ಯಕ್ತಿ : *"Mum keys are....", 1996. Laser inkjet paint on canvas. 300 x 400cm.* ಇನ್‌ಸ್ಟಾಲೇಷನ್ ದೃಶ್ಯ: *Open air Museum of Sculpture Middelheim, Antoverp. Belgium, 1997.*



Christo-Jeane-Cloude ರವರ 'wrapped oil barrels', 1958-1959. Fabric, Enamel paint, Steel wire and barrels, Barrels range in Size from: 49 x 33cm to 89 x 59cm



ಬರ್‌ಬಾರಾ ಕ್ರೂಗರ್‌ರವರ ಇನ್‌ಸ್ಟಾಲೇಷನ್ ಒಂದರ ದೃಶ್ಯ. ನ್ಯೂಯಾರ್ಕಿನ Mary Boone Gallery, 1991, ಅವರ ಆಶಯ ನೋಡಿ" I try to deal with the complexities of power and social life, but as for as the visual presentation goes, I try to avoid a high degree of difficulty I want people to be drawn in to my work" ಎನ್ನುತ್ತಾರೆ ಕ್ರೂಗರ್.






ಶೀಲಾಗೌಡರವರ 'Darkroom' (2006) Exterior view, tardrums, tardrum Sheets, asphalt and mirrors, 238 x 259 x 305cm, Courtesy: Bose Pacia Gallery, New york.

ಬಿ.ಹೆಚ್. ಶ್ರೀನಿವಾಸ್‌ಪ್ರಸಾದ್‌ರವರ "Known to unknown" non-site ಇನ್‌ಸ್ಟಾಲೇಷನ್‌ನಲ್ಲಿ ಪಾಲ್ಗೊಂಡಿರುವ ವೀಕ್ಷಕರ ಒಂದು ನೋಟ.




ವಿಡಿಯೋಮಾಧ್ಯಮದಲ್ಲಿ ಮುಂದುವರೆಸಿದಂತೆ ಆರಂಭದಲ್ಲಿ ಕಂಡಿತು. ನಂತರದ ಕೆಲವೇ ವರ್ಷಗಳಲ್ಲಿ ಇನ್‌ಸ್ಟಾಲೇಷನ್ ಕಲೆ ಮೂಡಿಬಂದು ಶಿಲ್ಪದ ಅವಕಾಶದ ಸಾಧ್ಯತೆಗಳನ್ನು ವಿಸ್ತರಿಸಿ ಕಲಾವಿದ/ ಕಲಾವಿದೆಯರು ಅಭಿವ್ಯಕ್ತಿಸಿದರು. ಸ್ತ್ರೀ ಸಂವೇದನೆಯ ಹಲವು ಮುಖಗಳು ತೆರೆದುಕೊಂಡ ಬೆರಗು ವೀಕ್ಷಕರಿಗೆ.

ಇತ್ತೀಚೆಗೆ ಜಾಗತೀಕರಣದ ಫಲವಾದ ಹಲವು ಪಲ್ಲಟಗಳಲ್ಲಿ 1989ರ ನಂತರ ಉಂಟಾದ ಕಲಾಮಾರುಕಟ್ಟೆಯ ಏರಿಳಿತವೂ ಒಂದು 1980ರಲ್ಲಿ ಧೀಮಂತಿಕೆಯಿಂದಿದ್ದ



ಚಿತ್ರ - 26

Christo ಮತ್ತು Jeanne-Claude ರವರ 'Wrapped Reichstag, project for berlin. Drawring, 1994. Pencil, Charcoal, Pastel, wax crayon, technical data map.



ಚಿತ್ರ - 27

Christo and Jeanne-Claude ರವರ "The Gates, Project for Central Park, Newyork City, Collage, 1980. Pencil, Fabric, Photograph, Charcoal, Wax Crayon and Pastel 71 x 56 cm.

ಕಲಾಪೋಷಕರು, ಈ ಕಾರಣದಿಂದ ಕೆಲವು ಜನಪ್ರಿಯ ಹಾದಿಗಳತ್ತ ಹೆಜ್ಜೆ ಹಾಕಬೇಕಾಯಿತು. ಜಪಾನಿನ ಆರ್ಥಿಕ ಸಮಸ್ಯೆಗಳ ಕಾರಣದಿಂದಾಗಿ ಅಲ್ಲಿನ ಕಲಾಮಾರುಕಟ್ಟೆ ಬಿದ್ದು ಹೋಗಿದ್ದು ಹಲವು ಮೂಲಗಳ ಪ್ರಕಾರ ಬೇರೊಂದು ಮುಖವನ್ನೇ ತೋರುವಂತಿತ್ತು. ರಿಯಲ್ ಎಸ್ಟೇಟ್ ಲಾಭದ ಮೇಲಿನ ತೆರಿಗೆಯನ್ನು ತಪ್ಪಿಸಿಕೊಳ್ಳಲು ಕಲಾಕೃತಿಗಳನ್ನು ಕೊಳ್ಳಲಾಗುತ್ತಿತ್ತೆಂಬ ಅಪ್ರಿಯ ಸತ್ಯಅದು.

ಹಾಗಾಗಿ ಕಲಾಕೃತಿಗಳ ಬೆಲೆಗಳು ಕೃತಕವಾಗಿ ಗಗನ ಮುಖಿಯಾಗಿದ್ದವು ಅಷ್ಟೇ. ಜೊತೆಗೆ ಪಶ್ಚಿಮ ಹಾಗೂ ಯೂರೋಪಿನ ಉನ್ನತ ತಂತ್ರಜ್ಞಾನ ವಿಭಾಗಗಳ ಅಸ್ಥಿರತೆ ಜೊತೆಗೆ ಆರ್ಥಿಕ ಭ್ರಷ್ಟಾಚಾರಗಳು ಏರುಮುಖವಾಗಿದ್ದು, ಸ್ಟಾಕ್ ಮಾರ್ಕೆಟ್ ಕುಸಿತ, ಹಾಗೂ ಯುದ್ಧ ಮೊದಲಾದವೂ ಸಹ ಜಾಗತಿಕ ಆಗುಹೋಗುಗಳ ಮೇಲೆ ಪರಿಣಾಮಬೀರಿದವು. ಇದೇ ಸಂದರ್ಭದಲ್ಲಿ ಅಂದರೆ 1990ರಲ್ಲಿ ಇನ್‌ಸ್ಟಾಲೇಷನ್ ಕಲಾಪ್ರಕಾರ ತನ್ನ ಶಿಖರ ಮುಟ್ಟಿತು. ಈಗಾಗಲೇ ಪ್ರಸ್ತಾಪಿಸಿರುವಂತೆ ಇದೊಂದು ಸಂಕೀರ್ಣವಾದ ಹಾಗೂ ವಿವಾದಾಸ್ಪದ ಪದವೇ ಆಗಿದೆ. 'ಕೊಳ್ಳುವ' ಹಾಗೂ 'ಮಾರುವ' ಪ್ರಕ್ರಿಯೆಗಳಿಗೆ ಇದು ದೃಢವಾದ ಪ್ರತಿರೋಧವನ್ನು ಒಡುತ್ತದೆ ಎಂದೇ ಹಲವರ ನಂಬಿಕೆ. 1960ರ 'environment art' ಎಂದು ಕರೆಸಿಕೊಳ್ಳುತ್ತಿದ್ದ ಈ ಪ್ರಕಾರ ಸಂಪೂರ್ಣವಾಣಿಜ್ಯೀಕೃತ 1980ರಲ್ಲಿ ಪುನರುಜ್ಜೀವನಗೊಂಡಿತ್ತಷ್ಟೆ. ಈ 1989ರ ಆರ್ಥಿಕ ಹಿಂಜರಿತ, ಹಿನ್ನೆಡೆಗಳ ಹಿನ್ನೆಲೆಯಲ್ಲಿ ವಿಶ್ವದ ಹಲವೆಡೆಯಂತೆ ಜಪಾನ್ ಹಾಗೂ ಭಾರತಗಳಲ್ಲೂ ಇನ್‌ಸ್ಟಾಲೇಷನ್ ಕಲೆ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿತು. ಹಾಗೆಯೇ ಕಲಾವಲಯದ ಕೇಂದ್ರಗಳಲ್ಲಿ ಸ್ಥಾನ ಕಲ್ಪಿಸಿಕೊಂಡಂತೆಯೇ ಮ್ಯೂಸಿಯಂಗಳಲ್ಲಿಯೂ ಪ್ರಾಮುಖ್ಯತೆ ಪಡೆಯಿತು.

ಚಿತ್ರ - 28

ರಾಬರ್ಟ್ ಸ್ಮಿತ್‌ಸನ್‌ರವರ
'Spiral Jetty', 1970 (2002ರಲ್ಲಿ ತೆಗೆದ ಛಾಯಾಚಿತ್ರ).



ಒಂದು ನಿರ್ದಿಷ್ಟ ಮಾಧ್ಯಮದಲ್ಲಿಯೇ ಮೂಡಿ ಬರಬೇಕೆಂಬ ಮಿತಿಗಳೇನೂ ಇನ್‌ಸ್ಟಾಲೇಷನ್ ಕಲೆಗೆ ಇಲ್ಲ. ಅತಿ ಹಳೆಯ ಮಾಧ್ಯಮ ವರ್ಣಚಿತ್ರಪ್ರಕಾರವನ್ನು ಮೀರಿ ವಿಡಿಯೋ ಮಾಧ್ಯಮವನ್ನು ಮೀರಿ ಮುನ್ನಡಿಇಟ್ಟಿದೆ. ಇದೊಂದು 'ಅವಕಾಶದ ಕಲೆ' (Spatial art) ಯಾಗಿ ಹಲವಾರು ಮಾಧ್ಯಮಗಳನ್ನು ದುಡಿಸಿಕೊಳ್ಳುತ್ತಿದೆ. ಅಭಿನಯ ಮೂಲದ ಅಭಿವ್ಯಕ್ತಿ performance ಸಹ ಬಳಸಿಕೊಳ್ಳಲ್ಪಡುತ್ತಿದೆ. ಇದರ ಬೆಳವಣಿಗೆಯಿಂದ ಸಾಂಪ್ರದಾಯಿಕ ಕಲಾಪ್ರಕಾರಗಳಾದ ಚಿತ್ರ ಮತ್ತು ಶಿಲ್ಪಗಳ ಪ್ರಾಮುಖ್ಯತೆ ಹಲವು



ಅನೀಶ್‌ಕಪೂರ್‌ರವರ `Cloud Gate', 2004. ಸ್ಟೈನ್‌ಲೆಸ್‌ಸ್ಟೀಲ್, ಚಿಕಾಗೋ ಮಿಲೇನಿಯಮ್ ಪಾರ್ಕಿನಲ್ಲಿನ ಅಭಿವ್ಯಕ್ತಿಯ ಒಂದು ನೋಟ. ಅಳತೆ: 33 x 66 x 42 ಅಡಿ. ಚಿತ್ರ - 29

ರಾಷ್ಟ್ರಗಳಲ್ಲಿ ಗಣನೀಯವಾಗಿಕಡಿಮೆಯಾಗಿದೆ. ಆದರೂ ವಾಣಿಜ್ಯ ಉದ್ದೇಶಗಳ ಕಾರಣಕ್ಕಾಗಿ ಇಂದಿಗೂ ವರ್ಣಚಿತ್ರಗಳು ವ್ಯಕ್ತಿಗಳು ಹಾಗೂ ಸಂಸ್ಥೆಗಳ ಮೂಲಕ ಕೊಳ್ಳಲ್ಪಡುತ್ತಿವೆ. ಹಾಗೆಯೇ ರೇಖಾಚಿತ್ರ, ಪ್ರಿಂಟ್‌ಗಳೇ ಅಲ್ಲದೆ ಕಲಾವಿದ/ಕಲಾವಿದೆಯರ ಅವರ ಕಲೆಯ ಕುರಿತ ಪುಸ್ತಕಗಳೂ ಕೊಳಲ್ಪಡುತ್ತಿವೆ. ಆದರೆ ಈ ಎಲ್ಲವುಗಳ ನಡುವೆಯೂ ಸಮೂಹ ಸಂಸ್ಕೃತಿಯ ಸ್ಪರ್ಧೆಯ ನಡುವೆಯೂ ವೀಕ್ಷಕರನ್ನು ಆಕರ್ಷಿಸುವ ಹಲವು

ಚಿತ್ರ - 30

ಚಿಲಿಯಲ್ಲಿ ಕಲಾವಿದನೊಬ್ಬ ರಸ್ತೆಯಲ್ಲಿ ಅವರಿವರಿಂದ ದಾನವಾಗಿ ಪಡೆದ ಪಾದರಕ್ಷೆಗಳನ್ನು ತನ್ನ ಅಭಿವ್ಯಕ್ತಿಗೆ ದುಡಿಸಿಕೊಂಡಿದ್ದಾನೆ. ವೀಕ್ಷಕರ ಪಾಲ್ಗೊಳ್ಳುವಿಕೆಯನ್ನು ಈ ದೃಷ್ಟಿಯ ಹಿಂದೆ ಗಮನಿಸಿ.



ಅಂಶಗಳನ್ನು ಒಳಗೊಂಡಿರುವ ವೀಕ್ಷಕರೇ ಪ್ರಾಮುಖ್ಯತೆ ಪಡೆದಿರುವ ಇನ್‌ಸ್ಟಾಲೇಷನ್ ಕಲೆ ಉನ್ನತ ಹಂತದಲ್ಲಿಯೇ ಕಾಣುತ್ತಿದೆ. ಈ ಕಲಾಪ್ರಕಾರ ನಗರಪ್ರದೇಶಗಳ ಬೆಳವಣಿಗೆಯ ಜಾಗತೀಕರಣದ ನೆರಳಿನಡಿ ಹುಲುಸಾಗಿ ಬೆಳೆಯುವ ಅವಕಾಶ ಸಾಧ್ಯತೆಗಳನ್ನು ಹೆಚ್ಚಾಗಿ ಹೊಂದಿದೆ. ಈ ಸೂಕ್ಷ್ಮಗಳು ಅರಿವಾಗಲು ಇಂದು ವೆನಿಸ್, ಮ್ಯಾಡ್ರಿಡ್, ಬಾಸ್ಲೆಗಳೇ ಅಲ್ಲದೆ ಸಾವೋ ಪೋಲೋ, ಡಾಕರ್ ಮತ್ತು ಷಾಂಗೈಗಳಲ್ಲೂ ವೀಕ್ಷಕರನ್ನು

ಸೆಳೆಯುವಂತಹ ಇನ್‌ಸ್ಟಾಲೇಷನ್ ಕಲೆಯ ನಿಗದಿತ ಸಂದರ್ಭದ ಪ್ರದರ್ಶನಗಳಿರುತ್ತವೆ. ಪ್ರಾರಂಭದ ತಮ್ಮ 'ಸ್ಥಳ'ಗಳಲ್ಲಿಯೇ ಇನ್‌ಸ್ಟಾಲೇಷನ್ ಕಲೆಯನ್ನು ಆಯೋಜಿಸುತ್ತಿದ್ದ ಕಲಾವಿದ /ಕಲಾವಿದೆಯರ ಮನಸ್ಥಿತಿ ಹಾಗೂ ಸಂದರ್ಭಗಳಿಂದ ಈ ಕಲಾಪ್ರಕಾರ ಬಹುದೂರ ನಡೆದುಬಿಟ್ಟಿದೆ. ಖಾಸಗಿ ಪ್ರಾಯೋಜನೆ ಮತ್ತು ಸಾರ್ವಜನಿಕ ನಿಧಿಗಳಿಂದ ಹೆಚ್ಚು ಹೆಚ್ಚು ಕಾಣಿಸಿಕೊಳ್ಳುತ್ತಿದೆ. ಹೀಗಾಗಿ ಜಾಗತೀಕರಣ ಹಾಗೂ ಖಾಸಗೀಕರಣಗಳ ನಡುವೆ ಸಂಪರ್ಕ ಸೇತುವೆಯೊಂದು ನಿರ್ಮಾಣಗೊಂಡಿದೆ. ಈ ಬೆಳವಣಿಗೆಯ ಫಲವಾಗಿ ಮ್ಯೂಸಿಯಂ ಹಾಗೂ ಗ್ಯಾಲರಿಗಳಲ್ಲಿ ಇನ್‌ಸ್ಟಾಲೇಷನ್ ಕಲೆಯ ಪ್ರದರ್ಶನಗಳು ಆಕರ್ಷಕವಾಗಿ ಪ್ರದರ್ಶಿತಗೊಳ್ಳುತ್ತಿವೆ. ಗ್ಯಾಲರಿ Sumukha, Sakshi, Skeಗಳನ್ನು ಇಲ್ಲಿ ನೆನಪು ಮಾಡಿಕೊಳ್ಳಿ. ಇಲ್ಲಿ ಸಮೂಹ ಸಂಸ್ಕೃತಿ, ಗ್ರಾಹಕ ಸಂಸ್ಕೃತಿಗಳನ್ನು ಸಮೂಹ

ಅಮೇರಿಕದ ಕಲಾವಿದ ಫೆಲಿಕ್ಸ್ ಗೊನ್ಸಾಟಝ್-ಟೋರ್ರ್ಸ್‌ರವರ
"Untitled (AMERICA)", 1994/95. Limerick City, Ireland.
Material : 15 watt light bulbs, rubber light sockets, extension cords.

ಚಿತ್ರ - 31






ಚಿತ್ರ - 32 *ಇಂಗ್ಲೆಂಡಿನ ಕಲಾವಿದೆ ಸಾರ್ಹಾಲುಕಾಸ್‌ರವರ 'CAR PARK' ಇನ್‌ಸ್ಟಾಲೇಷನ್ ನೋಟ, 1997. (ಮ್ಯೂಸಿಯಂ ಲುಡ್‌ವಿಗ್, ಕಲೋನ್, ಜರ್ಮನಿ).*


ಮಾಧ್ಯಮಗಳು ವೈಭವೀಕರಿಸುವ ಕೆಲಸವನ್ನೂ ಮಾಡುವುದು ಸಹಜ ಎಂಬಂತಹ ಜಾಗತೀಕರಣದ ಸಂದರ್ಭವೂ ಇದ್ದೇ ಇದೆ.

ಕಲಾವಿದನ ಅಥವಾ ಕಲಾವಿದೆಯ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯೊಂದರ ಒಳಕ್ಕೆ ವೀಕ್ಷಕರು ನೇರವಾಗಿ ಪ್ರವೇಶಿಸಬಹುದಾಗಿದ್ದು ಅದನ್ನು 'ನಾಟಕೀಯ', 'ಮಗ್ನತೆ-ಮಾಯವಾಗುವ' ಅಥವಾ 'ಅನುಭವಶೀಲತೆ'ಗಳ ಮೂಲಕ ಗುರುತಿಸಲ್ಪಡಲಾಗುತ್ತಿದೆ. ಆದರೆ ಇಂದು ಈ ಕಲಾಪ್ರಕಾರದ ಹೆಸರಿನಡಿ ಸೃಷ್ಟಿಯಾಗುತ್ತಿರುವ ಅಭಿವ್ಯಕ್ತಿಗಳನ್ನು ಗಮನಿಸಿದರೆ ಅವುಗಳ ವಸ್ತು ವೈವಿಧ್ಯತೆ ಗ್ರಹಿಕೆಗಳ ಆಶಯ ಹಾಗೂ ನಿರ್ವಹಣೆಗಳಲ್ಲಿನ ಸ್ವಚ್ಛಂದತೆಗಳು ಒಂದು ನಿರ್ದಿಷ್ಟ ಚೌಕಟ್ಟಿನಡಿ ವಿವರಿಸಲು ಅಸಾಧ್ಯವೆಂಬಂತಹ ಸಂದರ್ಭವೂ ಇದೆ. ಒಂದು ನಿರ್ದಿಷ್ಟ ಸೂಚಿತಸ್ಥಳ ಅವಕಾಶದಲ್ಲಿ ಯಾವುದೇ ರೀತಿಯ ವಸ್ತುಗಳನ್ನು ವ್ಯವಸ್ಥೆಮಾಡುವ ರೀತಿಗೆ 'Installation' ಎನ್ನುವ ಹಾಗೆಯೇ ಗ್ಯಾಲರಿಯ ಗೋಡೆಗಳ ಮೇಲೆ ಸಾಂಪ್ರದಾಯಕವಾಗಿ ವರ್ಣಚಿತ್ರಕೃತಿಗಳನ್ನು ತೂಗುಹಾಕುವುದನ್ನೂ



ಅಮೆರಿಕದ ಬಹು ಚರ್ಚಿತ ಕಲಾವಿದೆ, ಬರ್‌ಬಾರಾ ಗ್ರೂಗರ್‌ರವರ ಚಿತ್ರ - 33
"Power, Pleasure, Desire Digest, 1997. ಬಹುಮಾಧ್ಯಮ ಇನ್‌ಸ್ಟಾಲೇಷನ್,
(Deight Projects, Newyork, 1997).

ಇದೇ ಹೆಸರಿನಿಂದಲೇ ಕರೆಯಬಹುದಾಗಿದೆ. ಹೀಗಾಗಿ 'Installation art'ಗೂ 'Installation of art' ಗೂ ಮಸಕಾದ ಅಂತರ ಇದೆ. Installation art ನಲ್ಲಿ ವೀಕ್ಷಕರು ನೇರವಾಗಿ ಪಾಲ್ಗೊಳ್ಳುವ ಸಂದರ್ಭ ಸೃಷ್ಟಿ ಇದೆ. ಅವರು ಆ ನಿರ್ದಿಷ್ಟ ಅಭಿವ್ಯಕ್ತಿಯ ಅವಿಭಾಜ್ಯ ಅಂಗಗಳೂ ಹೌದು. ಹಾಗಾಗಿ ಇದೊಂದೇ ಅಂಶ ಈ ಕಲಾಪ್ರಕಾರಕ್ಕೆ ಪರಿಪೂರ್ಣತೆಯನ್ನು ತಂದುಕೊಡುತ್ತದೆ. ಶಿಲ್ಪ, ಚಿತ್ರ, ಛಾಯಾ ಚಿತ್ರ ಪ್ರದರ್ಶನಾವಧಿಗಳಲ್ಲಿನ ಮುಟ್ಟಬೇಡಿ[22a] ಎಂಬ ಸೂಚನಾಫಲಕಗಳನ್ನು ನೆನಪು ಮಾಡಿಕೊಳ್ಳಿ! ದೂರದಿಂದಕಣ್ಣುಗಳಿಂದ ನೋಡುವವರಿಗೂ ಅಭಿವ್ಯಕ್ತಿಯ ನಡುವೆ ನಡೆದಾಡಿ ತನಗೆ ಇಷ್ಟಬಂದ ರೀತಿಯ ಪ್ರತಿಕ್ರಿಯಾ ರೂಪದ ನಡವಳಿಕೆಯನ್ನು ನಿರೀಕ್ಷಿಸುವ Installation art ಪ್ರಕಾರವನ್ನು ಕಣ್ಮುಂದೆ ತಂದುಕೊಳ್ಳಿ. ನಿರ್ದಿಷ್ಟ ದೂರದಿಂದ ಕಲಾಕೃತಿಗಳನ್ನು ತನ್ನ ಕಣ್ಣುಗಳಿಂದ ಸರ್ವೆ ಮಾಡುವ ವೀಕ್ಷಕನಿಗಿಂತಲೂ, ದೈಹಿಕವಾಗಿಯೂ ಕಲಾವಿದ/ಕಲಾವಿದೆಯರೊಂದಿಗೆ ಅವರ ಅಭಿವ್ಯಕ್ತಿಯ ನಡುವೆ ನಡೆದಾಡುವ ಸಂದರ್ಭ ಅಸದೃಶ ಅನುಭವ ನೀಡುತ್ತದೆ. ವೀಕ್ಷಕನ ಇಂದ್ರಿಯಗಳು ಇಲ್ಲಿ ಹಾಯಾಗಿ ನಿರ್ವಹಿಸಲ್ಪಡುವುದರಿಂದ ಅವನ/ಅವಳ



ಚಿತ್ರ - 34

ಸಾರ್ಥಾ ಲುಕಾಸ್‌ರವರ (ಜ: 1962, ಇಂಗ್ಲೆಂಡ್)
"Smoking Room", 1996. ಇನ್‌ಸ್ಟಾಲೇಷನ್‌ನ ಒಂದು ನೋಟ.
Wolfsburg, Germany, 1996.

ಇಂದ್ರಿಯಗಳ ನೋಟ ಉತ್ತಮಗೊಳ್ಳುತ್ತದೆ. ಅವರು ಇನ್‌ಸ್ಟಾಲೇಷನ್ ಆರ್ಟ್‌ನ ಮುಖ್ಯ ಗುಣಲಕ್ಷಣಗಳ ಅಂಶವೇ ಆಗುತ್ತಾರೆ. ಆ ನಿರ್ದಿಷ್ಟ ಅಭಿವ್ಯಕ್ತಿ ಪೂರ್ಣಗೊಳ್ಳಲು ವೀಕ್ಷಕರ ಅಗತ್ಯ ಅತಿ ಅವಶ್ಯಕ.

ಹಾಗಾದರೆ ಇನ್‌ಸ್ಟಾಲೇಷನ್ ಆರ್ಟ್‌ನ ವೀಕ್ಷಕನೆಂದರೆ ಯಾರು? ಅವನ ಅರ್ಹತೆಗಳೇನು? ಅವನ ಅಥವಾ ಅವಳ ಯಾವ ರೀತಿಯ ಭಾಗವಹಿಸುವಿಕೆ ಇರುತ್ತದೆ? ವೀಕ್ಷಕರು ನೇರವಾಗಿ ಅಭಿವ್ಯಕ್ತಿಯಲ್ಲಿ ಪಾಲ್ಗೊಂಡು ಅನುಭವಿಸಬೇಕು ಎಂದು ಕಲಾವಿದ /ಕಲಾವಿದೆಯರು ನಿರೀಕ್ಷಿಸುವುದು ಏಕೆ? ಈ 'ಒತ್ತು' ಅಥವಾ 'ಒತ್ತಾಯ' ದ ಕಾರಣವಾಗಿ ವೀಕ್ಷಕರಿಗಾಗಿ ದೊರಕುವ ಅನುಭವ ಎಂಥಹುದು? ಎಂಬ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬಹುದಾಗಿದೆ. ನಾನೇರಿದೆತ್ತರಕ್ಕೆ ನೀನೇರಬಲ್ಲೆಯಾ? ಎಂಬ ಕವಿಯೊಬ್ಬರ ಪ್ರಶ್ನೆ ಇಲ್ಲಿ ನೆನಪಾಗುತ್ತದೆ. ಕಲಾವಿದ/ಕಲಾವಿದೆಯ ಅಭಿವ್ಯಕ್ತಿಯೊಂದರ ನಡುವೆ ನಡೆದಾಡಿ ಅನುಭವಿಸಲು ದೃಶ್ಯ ಸಂಸ್ಕೃತಿಯ ಸಾಕ್ಷರತೆ ಮಟ್ಟವೂ ಗಣನೀಯಪಾತ್ರ

ವಹಿಸುತ್ತದೆಯಾದರೂ ವಿಭಿನ್ನಸ್ತರ ವಿಭಿನ್ನ ವೀಕ್ಷಕರಿಗೆ ಹಲವು ನೆಲೆಯ ಅನುಭವಗಳು ಸಾಧ್ಯ. ಇಲ್ಲಿ ಎಲ್ಲರಿಗೂ ಕಲಾವಿದ/ಕಲಾವಿದರ ಹೇಳಿಕೆ, ಸೂಚನೆಗಳನ್ನು ಅನುಸರಿಸುವ ಸಾಮರ್ಥ್ಯ ಆಸಕ್ತಿ ಒಂದೇ ಮಟ್ಟದಲ್ಲಿ ಇರುತ್ತದೆ ಎಂದೂ ಹೇಳಲಾಗದು. ಆದರೂ ಇನ್‌ಸ್ಟಾಲೇಷನ್ ಕಲೆಯ ಅವಿಭಾಜ್ಯ ಅಂಗವಾದ ವೀಕ್ಷಕ ಅದರ ನಡುವೆ ಪಾಲ್ಗೊಳ್ಳದೆ ಆ ಅಭಿವ್ಯಕ್ತಿಯನ್ನು ಅಳೆಯುವುದು ಕಠಿಣ. ಪಾಲ್ಗೊಂಡರೂ ವಿವಿಧ ಕಾಲ ದೇಶಗಳ ದೃಶ್ಯ ಸಂಸ್ಕೃತಿಯ ಸಾಕ್ಷರತೆಯ ಸ್ತರಗಳೂ ವಿವಿಧ ರೀತಿಯ ಅನುಭವಗಳನ್ನು ವೀಕ್ಷಕರಿಗೆ ಉಂಟು ಮಾಡಬಲ್ಲವು. ಇಲ್ಲಿ ತುಮಕೂರಿನ ಗುಡ್ಡವೊಂದರಲ್ಲಿ ಟಿ.ವಿ.ಎಸ್. ಶಾಲೆಯ ಮಕ್ಕಳು ಪಾಲ್ಗೊಂಡಿದ್ದ N.S. ಹರ್ಷಾರವರ 'Ambition and Dream' ಸ್ಥಳ ನಿರ್ಧಿಷ್ಟ ಇನ್‌ಸ್ಟಾಲೇಷನ್ ಕಲೆಯ ನೆನಪಾಗುತ್ತಿದೆ.

ಆದರೆ ವೀಕ್ಷಕರ ಭಾಗವಹಿಸುವಿಕೆಯ ಉದ್ದೇಶವನ್ನು ಸರಿಯಾಗಿ ಗ್ರಹಿಸದೆ, ತಾವೇ ಸಾರ್ವಭೌಮರೆಂದು ಭಾವಿಸಿರುವ ಎಲ್ಲವನ್ನೂ ಮಾಡುವಲ್ಲಿ ತೊಡಗಿ ಇನ್‌ಸ್ಟಾಲೇಷನ್ ಕಲೆಯ ಪ್ರದರ್ಶನದ ಅವಧಿಯಲ್ಲಿ ವೀಕ್ಷಕರೊಂದಿಗೆ ಅವರ ಅಭಿಪ್ರಾಯ ಒಪ್ಪದೆ, ಅವರ ವ್ಯಕ್ತಿತ್ವವನ್ನು ಗೌರವಿಸದೆ ಜಗಳ ಕಾಯುವ ಕಲಾವಿದರೂ ಇರುವುದು ಒಂದು

ಇಂಗ್ಲೆಂಡಿನ ಕಲಾವಿದೆ ಟ್ರೇಸೆ ಎಮಿನ್ (ಜ: 1963) ರವರ
"Every one have ever slept with 1963-1995", 1995.
ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ಒಂದು ನೋಟ.

ಚಿತ್ರ - 35



ವಿಪರ್ಯಾಸವೇ ಸರಿ. ಚಿತ್ರ ಶಿಲ್ಪ ಪ್ರಿಂಟ್ ಇತ್ಯಾದಿ ಮಾಧ್ಯಮಗಳಲ್ಲಿ ಅಭಿವ್ಯಕ್ತಿಸುವುದು ಇನ್ನು ಮುಂದೆ ಸಾಧ್ಯವಾಗದು ಎಂಬುವವರು ಮಾತ್ರ ಈ ಕಲಾಪ್ರಕಾರವನ್ನು ದುಡಿಸಿಕೊಳ್ಳುತ್ತಾರೆ. ಪುಷ್ಪಮಾಲಾ, ಶೀಲಾಗೌಡ, ಲಲಿತಾ ಶಂಕರ್, N.S.ಹರ್ಷಾ, ಉಮೇಶ್, ಸುರೇಖಾ, ಶ್ರೀನಿವಾಸಪ್ರಸಾದ್ ಮೊದಲಾದವರು ಅದೇ ಧೋರಣೆಯವರು, ಇಂತಹ ನಿರ್ದಿಷ್ಟ ದೃಷ್ಟಿ, ಧೋರಣೆಗಳೂ ಇಲ್ಲಿ ಪ್ರಭಾವ ಬೀರುತ್ತವೆ. ಹಾಗಾಗಿಯೇ ಇಂಥವರ ಇನ್‌ಸ್ಟಾಲೇಷನ್ ಕಲೆಯ ಅಭಿವ್ಯಕ್ತಿಗಳ ನಡುವೆ ವೀಕ್ಷಕರು ನಡೆದಾಡುವಂತೆ ಉತ್ತೇಜಿಸಲ್ಪಡುವ ರೀತಿಯಲ್ಲಿಯೇ ಅಲ್ಲಿನ ವ್ಯವಸ್ಥೆಗಳು ಇರುತ್ತವೆ. ಸಂಪ್ರದಾಯಕಲಾಕೃತಿಗಳು ಪ್ರತಿನಿಧಿಸುತ್ತಿದ್ದ ಮೈವಳಿಕೆ (texture) ಅವಕಾಶ (Space) ನೆರಳು ಬೆಳಕು ಇತ್ಯಾದಿ ಅಂಶಗಳನ್ನು ಇನ್‌ಸ್ಟಾಲೇಷನ್ ಕಲೆಯು ವೀಕ್ಷಕರು ನೇರವಾಗಿ


Hans Haacke, ರವರ 'Germania', 1993. ಇನ್‌ಸ್ಟಾಲೇಷನ್‌ನ ಒಂದು ನೋಟ.
Installation in the pavilion of the FRG, at the Biennale of Venice, 1993
wood partition, eight letters; facimile of a 1990 deutsche mark coin ;
photo of hitler at the Biennale of venice in 1934.

Source : Archivio storico delle articontemporance, la Biennale di Venezia;
1000-watt projector. Curator : Klass Bussmann. Photograph : Roman Mensing.

ಚಿತ್ರ - ೩೬೨



ಅವರೇ ಅನುಭವಿಸುವಂತೆ ಸಾದರ ಪಡಿಸುತ್ತದೆ. ವೀಕ್ಷಕರ ಇಂದ್ರಿಯಗಳು ತುರ್ತಾದ ತೀವ್ರತೆಯಿಂದ ದೈಹಿಕವಾಗಿ ಪಾಲ್ಗೊಳ್ಳುವಂತೆ ಮಾಡುತ್ತವೆ. ಅವರು ಅಭಿವ್ಯಕ್ತಿಯ ಒಳಗೆ, ಹೊರಗೆ, ಸುತ್ತಲೂ ನಡೆದಾಡಲೇಬೇಕಾದ ಮನಸ್ಥಿತಿ ಉಂಟಾಗುತ್ತದೆ. ವೀಕ್ಷಕರ ಗ್ರಹಿಸುವ ಪ್ರಕ್ರಿಯೆ ಅಭಿವ್ಯಕ್ತಿಯನ್ನು ದೈಹಿಕವಾಗಿ ಅನುಭವಿಸುವಂತೆ ಮಾಡುತ್ತದೆ. ಇನ್‌ಸ್ಟಾಲೇಷನ್ ಕಲೆಯ ವೀಕ್ಷಕನ ಅನುಭವ ಗ್ರಹಿಕೆಯ ರಾಜಕಾರಣದ ಬಗ್ಗೆ Post Structuralist



ನವದೆಹಲಿಯ 9ನೆಯ ಟ್ರೈನಾಲೆಯಲ್ಲಿ ಆಸ್ಟ್ರೇಲಿಯಾದ ಸೈಮನ್ ನೆಲ್ಸನ್‌ರವರ "World Between", 1997. ಪರಿಸರ ಕಾಳಜಿಯ ಅಭಿವ್ಯಕ್ತಿ

ಚಿತ್ರ - 36 ಬಿ

ಪ್ರಜಾಪ್ರಭುತ್ವದ ವಿಮರ್ಶಕರೂ ಆಸಕ್ತಿ ತೋರಿದ್ದಾರೆ. ಬಹುತೇಕ ಕಲಾವಿದ/ಕಲಾವಿದೆಯರು ವಿಮರ್ಶಕರು ಅಪೇಕ್ಷಿಸುವಂತೆ ವೀಕ್ಷಕರನ್ನು ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ಎಲ್ಲ ಭಾಗಗಳಲ್ಲಿಯೂ ನಡೆದಾಡಿಸಿ ಪಾಲ್ಗೊಳ್ಳುವಂತೆ ಮಾಡಿದಾಗ ಆ

ಚಿತ್ರ - 37ಅ



ಎಂ.ಎಫ್. ಹುಸೇನರವರ 'Knight Watch' ಅನುಸ್ಥಾಪನಾ ಕಲಾಕೃತಿಯ ಒಂದು ನೋಟ. CIMA Gallery, Kolkota, 2002. ಗುಜರಾತ್ ಹಿಂಸಾಚಾರ ಕುರಿತ ಪತ್ರಿಕೆಗಳಲ್ಲಿ ಮೂಡಿಬಂದ ಅಭಿವ್ಯಕ್ತಿ. ರೆಂಬ್ರಾಂಟ್ ಎಂದರೆ ಹುಸೇನ್‌ರಿಗೆ ಅಚ್ಚುಮೆಚ್ಚು. ಅವರ 'Night Watch' ಕ್ಕೆ [illegible] ಹುಸೇನ್ 'Night Watch' ಗೆ ಬದಲಾಗಿ 'Knight Watch' ಎಂದು ಕರೆದು ಮಧ್ಯಯುಗದ ಬರ್ಬರತೆಯ ನೆನಪು ಮಾಡಿದ್ದಾರೆ.





'ಶ್ವೇತಾಂಬರಿ', ಎಂ.ಎಫ್. ಹುಸೇನ್‌ರವರ ಒಂದು ಇನ್‌ಸ್ಟಾಲೇಷನ್, ಮಾಧ್ಯಮ : ವೃತ್ತಪತ್ರಿಕೆಯ ಕಾಗದ, ಶ್ವೇತವಸ್ತ್ರ, ಇದೊಂದು non-site ಇನ್‌ಸ್ಟಾಲೇಷನ್. ಗ್ಯಾಲರಿಯ ಅವಕಾಶವನ್ನು ದುಡಿಸಿಕೊಂಡ ಅಭಿವ್ಯಕ್ತಿ. ಚಿತ್ರ - 38

ಪ್ರಕ್ರಿಯೆಯು ಆ ಸಂದರ್ಭದ ಅನುಭವವನ್ನು ಗ್ರಹಿಸುವಲ್ಲಿ ವೀಕ್ಷಕರನ್ನು ಕ್ರಿಯಾಶೀಲರನ್ನಾಗಿ ಮಾಡುವಲ್ಲಿ ಪ್ರಭಾವ ಬೀರುತ್ತದೆ. ಇದು ಇನ್ನಿತರ ದೃಶ್ಯಮಾಧ್ಯಮದ ಅಭಿವ್ಯಕ್ತಿಗಳಲ್ಲಿ ಅಗತ್ಯವಾಗುವ ದೃಗ್-ಧ್ಯಾನಕ್ಕಿಂತಲೂ ವಿಭಿನ್ನವಾದುದು ಹಾಗೂ ಸಂಕೀರ್ಣವಾದುದು. ಸುತ್ತಲಿನ ಇನ್ನಿತರ ಹತ್ತು ಹಲವು ಆಗುಹೋಗುಗಳಲ್ಲಿ ಆಸಕ್ತಿ ತಳೆದ ವೀಕ್ಷಕರು ಇಲ್ಲಿ ತಲ್ಲೀನರಾಗಿ ನೋಡುವುದರಲ್ಲಿಯೂ ಹಲವರು ಹಲವು ಸ್ತರಗಳಲ್ಲಿ ತೊಡಗಿಕೊಳ್ಳುತ್ತಾರೆ. ಕೆಲವರು ಇನ್‌ಸ್ಟಾಲೇಷನ್ ಕಲೆಯ ಅಭಿವ್ಯಕ್ತಿಯ ನಡುವೆ ದೈಹಿಕವಾಗಿ ನಡೆದಾಡುತ್ತಿದ್ದರೂ ಮಾನಸಿಕವಾಗಿ ಇನ್ನೆಲ್ಲಿಯೋ ಬೇರೆ ಯಾವುದೇ ವಿಷಯದ ಬಗ್ಗೆ ಚಿಂತಿಸುತ್ತಿರಬಹುದು. ಹಾಗಾಗಿಯೇ ಇಲ್ಲಿ 'Activated speactatorship' ನಿಂದಾಗಿ ಕ್ರಿಯಾಶೀಲತೆಯಿಂದ ತೊಡಗಿಕೊಳ್ಳುವಿಕೆ ಸಾಧ್ಯವಾಗುತ್ತದೆ. ಪಶ್ಚಿಮ ಹಾಗೂ ಯೂರೋಪುಗಳ ಇನ್‌ಸ್ಟಾಲೇಷನ್ ಕಲಾ ಪ್ರಕಾರದಲ್ಲಿ ವ್ಯಕ್ತಿ ವಿಕೇಂದ್ರೀಕರಣವೂ ಇವುಗಳ ಜೊತೆಗೆ ಹೆಜ್ಜೆಹಾಕಿತು. ಗಂಡಿನ ಕಣ್ಣಿನ ನೋಟದ ದರಬಾರಿಗೂ ಅಡ್ಡಿಗಳು ಬಂದವು. ರಿನೈಸಾನ್ಸ್ ಸಂದರ್ಭದ ದೃಗ್‌ದರ್ಶನ (Perspective)ದಲ್ಲಿ ಕಲಾಕೃತಿಯ



ಚಿತ್ರ - 39

ವೀವಾನ್ ಸುಂದರಂರವರ Stone column (Mirroring past century 1992).

ಕೇಂದ್ರಸ್ಥಾನದಲ್ಲಿ ನೋಡುಗನನ್ನು ಪ್ರತಿಷ್ಠಾಪಿಸಲಾಗಿತ್ತು. Vanishing pointಗೂ ಕಲಾಕೃತಿಯನ್ನು ನಿಂತು ನೋಡುವ ವೀಕ್ಷಕನ ಕಣ್ಣಿಗೂ ಸಂಪರ್ಕ ಸೇತುವೆ ಇತ್ತು. ಆದರೆ ನಂತರದ ದೃಶ್ಯಕಲಾ ಇತಿಹಾಸ ಹೇಳುವುದೇ ಬೇರೆ. ಈ ಒಂದೇ ದೃಷ್ಟಿಯನ್ನು ವಿಛಿದ್ರಗೊಳಿಸಲಾಯಿತು. ವಿಕ್ಷಿಪ್ತ ಸಂದರ್ಭದ ವೀಕ್ಷಕನ ನೋಟವೂ ವಿಕ್ಷಿಪ್ತತೆಯಿಂದಲೇ ಕೂಡಿರುತ್ತದೆ.[22b] ಸ್ತ್ರೀವಾದಿ ಹಾಗೂ ವಸಾಹತೋತ್ತರ ತತ್ವಗಳ ವಿಮರ್ಶಕರು ಈ ನೋಡುವ 'ಕೇಂದ್ರಿಕೃತ' ದೃಷ್ಟಿ ಪುರುಷಕೇಂದ್ರಿತವಾದದ್ದು ಎನ್ನುತ್ತಾರೆ. ವಿಶ್ವವನ್ನು ನೋಡುವ ಒಂದು ನಿರ್ದಿಷ್ಟವಾದ ಸರಿಯಾದ ದಾರಿ ಇಲ್ಲ; ನಿರ್ದಿಷ್ಟ ತೀರ್ಮಾನಗಳನ್ನು



ಶೀಲಾಗೌಡ ರವರ 'ಸಾಕ್ಷಿಗುಡ್ಡ; ಸಾಕ್ಷಿಗೋಡೆ'',
ಸ್ಥಳ ನಿರ್ದಿಷ್ಟ , ಕಾಲನಿರ್ದಿಷ್ಟ ಅಭಿವ್ಯಕ್ತಿ , 2001. ಎರಡು ನೋಟಗಳು.

ಚಿತ್ರ - 41

ತಳೆಯುವ ಒಂದು ಸರಿಯಾದ ಸ್ಥಳವೂ ಇಲ್ಲ. ಹೀಗಾಗಿ ಇನ್‌ಸ್ಟಾಲೇಷನ್ ಕಲೆಯ ಹಲವು ಕಡೆಗಳ Perspectives, ರಿನೈಸಾನ್ಸ್ ಸಂದರ್ಭದ perspective modelಅನ್ನು ಬುಡಮೇಲು ಮಾಡುವ ಉದ್ದೇಶ ಸಾಧಿಸಿತು. ಹೇಗೆಂದರೆ ಅಲ್ಲಿ ವೀಕ್ಷಕರಿಗೆ ಯಾವುದೇ ಒಂದು ನಿರ್ದಿಷ್ಟ ಸ್ಥಳದಲ್ಲಿ ನಿಂತು ಅಥವಾ ಕುಳಿತು ಅಭಿವ್ಯಕ್ತಿಯನ್ನು ಅನುಭವಿಸುವ ಅಥವಾ ಅವಲೋಕಿಸುವ ಸಂದರ್ಭ ಇಲ್ಲವೇ ಇಲ್ಲ. ಹಲವು ಕಡೆಗಳಿಂದ ಪ್ರವೇಶಿಸಿ ಪಾಲ್ಗೊಂಡು ಅನುಭವಿಸಬಹುದಾಗಿದೆ.

ದೃಗ್‌ದರ್ಶನೀಯ ಜ್ಯಾಮಿತಿಯಲ್ಲಿನ (Perspectival Geometry) ನಿರ್ದಿಷ್ಟ ಪಡಿಸಿದ ಮತ್ತು ಸ್ಥಿರವಾದ ಅವಕಾಶವು (Space) ಹಠಾತ್ತಾದ, ವಿಚ್ಛಿನ್ನಮಯ ಮತ್ತು ವೈವಿಧ್ಯತೆಯ ಅವಕಾಶದ ಪರಸ್ಪರತೆಗೆ (relativity) ಹಾದಿಮಾಡಿಕೊಟ್ಟಿತು. ಈ ಪಲ್ಲಟಗಳು ಇತ್ತೀಚಿನ ಇನ್‌ಸ್ಟಾಲೇಷನ್ ಕಲಾ ಪ್ರಕಾರದ ಬೆಳವಣಿಗೆಯಲ್ಲಿ ಬಹುಮಹತ್ವದ ಬದಲಾವಣೆಗಳಿಗೆ ಕಾರಣವಾದವು. ಸಂಪ್ರದಾಯ ಕಲೆಯ ವಸ್ತುವಿನ ಸ್ಥಳವನ್ನೇ ಸಂವೇದನಾಶೀಲತೆ ಆಕ್ರಮಿಸಿದಂತೆ 'ನೋಡುವಿಕೆ'ಯ ಬಹುಮುಖ್ಯ 'ಸ್ಥಿತಿ'ಯಾಗಿ



ಚಿತ್ರ - 43

ಶೀಲಾಗೌಡ ರವರ 'A blanket and the sky'. medium: tardrum sheets and blanket. 2004.



ಚಿತ್ರ - 40

ಶೀಲಾಗೌಡ "And tell him of my pain", 1988, Thread, Pigment, needles, each measuring 375 feet long. 1.25 cm thick.

ಚಿತ್ರ - 44

ರಬ್ಬವನ್ನು ದುಡಿಸಿಕೊಂಡ ಶೀಲಾಗೌಡರವರ ಒಂದು ಇನ್‌ಸ್ಟಾಲೇಷನ್ ಅಭಿವ್ಯಕ್ತಿ. ಇಲ್ಲಿ ಎ.ಎಸ್. ಮೂರ್ತಿಯವರ ಧ್ವನಿಯನ್ನು ಅಭಿವ್ಯಕ್ತಿಗೆ ಬಳಸಿಕೊಳ್ಳಲಾಗಿತ್ತು.



'ವಿಸರ್ಜನಾ ಲಕ್ಷಣ'[22c] (immersive mode) ಗರಿಗೆದರಿತು. ಅದು 'ಸ್ವಯಂ'ನಿಂದ ಹಿಂದೆಗೆದು ದೈಹಿಕ ಸಂವೇದನಾಶೀಲತೆಗೆ ಜಿಗಿದಂತೆ ಕಾಣಿಸಿಕೊಳ್ಳುತ್ತದೆ. ಈ 'ವಿಸರ್ಜನಾಲಕ್ಷಣ' ಭವಿಷ್ಯದಲ್ಲಿ ಸ್ಥಿರವಾದ ಗಡಿಗಳನ್ನು ನಿರ್ಮಿಸಿಕೊಡದ 'ಗ್ರಹಿಕೆಯ ನೈಜತೆ'ಯಿಂದ ಕಲಾವಿದರು/ ಕಲಾವಿದೆಯರು ದೂರ ಸರಿಯುವಂತೆ ಮಾಡಿತು.

ವೀಕ್ಷಕನ ಇಂದ್ರಿಯ ಗ್ರಹಿಕೆಯ ಮಿತಿಯಲ್ಲಿಯೇ ಇನ್‌ಸ್ಟಾಲೇಷನ್ ಕಲೆ ಕೆಲಸಮಾಡುತ್ತದೆ. ಅದರ ಅಂತಿಮ ಉದ್ದೇಶವೇ ಅವನ ವೈಯಕ್ತಿಕ ಆಸಕ್ತಿಯನ್ನು ಉದ್ದೀಪಿಸುವಂತಹ, ಅವನಿಗೆ ಸಂತಸ ನೀಡುವಂತಹ ರೀತಿಯಲ್ಲಿ ಅವನನ್ನು ತನ್ನ ಕೃತಕವಾದ ವ್ಯವಸ್ಥೆಯಲ್ಲಿ ಆಕ್ರಮಿಸಿಕೊಳ್ಳುವಿಕೆ. ಇನ್‌ಸ್ಟಾಲೇಷನ್ನಿನ ಹಲವು ಟಿಸಿಲುಗಳಿಗೆ Postmodern ಪದದ ನಂಟು. ಈ ಕಲಾ ಪ್ರಕಾರಗಳು ಸಾಂಪ್ರದಾಯಿಕ ವೀಕ್ಷಕ ಹಾಗೂ ಕಲಾವಸ್ತುಗಳ ಸಂಬಂಧವನ್ನು ಕ್ರಾಂತಿಕಾರಿಯಾಗಿ ರೂಪಾಂತರಿಸಿದವು. Post Modern ಸಂಸ್ಕೃತಿಯಲ್ಲಿ "One expression of the gradual detachment of meaning from things" ನಂತೆ ಇನ್‌ಸ್ಟಾಲೇಷನ್ ಕಲೆ ಕಾಣಿಸಿಕೊಂಡಿತು. ಮೊದಲಿಗೆ ಕಲಾಕೃತಿಗಳನ್ನು ತೂಗುಹಾಕುವ, ಪ್ರದರ್ಶಿಸುವ ಅರ್ಥಮಿತಿಯನ್ನು ಹೊಂದಿದ್ದ Installation ಪದ ನಂತರದಲ್ಲಿ 'ಕಾಲ' ಮತ್ತು 'ದೇಶ' ಅಥವಾ 'ಅವಕಾಶ'ಗಳನ್ನು ತನ್ನೊಳಗೆ 'Material'ನಂತೆ ಅರಗಿಸಿಕೊಂಡಿತು. ಸುತ್ತಲಿನ 'ಅವಕಾಶ' ಮತ್ತು ಜನರ 'ಸಂದರ್ಭ' ವನ್ನೂ ತನ್ನದಾಗಿಸಿಕೊಂಡಿತು. ಅವರ ಅಲ್ಲಿನ ಎಲ್ಲ ಸತ್ವ-ಧ್ವನಿಗಳನ್ನು ಜೀವಂತಿಕೆಯಿಂದ ದುಡಿಸಿಕೊಳ್ಳಲಾಯಿತು. ಬದಲಾದ ಸಂದರ್ಭದಲ್ಲಿ ಇನ್‌ಸ್ಟಾಲೇಷನ್ ಕಲೆ ಪ್ರದರ್ಶನ ಅವಕಾಶದ (Space) ಒಳಗೆ ಹೊರಗೆ, ಸುತ್ತಲಿನ ಎಲ್ಲೆಲ್ಲೂ ವ್ಯವಸ್ಥೆಯಾಗಬಲ್ಲದು.[22] ಈ ಪ್ರದರ್ಶನ ಅವಕಾಶ (Space) ಗ್ಯಾಲರಿ, ಮ್ಯೂಸಿಯಂ (ಅಂದರೆ Institutional)





ಚಿತ್ರ - 44ಎ, ಬಿ

ಝೂರಿಚ್‌ನ ಕಲಾವಿದೆ ಲಿಲಿಯನ್ ಹಾಸ್ಲೆರ್‌ರವರ "Encroaching Eye" Fibre, stained glass painting, light 5'x5'x5', 2008 ಮತ್ತು "Destruction of Mammels" ಇನಸ್ಟಾಲೇಷನ್ ಅಭಿವ್ಯಕ್ತಿ, 2006. Courtesy: Sumukha Gallery

(ಕಲಾವಿದೆಯ ಹೇಳಿಕೆಗಾಗಿ ಟಿಪ್ಪಣಿಗಳ ಕ್ರಮ ಸಂಖ್ಯೆ 44, ಪುಟಗಳು 163–164 ಗಮನಿಸಿ.)




ಚಿತ್ರ - 45

ಶೀಲಾಗೌಡ ರವರ 'ಕೊಲ್ಲಾಟ್ರಲ್', 2007. ಜರ್ಮನಿಯ ಕಲೋನ್‌ನ ಕಾಸೆಲ್ Documenta-12 ರ ಪ್ರದರ್ಶನದಲ್ಲಿ ಶೀಲಾಗೌಡ.

ವಾಣಿಜ್ಯ ಸ್ಥಳಗಳೇ ಅಲ್ಲದೆ ವಾಸಮಾಡುವ ಸ್ಥಳ ಅಥವಾ ಸಾರ್ವಜನಿಕ ಸ್ಥಳಗಳೂ ಆಗಬಲ್ಲದು. ಇನ್‌ಸ್ಟಾಲೇಷನ್‌ಗಳಲ್ಲಿ ಬಳಸುವ ಪದಾರ್ಥಗಳನ್ನು Graphic, typographic, plastic, kinetic, photographic, filmic, vedeomatic, telematic Materialಗಳನ್ನು ಸ್ತಬ್ಧ, ಚಲನ ಶೀಲ, ಸಂವಾದಾತ್ಮಕವಾಗಿ ದುಡಿಸಿಕೊಳ್ಳಬುಹುದು.

ಪರಿಕಲ್ಪನಾತ್ಮಕ, ತಾತ್ವಿಕ, ದೈವೀಕ, ಆಧ್ಯಾತ್ಮಿಕ ಅನುಭವಗಳನ್ನು ಉಂಟುಮಾಡುವಂತೆ, ದೈಹಿಕ, ಭೌತಿಕ, ಅನುಭವಗಳನ್ನು ಉಂಟುಮಾಡುವಂತೆ, ದೈಹಿಕ, ಭೌತಿಕ ಮತ್ತು ಯಾಂತ್ರಿಕ ಹಾಗೂ ಸುತ್ತಲಿನ ವಾತಾವರಣಗಳ ನೈಜ ಸತ್ವಗಳನ್ನು cybernetic ಮತ್ತು virtualತಾಂತ್ರಿ ಕತೆಯಿಂದ ತಂದುಕೊಳ್ಳಲು ಪ್ರಯತ್ನಿಸಲಾಗಿದೆ.

ಭಾರತೀಯ ಬರೆಹಗಾರ್ತಿ ಗಾಯತ್ರಿಸಿನ್ಹ".... Unlike the west, installation art in India has not been born of either political or economic exigencies, nevertheless India jumped on to the band wagon just as it was grinding to a halt" ಎಂದು ನಮ್ಮಲ್ಲಿ ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಹೆಚ್ಚಾಗದಿರುವ ಹಿಂದಿನ ಕಾರಣವನ್ನು ಹುಡುಕುತ್ತಾರೆ. ಇರಲಿ, ವಿಸ್ತೃತಗೊಳಿಸಿದ ದೃಶ್ಯ ಅಭಿವ್ಯಕ್ತಿಯ ಮೈದಾನದಲ್ಲಿ ಶಿಲ್ಪದ ಕಲ್ಪನೆ ಹರಡುತ್ತಿರುವ ಸಂದರ್ಭ ಸೃಷ್ಟಿಯಾಗಿರುವುದು ಸಹಜವೇ ಆಗಿದೆ.



ಎನ್. ಪುಷ್ಪಮಾಲಾರವರ *Landcape*, *ಮಾಧ್ಯಮ : ಉಕ್ಕು ಮತ್ತು ನೀರು, 1992.* ಚಿತ್ರ - 47



ಚಿತ್ರ - 46

ಎನ್. ಪುಷ್ಪಮಾಲಾರವರ ಅಭಿವ್ಯಕ್ತಿ, *"PILE", Paper, String, 1993.*



ಚಿತ್ರ - 48, 49

[illegible] (E) Scape, medium : Cloth, Vail material, Sand reflecting surface 15 x 18. [illegible] "The art I embrace is material which provides tactile pleasure in a conflict of discursive space, constructed and deconstructed through experimentation with local and indigmous textiles. The current body of works is an extension of my earliar pieces, 'Inhabiting space within space', and 'life as a journey in every departure has a destination and every destiantion a departure" ಎಂದು ಹೇಳಿಕೊಂಡಿದ್ದಾರೆ.



ಅಭಿವ್ಯಕ್ತಿಗೆ ಒಬ್ಬ ಕಲಾವಿದ /ಕಲಾವಿದೆಯ ಪಲ್ಲಟಗೊಳ್ಳುವ ಸಂವೇಧನೆಗಳ, ಹಲವು ಸಂದರ್ಭಗಳ ಜತೆಗೆ ಮುಖ್ಯವಾಗಿ ಅವನ /ಅವಳ ಒಳಗಿನ ಒತ್ತಡ ಕಾರಣವಾಗುತ್ತದೆಯಷ್ಟೆ. ಈ ಒತ್ತಡದ ತೀವ್ರತೆ ಅವನ/ಅವಳ 'ಸ್ವಯಂ'ನ ಫಲವಾದವೈಯಕ್ತಿಕ ದೃಷ್ಟಿಯ ಸೃಷ್ಟಿಯಾಗಿರುತ್ತದೆ; ಸಹಿಯೂ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಹೀಗಾಗಿಯೇ ಎಲ್ಲೋರದ ಕೈಲಾಸನಾಥ ದೇವಾಲಯದ ರಚನೆಯನ್ನು ಮಹಾಬಲಿಪುರದ ಏಕಶಿಲೆಗಳ ಕಲ್ಲಿನ ರಥಗಳನ್ನು, ಭಾರತದ ಹಲವು ರಾಜ್ಯಗಳೇ ಅಲ್ಲದೆ ಕೇರಳ ಕರ್ನಾಟಕಗಳ ಮತಾಚರಣೆಯ ಸಂಬಂಧದ ಹಲವು ಸಂದರ್ಭಗಳಲ್ಲಿ ಸಾಮೂಹಿಕವಾಗಿ ಸೃಷ್ಟಿಯಾಗುವ ರೂಪಗಳನ್ನು ಇನ್‌ಸ್ಟಾಲೇಷನ್ ಕಲೆ ಎಂದು ಕರೆಯಲಾಗದು. ಪ್ರತಿವರ್ಷ ಅಥವಾ ಜನಸಮೂಹಕ್ಕೆ ಅಗತ್ಯವೆನ್ನಿಸಿದಾಗ ಮಾತ್ರ ಸಾಮೂಹಿಕವಾಗಿ ಸೃಷ್ಟಿಯಾಗುವ ಕಲೆಯ ಮುಸುಕು ಹೊದ್ದ ಮತೀಯ, ಮತಾಚರಣೆಯ



ಚಿತ್ರ - 50

ರಾಘವೇಂದ್ರರಾವ್‌ರವರ ಒಂದು ಅಭಿವ್ಯಕ್ತಿ
ಮಾಧ್ಯಮ : ಮಿಶ್ರ.




ಚಿತ್ರ - 51 ಲಲಿತಾ ಶಂಕರ್‌ರವರ ಒಂದು non- site ಇನ್‌ಸ್ಟಾಲೇಷನ್ ಅಭಿವ್ಯಕ್ತಿ, ಗ್ಯಾಲರಿ ಸುಮುಖ.



ಚಿತ್ರ - 52

ಲಲಿತಾಶಂಕರ್‌ರವರ ಒಂದು ಸ್ಥಳ ನಿರ್ದಿಷ್ಟ ಅಭಿವ್ಯಕ್ತಿ




ಚಿತ್ರ - 53

ಲಲಿತಾ ಶಂಕರ್‌ರವರ "In search of consciousness", ಇನ್‌ಸ್ಟಾಲೇಷನ್ ಅಭಿವ್ಯಕ್ತಿ 2007.

ಲಲಿತಾ ಶಂಕರ್‌ರವರ "In search of consciousness'', ಇನ್‌ಸ್ಟಾಲೇಷನ್ ಅಭಿವ್ಯಕ್ತಿ 2007.


ಚಿತ್ರ - 54





ಚಿತ್ರ - 55 ಎ

ಪರೇಖಾರವರ "The Fragrance of Jasmine" ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ಒಂದು ದೃಶ್ಯ, 2002. This particular set of photographs was shot by three generation of male photographers, "Raj Brothers" : grand father, father and the sons. (Hence the photographs depict women belonging to three generations, since 1960's till date).



ಚಿತ್ರ- 55 ಬಿ


ವೇದನಾಯರ್‌ರವರ
"Mankind 2010"
Bronze, wood, 1981
(ನವದೆಹಲಿಯ 6ನೆಯ ಟ್ರೈನಾಲೆಯ ಸಂದರ್ಭ)

ಹೊಳಹುಗಳ ರೂಪಗಳು ಇನ್‌ಸ್ಟಾಲೇಷನ್ ಕಲೆಯಾಗಬಲ್ಲವೆ? ದಕ್ಷಿಣ ಕನ್ನಡದ ಗಡಿಮಾರಿ ಶಿಲ್ಪಗಳ ಚಲನಶೀಲ ಆಚರಣೆ, ದೇಶದ ವಿವಿಧ ಭಾಗಗಳ ಗಣಪತಿ, ಕಾಳಿ, ಮೆಕ್ಕೆಕಟ್ಟು ಮೊದಲಾದ ದೇವತೆಗಳ ಸೃಷ್ಟಿ, ಪ್ರದರ್ಶನ, ಮೆರವಣಿಗೆ ಹಾಗೂ ವಿಸರ್ಜನೆಯ ಆಚರಣೆಗಳು ಒಂದು ನಿರ್ದಿಷ್ಟ ಜನ ಸಮೂಹದಿಂದ ನಿರ್ದಿಷ್ಟ ಕಾಲದಲ್ಲಿ ಸಾಮೂಹಿಕವಾಗಿ ನಡೆಯುತ್ತವೆ. ಪ್ರತಿವರ್ಷ ಪುನರಾವರ್ತಿತಗೊಳ್ಳುತ್ತವೆ. ರಾಜ್ಯದ ಹಲವು ಭಾಗಗಳು ಹೆಚ್ಚಾಗಿ ಬೆಂಗಳೂರು ಜಿಲ್ಲೆಯ ಬೆಂಗಳೂರು, ಹೊಸಕೋಟೆ, ಮಾಲೂರು ಹಾಗೂ ಕೋಲಾರ ಮೊದಲಾದೆಡೆ ನಡೆಯುವ ಕರಗದ ಆಚರಣೆಯ ಸಂದರ್ಭದ ಆಚರಣೆಗಳು, ನೀರಿನಲ್ಲಿ ಗಣಪತಿ, ಕಾಳಿ ರೂಪಗಳನ್ನು ವಿಸರ್ಜಿಸುವ ಆಚರಣೆ ಇತ್ಯಾದಿಗಳನ್ನು ಇನ್‌ಸ್ಟಾಲೇಷನ್ ಕಲಾಪ್ರಕಾರಕ್ಕೆ ಹೋಲಿಸಲಾಗದು. ಈ ಆಚರಣೆಗಳ ಹಿಂದೆ ಅಭಿವ್ಯಕ್ತಿಸಬೇಕೆಂಬ ಕಲಾವಿದನ / ಕಲಾವಿದೆಯ ಒತ್ತಡದ ಕಾರಣವಿಲ್ಲ. ಅವು ಎಂದೆಂದಿಗೂ ಮುಂದುವರೆಯುತ್ತವೆ. ಹಾಗೆಯೇ ಮಹಾಬಲಿಪುರದ ಕಲ್ಲಿನ ರಥಗಳು, ಬಯಲಿನಲ್ಲಿ ನಿಂತಿರುವ ಇವುಗಳನ್ನು ಅರಸರ ಆಜ್ಞೆಯಂತೆ ಶಿಲ್ಪಿಗಳು ಹಣ ಪಡೆದು ಸೃಷ್ಟಿಸಿದ್ದಾರೆ. ಹಾಗೆಯೇ ಬ್ರಿಟನ್ನಿನಲ್ಲಿರುವ 'ಸ್ಟೋನ್ ಹೆಂಜ್' ಇತಿಹಾಸ ಪೂರ್ವ ರಚನೆಯೂ ಸಹ. ವಿಶೇಷವೆಂದರೆ ಇತ್ತೀಚೆಗೆ ಜಾಗತೀಕರಣದ ಭರಾಟೆಯಲ್ಲಿ ಇನ್‌ಫಾರ್ಮೇಶನ್ ಟೆಕ್ನಾಲಜಿಯ ಕಾರಣಕ್ಕಾಗಿ ಭಾರತ ವಿಶ್ವದ ಗಮನ ಸೆಳೆದಿದೆ. ಹಾಗೆಯೇ ವಿಶ್ವದ ಸಾಂಸ್ಕೃತಿಕ ರಂಗದ ದೃಷ್ಟಿಯೂ ನಮ್ಮತ್ತ ಹಾಗೂ ಪೌರ್ವಾತ್ಯ ರಾಷ್ಟ್ರಗಳ ಸಂಸ್ಕೃತಿಯತ್ತ ಹರಿದಿರುವುದು ಸಹಜವಾಗಿಯೇ ಇದೆ.



ಚಿತ್ರ - 56 *ಕೃಷ್ಣಮಾಚಾರಿ ಬೋಸ್‌ರವರ LAVA (Laboratory of Visual Arts) ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ಒಂದು ದೃಶ್ಯ, 2007. ಬೆಂಗಳೂರಿನ Sumukha ಗ್ಯಾಲರಿಯ ಒಳಾಂಗಣ.*

ಈ ಹಿಂದೆಯೂ ಬ್ರಾಂಕುಸಿ, ಕ್ಲೈನ್ (Klein) ರಂತಹ ಕಲಾವಿದರು, ಯುಂಗ್ (Jung) ಮತ್ತು ಅಂಟೋನಿನ್ ಆರ್ಟ್‌ಡ್‌ರಂತಹ ಮನಶಾಸ್ತ್ರಜ್ಞರು ಪೌರ್ವಾತ್ಯ ಸಂಸ್ಕೃತಿಯ ಅಧ್ಯಯನ ನಡೆಸಿದವರಲ್ಲಿ ಸೇರಿದ್ದಾರೆ. ಇಲ್ಲಿನ ಮತಾಚರಣೆಗಳ ವಿಶಿಷ್ಟತೆ ಅವರನ್ನು ಆಕರ್ಷಿಸಿದೆ; ಆ ಸಂದರ್ಭದ ಸಾಂಸ್ಕೃತಿಕ -ಸೌಂದರ್ಯಾತ್ಮಕ ಸಂಬಂಧೀ ಪರಿಕರ, ಆಭರಣ, ನೃತ್ಯ, ಸಂಗೀತ, ಶಿಲ್ಪ, ಚಿತ್ರ ಇತ್ಯಾದಿಗಳು ಪ್ರಭಾವಿಸಿವೆ. ಪಶ್ಚಿಮದ ಭೌತಿಕ ಬದುಕಿನ ವೈಭವೀಕರಣಕ್ಕೆ ವಿರುದ್ಧ ಮೌಲ್ಯಗಳಾದ ನಶ್ವರತೆ, ಶೂನ್ಯತೆ, ನಿರಂತರತೆ, ಸತ್ಯ ಮತ್ತು ಸೌಂದರ್ಯ ಇತ್ಯಾದಿಗಳು ಅವರನ್ನು ಸ್ಪಂದಿಸಿವೆ. ಹಾಗೆಯೇ ಟಾವೋ, ಬೌದ್ಧತತ್ವಗಳು ಕೌತುಕಗೊಳಿಸಿವೆ. ನಮ್ಮ ಇತಿಹಾಸ ಪೂರ್ವ ಸಾಂಸ್ಕೃತಿಕ ಸೈಟುಗಳೂ ಜಗತ್ತಿನ ಗಮನ ಸೆಳೆದಿವೆ. ಜಪಾನಿನ Iseನಲ್ಲಿರುವ ಷಿಂಟೋ ಧರ್ಮದವರ ಮಂದಿರ ಸೂರ್ಯದೇವನನ್ನು ಹೊಂದಿದೆ. ಕ್ರಿಸ್ತ ಪೂರ್ವ 4ನೆಯ ಶತಮಾನದ ಈ ಮಂದಿರ ಪ್ರಾಂಗಣ ಹಲವಾರು ವಾಸ್ತುಶಿಲ್ಪೀಯ ರಚನೆಗಳನ್ನು ಹೊಂದಿದೆ. ಕ್ರಿ. ಶ.7ನೆಯ ಶತಮಾನದಿಂದ ಪ್ರತಿ 20 ವರ್ಷಕ್ಕೊಮ್ಮೆ ಈ ಮಂದಿರವನ್ನು ಕೆಡವಿ ಅಕ್ಕಪಕ್ಕದ ಸ್ಥಳಗಳಲ್ಲಿ ಪುನರ್ ನಿರ್ಮಿಸಲಾಗುತ್ತಿದೆ. ಕೆಡವಲ್ಪಟ್ಟ ಸೈಟಿನಲ್ಲಿ ಮಿನಿಯೇಚರ್ ಆಕಾರದ



ರಂಜನಿ ಶೆಟ್ಟಾರ್‌ರವರ ಇನ್‌ಸ್ಟಾಲೇಷನ್‌ವೊಂದರ ನೋಟ, 2007. ಚಿತ್ರ - 57

ಮಂದಿರ ಸ್ಥಾಪಿಸಲಾಗುತ್ತದೆ. ಹೊಸದಾಗಿ ನಿರ್ಮಿಸಿದ ಮಂದಿರ 20 ವರ್ಷಗಳ ನಂತರ ಕೆಡವಲ್ಪಟ್ಟು ಸ್ಥಳ ಬದಲಿಸುವ, ಕೆಡ್‌ವಲ್ಪಟ್ಟ ಸ್ಥಳದಲ್ಲಿ ಪುನಃ ಮಿನಿಯೇಚರ್ ಮಂದಿರ ತಂದಿಡುವ ಆಚರಣೆ ಮುಂದುವರೆದಿದೆ. ಬದಲಾವಣೆಯ ರೂಪಕದಂತೆ, ಅವಕಾಶದ (Spatial) ಚಕ್ರ ವಿಶಿಷ್ಟವಾಗಿ ಕಂಡಿದೆ. ಈ ಆಚರಣೆಯ ಅಶಾಶ್ವತತೆ, ಕಾವ್ಯಮಯ ನಿರ್ವಹಣೆ, ಅವಕಾಶದ ರೂಪಕ ಇವುಗಳೆಲ್ಲ ವಿಶ್ವದ ಹಲವಾರು ಕಲಾವಿದರಿಗೆ ಇನ್‌ಸ್ಟಾಲೇಷನ್ ಕಲೆಯ ಮಾದರಿಯಂತೆ ಕಂಡಿದೆ.

ಇನ್‌ಸ್ಟಾಲೇಷನ್ ಕಲೆಯ ಗುಣಲಕ್ಷಣಗಳಲ್ಲಿ ಒಂದೆಂದು ಹೇಳಲಾಗುವ 'ಅಂತರ್‌ಶಿಸ್ತೀಯ ಸಂಕೀರ್ಣತೆ'ಗೆ ಕರ್ನಾಟಕದ ಹಂಪೆಯ ವಿಠಲ ದೇವಾಲಯವನ್ನು ಕಲಾ ಇತಿಹಾಸಕಾರ ಬೊನಿಟಾ ಎಲಿ ಉಲ್ಲೇಖಿಸಿದ್ದಾರೆ, ವಿಜಯ ನಗರದ ವಾಸ್ತುಶಿಲ್ಪ ಸಂಸ್ಕೃತಿ ವಿಖ್ಯಾತ. ತುಂಗಭದ್ರಾ ನದಿಯ ಆಚೀಚೆ ನಿರ್ಮಿಸಲಾದ ಅಲ್ಲಿನ ಅರಸರ ಅರಮನೆಗಳು, ಕೋಟೆ ಕೊತ್ತಲಗಳು ಕ್ರಿ.ಶ.1565ರವರೆಗೂ ಉತ್ತಮವಾಗಿದ್ದವು. ಈ ಶಕ್ತಿಯುತ ಸಾಮ್ರಾಜ್ಯ ಮೊಗಲರಿಂದ ನಾಶಗೊಂಡಿತ್ತಷ್ಟೇ. ಆ ಕಟ್ಟಡಗಳನ್ನು ಪುನಃ ನಿರ್ಮಿಸಲಾಗಲಿಲ್ಲ. ಶಿಥಿಲ - ನಾಶಗೊಂಡ ವಿಠಲ ದೇವಾಲಯದ ನೃತ್ಯ, ಸಂಗೀತಗಳ ಆಚರಣೆ ಇಂದಿಲ್ಲ. ಪಾವಿತ್ರತೆಯ ಪ್ರಾಮುಖ್ಯತೆ ಪಡೆದ ಈ ಸೈಟು, ಶಿಲ್ಪ, ಶಬ್ದ, ನೃತ್ಯ, ಧಾರ್ಮಿಕ ಆಚರಣೆಗಳು ಇತ್ಯಾದಿಗಳ ಸಮಕಾಲೀನ ಇನ್‌ಸ್ಟಾಲೇಷನ್ ಕಲೆಗೆ

ಮಾದರಿಯಾಗಿದೆ ಎಂದು ಹೇಳಲಾಗಿದೆ[23]. ಹಾಗೆಯೇ ವಿಶ್ವದ ಎಷ್ಟೋ ಸಾಂಸ್ಕೃತಿಕ ಸೈಟುಗಳನ್ನು ಈ ಪರಿಧಿಯೊಳಕ್ಕೆ ತಂದುಕೊಳ್ಳುವವರಿದ್ದಾರೆ. ಆದರೆ ಅವೆಲ್ಲಾ ಇಂದು ನಾವು "ಇನ್‌ಸ್ಟಾಲೇಷನ್ ಕಲಾ ಪ್ರಕಾರ" ಎಂದು ಹೇಳುವ ಅಭಿವ್ಯಕ್ತಿಗಳಂತಹವು ಅಲ್ಲ, ಅವುಗಳ ಉದ್ದೇಶ ಇಂದಿನ ಇನ್‌ಸ್ಟಾಲೇಷನ್ ಕಲೆಯ ಉದ್ದೇಶಕ್ಕಿಂತ ವಿಭಿನ್ನವಾದದ್ದು. ಒಬ್ಬನೇ / ಒಬ್ಬಳೇ ಕಲಾವಿದ / ಕಲಾವಿದೆಯ ಅಭಿವ್ಯಕ್ತಿಯು ಸಹ ಅಲ್ಲ. ಸಾಂಸ್ಕೃತಿಕ ಆಚರಣೆಗಳು ಸಮುದಾಯ ಸ್ಮೃತಿಗಳು ತಮ್ಮದೇ ಆದ ಆಶಯಗಳನ್ನು ಹೊಂದಿವೆ.[24] ಹಾಗೆ ನೋಡಿದರೆ ಕೆ.ಜಿ.ಸುಬ್ರಮಣಿಯನ್‌ರವರು ಹೇಳುವಂತೆ visual factsಗಳು ಅಭಿವ್ಯಕ್ತಿಗಳಾಗಲಾರವು; ಅವುಗಳನ್ನು ಆಕರಗಳನ್ನಾಗಿಸಿಕೊಂಡು ದಾಖಲಿಸಿದ ಛಾಯಾಚಿತ್ರಗಳು, ವಿಡಿಯೋ ಹಾಗೂ ಇನ್ನಿತರ ಯಾವುದೇ ಮಾಧ್ಯಮದ ಸೃಷ್ಟಿಗಳು

ಚಿತ್ರ - 58

ನವದೆಹಲಿಯ ೯ನೆಯ ಟ್ರೈ-ನಾಲೆಯಲ್ಲಿ ಜರ್ಮನಿಯ ಆಂಡ್ರೆಯ ರೆಕ್ಸಾನ್ಸ್ ಮತ್ತು ಸ್ಟೀಫಾನ್-ವೊಲ್ಲರಥ್‌ರವರ 'Ganga Boat' ಇನ್‌ಸ್ಟಾಲೇಷನ್ (1997) ನೋಟ. ಹೊಸದಾಗಿ ಕೆತ್ತಿದ ಮರದ ದೋಣಿಯೊಂದಿಗೆ ಗಂಗಾನದಿಗುಂಟ ಪ್ರಯಾಣ ಹೊರಟ ಈ ಇಬ್ಬರು ದಕಾಯಿತರ ಬಲೆಗೆ ಬಿದ್ದು ಪ್ರಯಾಣವನ್ನು ನಿಲ್ಲಿಸಿ ದೋಣಿಗೆ ನದಿಯ ಬದಿಯ ಅಚೆ-ಈಚೆ ಕಂಡ ಬದುಕಿನ ಹಲವು ರೂಪಗಳನ್ನು ಅಲಂಕರಿಸಿ ಆನಂದಿಸಿದರು. ದೆಹಲಿಯ ಗರ್ಹಿ ಸ್ಟುಡಿಯೋದಲ್ಲಿ ಸೃಷ್ಟಿಸಿದ ಟೆರಾಕೋಟಾ ಉಬ್ಬುಶಿಲ್ಪಗಳೂ ಪ್ರದರ್ಶನ ಸಂದರ್ಭದಲ್ಲಿ ಸೇರಿಕೊಂಡವು.





ಚಿತ್ರ - 59

"Quilted" ಸಿ.ಎಫ್. ಜಾನ್, ತ್ರಿಪುರಕಶ್ಯಪ್, ಅಝೀಸ್, ಟಿ. ಎಮ್. ಇನ್‌ಸ್ಟಾಲೇಷನ್, ನೃತ್ಯ ಹಾಗೂ ಫೋಟೋಗ್ರಾಫಿಯನ್ನು ದುಡಿಸಿಕೊಂಡ ಅಭಿವ್ಯಕ್ತಿ. 2003.



ಚಿತ್ರ - 60

ಸಿ.ಎಫ್. ಜಾನ್‌ರವರ ಸ್ಥಳ ನಿರ್ದಿಷ್ಟ ಇನ್‌ಸ್ಟಾಲೇಷನ್ ಒಂದರ ದೃಶ್ಯ. ಸ್ಥಳ: ದೊಡ್ಡಗುಬ್ಬಿ,

ನೀಡುವ ಅನುಭವವೇ ಬೇರೆ. ಆಗ ಅಲ್ಲಿ ಕಲಾವಿದ ಸ್ಪಷ್ಟಪಡಿಸಿದ ವ್ಯಾಖ್ಯಾನದ ಸಹಿಯ ರಾಜಕಾರಣ ಕೆಲಸಮಾಡುತ್ತದೆ. ತನ್ನ ಮೂಲಭೂತ ಹಕ್ಕು ಎಂಬಂತೆ ಹಳೆಯ ವ್ಯವಸ್ಥೆಯ ಕಲೆಯ ಸಾಂಸ್ಥಿಕ ಪಾರುಪತ್ಯವನ್ನು ಪ್ರಶ್ನಿಸುತ್ತದೆ. ಮ್ಯೂಸಿಯಂ ಹಾಗೂ ಗ್ಯಾಲರಿಗಳ ಪಾತ್ರವನ್ನು ಧಿಕ್ಕರಿಸುತ್ತದೆ[25] (ಇಲ್ಲಿ ಫ್ಯೂಚರಿಸ್ಟರ 'ಎಲ್ಲ ಮ್ಯೂಸಿಯಂಗಳನ್ನು ನಾಶಮಾಡಿ' ಎಂಬ ಧೋರಣೆ ಅಪ್ರಸ್ತುತ) ಈ ವ್ಯವಸ್ಥೆಗಳ ನಡುವೆ ಪ್ರದರ್ಶಿಸಲ್ಪಡುವ ಚಿತ್ರ, ಶಿಲ್ಪ, ಪ್ರಿಂಟ್ ಇತ್ಯಾದಿಗಳಿಗಿಂತ ಬೇರೆಯೇ ಉದ್ದೇಶ-ಆಶಯದ ಇನ್‌ಸ್ಟಾಲೇಷನ್ ಕಲೆ ಅಲ್ಲಿ ಪ್ರದರ್ಶಿಸುವ ಇತರ ಕೃತಿಗಳ ನಡುವೆ ಅದೂ ಒಂದು ಅಲ್ಲ; ಬರುವ ವೀಕ್ಷಕನನ್ನೂ ತನ್ನ ಅವಿಭಾಜ್ಯ ಅಂಗವಾಗಿ ಪರಿಗಣಿಸುವ ಇಡೀ ಸ್ಥಳ/ವಾತಾವರಣದ ಒಂದು ಭಾಗ; ಅನುಭವವನ್ನು ಅನುಭವಿಸುವ ಒಂದು ಸ್ಥಳ. ಮ್ಯೂಸಿಯಂ, ಗ್ಯಾಲರಿಗಳಲ್ಲಿ ಎಲ್ಲವನ್ನೂ

ಒಟ್ಟಾಗಿ ಪ್ರದರ್ಶಿಸುವ ವ್ಯವಸ್ಥೆ. ಪ್ರತಿಕಲಾಕೃತಿಯೂ ವಿಭಿನ್ನವಾಗಿ, ಪ್ರತ್ಯೇಕವಾಗಿ ವೀಕ್ಷಕನೊಂದಿಗೆ ಸಂಪರ್ಕ ಸಾಧಿಸುವ ಅಗತ್ಯ ಇಲ್ಲಿ ಇಲ್ಲವಾಗುವ ದುರಂತ. ಜತೆಗೆ ಮ್ಯೂಸಿಯಂಗಳು ತಮ್ಮದೇ ಆದ ರೀತಿಯ ವಿವರಣೆಗಳನ್ನು ವರ್ಗೀಕರಣವನ್ನು ಮಾಡಿ ಇಷ್ಟಬಂದಹಾಗೆ ಪ್ರದರ್ಶಿಸುತ್ತವೆ. ಕಲಾವಿದ/ಕಲಾವಿದೆಗೆ ಇಲ್ಲಿ ಸ್ವಾತಂತ್ರ್ಯ ಇಲ್ಲ. ಅದು ವೀಕ್ಷಕರ ಮುಂದಿಡುವ ಇತಿಹಾಸ ಅಥವಾ ವಿವರಗಳೂ ನಮ್ಮ ಸಂದರ್ಭದ "ಪೋಸ್ಟ್‌ಮಾಡರ್ನ್" ಸಂಸ್ಕೃತಿಯ ನಿರೀಕ್ಷೆಗಳಿಗೆ ಪೂರಕವಾಗಿರುವುದು ಅಸಾಧ್ಯ. ಕಲೆಯ ಒಪ್ಪಿತ ನೀತಿ-ನಿಯಮಗಳನ್ನು ಪಲ್ಲಟಗೊಳಿಸುವ ಇನ್‌ಸ್ಟಾಲೇಷನ್ ಕಲೆ, ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಅಭದ್ರತೆಯನ್ನೇ ತನ್ನ ಪೂರ್ವಾಪೇಕ್ಷಿತ ಅಸ್ತ್ರವನ್ನಾಗಿ ಹೊಂದಿರುವಂತಿದೆ.[26]

ಸರ್ರಿಯಲಿಸ್ಟ್ ಕಲಾಪ್ರದರ್ಶನಗಳು environments, ದಾದಾ ಹಾದಿಗಳಲ್ಲಿ ನಡೆದು ಬಂದು ಅನುಭವವಿರುವ ಇನ್‌ಸ್ಟಾಲೇಷನ್ activist artistsಗಳಿಗೂ ನೆರವಾಯಿತು. ಸ್ತ್ರೀವಾದಿ ಚಿಂತನೆಗಳೂ ಈ ಕಲಾಪ್ರಕಾರದ ನೆರವು ಪಡೆದದ್ದು ಉಂಟು.[27] 1968ರಲ್ಲಿ ನ್ಯೂಯಾರ್ಕಿನ CBS ಪ್ಲಾಝಾ (53ನೆಯಗಲ್ಲಿ)ದಿಂದ ಭೂಮಿಯ ಅವಕಾಶದಿಂದ ಹೊರಗಿನ ಅವಕಾಶಕ್ಕೆ ಜೇಮ್ಸ್‌ಲೀಬೈಯರ್ಸ್ 1ಮೈಲಿ ಉದ್ದದ ಚಿನ್ನದ ದಾರವನ್ನು ಹೀಲಿಯಂ ಬಲೂನಿನ ಮೂಲಕ ಸಾಗಿಸಿದ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯೂ ನಡೆಯಿತು. 21ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ತನ್ನ ಅಸ್ತಿತ್ವವನ್ನು

ಚಿತ್ರ - 61

ಶ್ರೀನಿವಾಸಪ್ರಸಾದರ "ಬೆಂಗಳೂರು ಕರಗ" ಸ್ಥಳ: ಕಾಲ-ನಿರ್ದಿಷ್ಟ ಇನ್‌ಸ್ಟಾಲೇಷನ್, 2006
ಸ್ಥಳ: ಎಂ.ಜಿ. ರಸ್ತೆ ಬೆಂಗಳೂರು.





ಚಿತ್ರ - 62

ಡಾ|| ಶಿವಾನಂದ ಬಂಟನೂರರವರ ಶೀರ್ಷಿಕೆರಹಿತ non-site *ಸ್ಥಳ - ಕಾಲ ನಿರ್ದಿಷ್ಟ ಇನ್‌ಸ್ಟಾಲೇಷನ್, ಮಾಧ್ಯಮ : ಮರ, 2001.*



ಚಿತ್ರ - 63

ರವಿಷಾರವರ ಒಂದು ಇನ್‌ಸ್ಟಾಲೇಷನ್ ಅಭಿವ್ಯಕ್ತಿ.

ಸಾಧಿಸಿಕೊಂಡ ಈ ಕಲಾಪ್ರಕಾರದಲ್ಲಿ ಗುರುತಿಸಲಾಗುವಂತಹ, ಪ್ರಾತಿನಿಧಿಕವಾದ ಅಭಿವ್ಯಕ್ತಿಗಳಿಗೆ ಕಾರಣರಾದರು. ಈ ಹಿಂದೆ ಉಲ್ಲೇಖಿಸಿರುವಂತೆ ತನ್ನ flexibility ಮತ್ತು ಅಪೂರ್ವ ವೈವಿಧ್ಯತೆಯ ಕಾರಣಗಳಿಂದಾಗಿ 'ಇನ್‌ಸ್ಟಾಲೇಷನ್' ಎಂಬ ಪದ ಒಂದು ನಿರ್ದಿಷ್ಟ ಕಲಾಪ್ರಕಾರವನ್ನು ಗುರುತಿಸುವ ಪದವಾಗಿ ದಾಖಲಿಸಲ್ಪಡುವುದಕ್ಕೆ ಬದಲಾಗಿ ವೈವಿಧ್ಯಮಯ ಹೊಸ ಅಭಿವ್ಯಕ್ತಿಗಳನ್ನು ಗುರುತಿಸಲು ಸಾಧ್ಯವಾಗುವಂತೆ




ಚಿತ್ರ - 64

ಮಂಜುನಾಥ್‌ರವರ ಒಂದು non-site ಇನ್‌ಸ್ಟಾಲೇಷನ್.


ಸಾಮಾನ್ಯೀಕರಣಗೊಂಡ ಪದವಾಗಿ ದಾಖಲಿಸಲ್ಪಟ್ಟಿತು. 'ಜಾಗತೀಕರಣ' ಎಂಬ ಶಬ್ದವೂ ಇಲ್ಲಿ ಅರ್ಥಕಳೆದುಕೊಳ್ಳುವ ಹಾಗೆ ಕಲಾವಿದ / ಕಲಾವಿದೆಯರು ಇಡೀ ವಿಶ್ವದ ರಾಷ್ಟ್ರಗಳ 'ಸೈಟು'ಗಳನ್ನು ಒಳಗೊಂಡಂತೆ ದೊಡ್ಡರೀತಿಯಲ್ಲಿ ಅಭಿವ್ಯಕ್ತಿಸಬಲ್ಲರು. ಅತಿ ಸಾಧಾರಣ ಪ್ರಕ್ರಿಯೆ ಇದು ಎಂದೂ ಸಾಧಿಸಬಿಡಬಲ್ಲರು.

'Installation art'[28] in the new millennium (2003)ನ ಮುನ್ನುಡಿಯಲ್ಲಿ Jonathan Crary ಕಳೆದ 125 ವರ್ಷಗಳಲ್ಲಿ 'dramatic transfer of human capabilities to machines, especially capabilitities involving vision,



ಚಿತ್ರ - 65

ಜಿ. ಸುರೇಶ್‌ಕುಮಾರ್‌ರವ
"Life-line", non-stie specific installation, 2003




ಚಿತ್ರ - 66

ಮಿಟ್ಟು ಕಟಾವರವರ non-site ಇನ್‌ಸ್ಟಾಲೇಷನ್, 'Every thing is Raw', Material : egg container, cigarate box, canvas, mosquito coil box, and thread.



ಚಿತ್ರ - 67ಎ

ವಿ.ಜಿ. ವೇಣುಗೋಪಾಲ್‌ರವರ "Here I am....." ಮಿಶ್ರ ಮಾಧ್ಯಮದ ಇನ್‌ಸ್ಟಾಲೇಷನ್. MDF ಬೋರ್ಡ್ ಮೇಲೆ ಅಕ್ರಿಲಿಕ್ ಬಣ್ಣಗಳು. ಅಳತೆ: ನೆಲದ ಅವಕಾಶದಲ್ಲಿ 95"x40", 2004. Display version.



ಚಿತ್ರ - 67ಬಿ

ವಿ.ಜಿ. ವೇಣುಗೋಪಾಲ್‌ರವರ "Here I am....." ಇನ್‌ಸ್ಟಾಲೇಷನ್ನಿನ ವೀಕ್ಷಕರಿಂದ ಆದ Assembled Version.

thought and memory which continued unabated to day in terms of tools for information stroage communication and visualization.... we are now in a material environment where earlier 20th century models of spectatorship, contemplation and experience are inadequate for under standing the conditions of cultural creation and reception'. ಎಂದು ದಾಖಲಿಸಿರುವ ರೀತಿಯಲ್ಲಿ ಕಲಾವಿದರ Installation ಅಭಿವ್ಯಕ್ತಿಗಳನ್ನು ನೋಡುವ ವೀಕ್ಷಕರೂ 'ನಾನೇರಿದೆತ್ತರಕೆ ನೀನೇರ ಬಲ್ಲೆಯಾ?' ಎಂಬಂತಲ್ಲದೇ 'ನೀನನ್ನೊಡನಿದ್ದರೆ ಅದುವೆ ನನಗೆ ಸ್ವರ್ಗ ಸಮಾನ[29]' ಎಂಬಂತಹ ರೀತಿಯದು. ಹಾಗೆಯೇ ಪ್ರೇಕ್ಷಕನ ಅಸಾಮಾನ್ಯ ಆಸಕ್ತಿ ಕೌತುಕಗಳಿಗೆ ಪ್ರಾಮುಖ್ಯತೆ ಹೆಚ್ಚು. ಆದರೆ ಕಲಾವಿದೆ ಬರ್‌ಬಾರ್



ಉದಯ ವೀರಸಿಂಗ್‌ರವರ non-site ಇನ್‌ಸ್ಟಾಲೇಷನ್ ಒಂದರ ನೋಟ. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಗ್ಯಾಲರಿ. ಚಿತ್ರ - 68

ಕ್ರೂಗರ್ public attitudes ಬಗೆಗಿನಸ್ತ್ರೀವಾದಿ ಆಕ್ರೋಶದ ಹಿನ್ನೆಲೆಯಲ್ಲಿಯೂ '...but their zones of intimacy which create clusterphobic spaces' ನಂತಹ ದೃಷ್ಟಿ ಹೊಂದುವುದು ಅಗತ್ಯವಾಗಿದೆ. ಬದಲಾದ ಸಂದರ್ಭದಲ್ಲಿ ತನ್ನ ಚಲನಶೀಲತೆಯಿಂದ ಹತ್ತು ಹಲವು ಅವತಾರಗಳಿಂದ ಇನ್‌ಸ್ಟಾಲೇಷನ್ ಆರ್ಟ್ ಹೆ ಊಸರೀತಿಯ ವೀಕ್ಷಕರನ್ನು ತನ್ನತ್ತ ಸೆಳೆಯುವುದರ ಮೂಲಕ ವಿಶಿಷ್ಟ ದೃಷ್ಟಿಯ ವೀಕ್ಷಕರ ಭಾಗವಹಿಸುವಿಕೆಗೆ ಕಾರಣವಾಗುತ್ತಿದೆ.[26(3)] ವೀಕ್ಷಕರಿಗಾಗಿ ಕಲಾವಿದ/ಕಲಾವಿದೆ ತಮ್ಮನ್ನು ಅಭಿನಯ ಅಥವಾ ಅಭಿವ್ಯಕ್ತಿ ಪ್ರಕ್ರಿಯೆಯ ಸಂದರ್ಭದಲ್ಲಿ ನಿರ್ವಹಿಸಿಕೊಳ್ಳಲೇಬೇಕೆಂದೇನೂ ಇಲ್ಲವಾದರೂ ಅವರೊಂದಿಗೆ ಒಂದಾಗುವ ಅಗತ್ಯ ಇದ್ದೆ ಇದೆ. ಇಲ್ಲಿ ವೀಕ್ಷಕನ ನೈಜ ಬದುಕಿನ ಅನುಭವಗಳು ಕಲಾವಿದ/ಕಲಾವಿದೆಯ ಅನುಭವದೊಂದಿಗೆ ಮುಖಾಮುಖಿಯಾಗುವ ಕೆಲವೊಮ್ಮೆ ಪಲ್ಲಟಗೊಳ್ಳುವ ಸಂದರ್ಭ. ಕಲಾವಿದನ ಆಶಯ, ನಿರೀಕ್ಷೆಗಳನ್ನು ಮೀರಲೂ ಬಹುದು. ಇಂತಹ ಮುಖಾಮುಖಿಗಳು 'ವಾಣಿಜ್ಯ ಉದ್ದೇಶ'ದ ಚಟುವಟಿಕೆಗಳಾಗಿಯೂ



ಚಿತ್ರ -69

ಶಕುಂತಲಾ ಕುಲಕರ್ಣಿ 'Reduced Sapces'
ವಿಡಿಯೋ ಇನ್‌ಸ್ಟಾಲೇಷನ್‌ನ ಒಂದು ದೃಶ್ಯ. 2002.

ಯಶಸ್ವಿಯಾಗಬಹುದು. ಬ್ರಿಟೀಷ್ ಕಲಾವಿದ Mark Povellನ Supply & Demand (Museum of Installation, london, 2001) ಇಲ್ಲಿ ನೆನಪಾಗುತ್ತಿದೆ. ವೀಕ್ಷಕರ ಪ್ರಾಮುಖ್ಯತೆ, ಪಾಲ್ಗೊಳ್ಳುವಿಕೆಯ ಬೆಳವಣಿಗೆಯಲ್ಲಿ 'ವೀಕ್ಷಕರನ್ನೆ ಸೈಟಾಗಿ ನೋಡುವ' ಅಂದರೆ ಕಲಾಕೃತಿಯ ಅಥವಾ ಅಭಿವ್ಯಕ್ತಿಯ ಕೇಂದ್ರ ಬಿಂದು ಮತ್ತು ಅನುಭವಗಳು ಈ ಹಿಂದಿನ ಸೌಂದರ್ಯಾತ್ಮಕ ಮತ್ತು ಕಲಾ ಇತಿಹಾಸದ ಪ್ರಶ್ನೆಗಳಿಗೆ ಬದಲಾಗಿ ಇನ್‌ಸ್ಟಾಲೇಷನ್ನಿನ ಸಂದರ್ಭದ ಸಾಮಾಜಿಕ ಐಕ್ಯತೆಗೆ ಹೆಚ್ಚಿನ ಒತ್ತು ನೀಡುತ್ತಿವೆ. ವೀಕ್ಷಕನ ಮನಸ್ಸಿನ ಪ್ರಕ್ರಿಯೆಯೂ Work of art ಆಗುವಂತಹ ರೀತಿಯಲ್ಲಿ ಕ್ಯೂರೇಟರ್, ಕಲಾವಿದ/ಕಲಾವಿದೆ ಮತ್ತು ವೀಕ್ಷಕರ ನಡುವೆ ನಡೆಯುವ 'ಪರಸ್ಪರ' ಸಂವಾದ, ಚಟುವಟಿಕೆ ಇತ್ಯಾದಿಗಳು ಅಭಿವ್ಯಕ್ತಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.[26(1)] ಹೀಗಾಗಿಯೇ ಚೀನಾದ ಕ್ಯೂರೇಟರ್ HOU HANRU 'ನಾವು ನೇರವಾಗಿ ಮತ್ತು ಒಟ್ಟಾಗಿ ಸಂದರ್ಭಗಳ ಸೃಷ್ಟಿಗೆ ಕೊಡುಗೆ ನೀಡುತ್ತೇವೆ'[26(2)] ಎಂದದ್ದು.



ಉದಯ ವೀರಸಿಂಗ್‌ರವರ
"Untitled"
ಇನ್‌ಸ್ಟಾಲೇಷನ್ ಅಭಿವ್ಯಕ್ತಿ
Medium : Fallen twigs,
size 8x5½ feet, 2005



ಚಿತ್ರ - 71

ಅವಿನಾಶ್ ವೀರ
ರಾಘವನ್‌ರವರ
ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ
ಒಂದು ನೋಟ.



ಚಿತ್ರ - 72 ಕೃಷ್ಣರಾಜ್ ಚೌನಾಟ್‌ರವರ ಒಂದು ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ಒಂದು ನೋಟ.

ಇನ್‌ಸ್ಟಾಲೇಷನ್ ಕಲಾ ಪ್ರಕಾರದ ಬೆಳವಣಿಗೆಗೆ ವಿಶೇಷ ಕೊಡುಗೆ ನೀಡಿರುವವರಲ್ಲಿ ಭಾರತೀಯ ಕಲಾವಿದ/ಕಲಾವಿದೆಯರೂ ಇದ್ದಾರೆ. ಅವರ ಬಗ್ಗೆ ಪ್ರಸ್ತಾಪಿಸುವುದಕ್ಕೆ ಮೊದಲು ಈ ಕಲೆಯ ಸ್ಪಷ್ಟತೆ(?) ಹಾಗೂ ಸಾಧ್ಯತೆಗಳನ್ನು ಬಿಂಬಿಸಲು ದೊಡ್ಡರೀತಿಯಲ್ಲಿ ಅಭಿವ್ಯಕ್ತಿಸಿದ ಹೊರಗಿನ ಹಲವರಲ್ಲಿ ಕೆಲವರ ಬಗ್ಗೆಯಾದರೂ ಇಲ್ಲಿ ಹೇಳಲೇಬೇಕು.[30]

ಅಮೆರಿಕೆಯ ರಾಬರ್ಟ್ ಸ್ಮಿತ್‌ಸನ್ (1938-1973) 1970ರಲ್ಲಿ ಸಾಲ್ಟ್ ಸರೋವರದಲ್ಲಿ 'spiral jetty ' ಶಿರ್ಷಿಕೆಯಲ್ಲಿ ಸರೋವರದಲ್ಲಿ ನೀರು, ಮಣ್ಣು, ಉಪ್ಪಿನಹರಳುಗಳು, ಬಂಡೆಗಳು, ಸಮುದ್ರದ ಪಾಚಿ ಇತ್ಯಾದಿಗಳನ್ನೆಲ್ಲ ದುಡಿಸಿಕೊಂಡು 1500ಅಡಿ (450 ಮೀಟರ್) ಉದ್ದ x 15ಅಡಿ (457 ಮೀಟರ್)ಅಗಲದ Earth work ಸೃಷ್ಟಿಸಿ ವೀಕ್ಷಕರು ಆ ಸೈಟಿಗೆ ಆಗಮಿಸಿ ನಡುವೆ ನಡೆದಾಡಿದಾಗ, ಆಗಸದಿಂದ ಅದರ ದೃಶ್ಯವಿಶಿಷ್ಟತೆಯನ್ನು ಅನುಭವಿಸಿದಾಗ ರೋಮಾಂಚನಗೊಂಡ ದಾಖಲೆಗಳಿವೆ. ಹಾಗೆಯೇ ಬಂದ ದಾರಿಗೆ ಸುಂಕವಿಲ್ಲದೆ ಪುನಃ ಹಿಂತಿರುಗಲೇ ಬೇಕಾದ ಸಂದರ್ಭ. ಪರಿಸರ ಪ್ರೀತಿಯ ಮನಸ್ಸು ಈ ಅಭಿವ್ಯಕ್ತಿಯನ್ನು ಪ್ರಭಾವಿಸಿದೆ. 1960ರ ಸಂದರ್ಭದ 'environment' ಕಲ್ಪನೆಯು ವೀಕ್ಷಕನನ್ನು ಅನುಲಕ್ಷಿಸಿ ರಾಬರ್ಟ್ ಸ್ಮಿತ್‌ಸನ್‌ರಂತಹವರಿಂದ ವಿಸ್ತೃತಗೊಳಿಸಲ್ಪಟ್ಟಿತು. ಇವನೊಂದಿಗೆ ಅಮೆರಿಕೆಯ ಮೈಖೇಲ್ ಹೈಝರ್, ನ್ಯಾನ್ಸಿಹಾಲ್ಟ್ ಜೇಮ್ಸ್ ಟುರೆಲ್, ವಾಲ್ಟರ್‌ಡಿ ಮಾರಿಯಾ ಮೊದಲಾದವರು ಸೈಟ್‌ನಿರ್ದಿಷ್ಟ ಅಭಿವ್ಯಕ್ತಿಗಳನ್ನು ಪ್ರದರ್ಶಿಸಿದರು.



ಚಿತ್ರ - 73

Khoj-2001, ಮೈಸೂರಿನ ಕಲಾ ಶಿಬಿರದಲ್ಲಿ ವಿದೆಯೊಬ್ಬರ ಅಭಿವ್ಯಕ್ತಿ.



ಚಿತ್ರ - 74

ಎಂ.ಜಿ. ದೊಡ್ಡಮನಿಯವರ *Surrendering to the peace.....", 2007.* ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ಒಂದು ನೋಟ.




ಚಿತ್ರ - 75

ಪುರುಷೋತ್ತಮ ಅಡವೆಯವರ ಇನ್‌ಸ್ಟಾಲೇಷನ್‌ನ ಒಂದು ನೋಟ.

ಚಿತ್ರ - 76

ರವಿಕುಮಾರ್ ಕಾಶಿಯವರ 'Book of Alphabets' - for pepsi, 2001.
18"x36"x18"



ಕ್ರಿಸ್ಟೊ (ಅಮೆರಿಕ1935) ನೆಲವನ್ನು ಪ್ರೀತಿಸಿ ಅಭಿವ್ಯಕ್ತಿಸಿದವನು. ಹಲವು ಮಹತ್ವಾಕಾಂಕ್ಷಿ ಪ್ರಾಜೆಕ್ಟ್‌ಗಳನ್ನು ಕೈಗೊಂಡವನು. ಕಟ್ಟಡಗಳನ್ನು ಬಟ್ಟೆಯಿಂದ ಹೊದಿಸುವ, ದ್ವೀಪಗಳನ್ನು ತೇಲುವ ಪಾಲಿಪ್ರಾಪಿಲೀನ್ ಹಾಳೆಗಳಿಂದ ಸುತ್ತುವರೆಯುವ, ಒಳನಾಡಿನ ಬೆಟ್ಟಗಳು ಹಾಗೂ ಸಮುದ್ರ ತೀರ ಪ್ರದೇಶಗಳಿಗೆ ಮೈಲಿಗಟ್ಟಲೆ ಬೇಲಿ ಹಾಕುವ ಅಸಾಮಾನ್ಯ, ಅಪೂರ್ವ ಅಭಿವ್ಯಕ್ತಿಗಳಿಗೆ ಕಾರಣನಾದವನು. ಹಲವಾರು ವರ್ಷಗಳ ತಾಳ್ಮೆ, ಯೋಜಿತಚಿಂತನೆಗಳು ಇವುಗಳ ಹಿನ್ನೆಲೆಗಿವೆ. ಪೂರ್ವಭಾವಿ ರೇಖಾಚಿತ್ರಗಳ ಮಾರಾಟದಿಂದ ಈ ಯೋಜನೆಗಳಿಗೆ ಹಣ ಹೊಂದಿಸಲಾಗುತ್ತಿತ್ತು. The Umbrellas Japan-USA 1984-91, ಸ್ಥಳ ಅಥವಾ ಸೈಟು ನಿರ್ದಿಷ್ಟ ಅಭಿವ್ಯಕ್ತಿಯ ಬಣ್ಣಲೇಪಿಸಿದ ಛಾಯಾಚಿತ್ರಗಳು, ಕ್ರೇಯಾನ್ ಮಾಧ್ಯಮದ ಮ್ಯಾಪುಗಳು, ಪೆನ್ಸಿಲ್, ಚಾರ್‌ಕೋಲ್ (ಸುಟ್ಟದ್ರಾಕ್ಷಿ ಬಳ್ಳಿಯ ಇದ್ದಿಲು) ಬಟ್ಟೆ, ಪೇಸ್ಟಲ್, ಕ್ರೇಯಾನ್, ಮ್ಯಾಪ್, ಬಣ್ಣ ಇತ್ಯಾದಿಗಳನ್ನು ದುಡಿಸಿಕೊಂಡ ಕೋಲಾಜ್‌ಗಳು ತಾವೇ ಕಲಾಕೃತಿಗಳ ಮೌಲ್ಯವನ್ನು ಹೊಂದಿ ಮಾರಾಟವಾದ ರೀತಿ ಗಣನೀಯ. ಜತೆಗೆ Key-Sketch, drawing ಇತ್ಯಾದಿಗಳು ಈ ಸೈಟಿನ ಕಲ್ಪನೆ ಬೆಳೆಯಲು ನೆರವಾದವು. ಕ್ರಿಸ್ಟೋನ ಈ ಅಭಿವ್ಯಕ್ತಿಗಳು ಸೈಟು/ಸ್ಥಳ ನಿರ್ದಿಷ್ಟ, ಕಾಲ ನಿರ್ದಿಷ್ಟ (ಪ್ರದರ್ಶನದ ಅವಧಿ ಕೆಲವೇ ದಿನಗಳು, ಅಥವಾ ಕೆಲವು ವಾರಗಳು) ವಾದವು. ಅಮೆರಿಕ ಮತ್ತು ಜಪಾನ್‌ಗಳ ನಡುವೆ ಸಂಪರ್ಕ ಸಾಧಿಸಿದ ಈ ಅಭಿವ್ಯಕ್ತಿಯಲ್ಲಿ ಬೃಹತ್ ನೀಲಿ ಮತ್ತು ಹಳದಿಯ ಬಣ್ಣದ ಕೊಡೆಗಳು ದುಡಿಸಿಕೊಳ್ಳಲ್ಪಟ್ಟವು. 6 ಮೀಟರ್ ಎತ್ತರ 8 ಮೀಟರ ಅಗಲದ ಮುಚ್ಚಿ ತೆರೆಯಲ್ಪಡುವ ಸಾಲು ಸಾಲು ಕೊಡೆಗಳು ಜಪಾನಿನ (1984) ಸತೋಕಾವಾ ನದಿಯ ಇಳಿಜಾರು ಕಣಿವೆಯ ಉದ್ದಕ್ಕೂ ಕೊಡೆಗಳು. ಹಾಗೆಯೇ ಅಮೆರಿಕದ ಕ್ಯಾಲಿಫೋರ್ನಿಯಾದ ಸೈಟಿನಲ್ಲೂ ಈ ಕೊಡೆಗಳ ಬೆಡಗು (1991) ಕಾಣಿಸಿಕೊಂಡಿತು. 'We were confronted by the essence of Japanses space.... a sort of hidden geometry became more



ಚಿತ್ರ - 77

ಪ್ರಶಾಂತ್‌ಸೋನಿಯವರ "unseen/seen", ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ಒಂದು ದೃಶ್ಯ. 2001.



ಚಿತ್ರ - 78 ಅನಿತಾದುಬೆಯವರ *'Hallelnja Falleluja', Medium/material : Glas, Styrofoam, bandage, paint, steel cables, lights, electrical wires, etc, 2005.*

and more visible to me as we located the site' ಎನ್ನುವ ಕ್ರಿಸ್ಟೊ ಕೊಡೆಗಳು ಸೈಟಿನ/ಭೂದೃಶ್ಯದ ಪರಿಛಿತಗಳಿಗೆ ಹೊರಮ್ಮೆವಳಿಕೆಗಳಿಗೆ ಹೊಂದಿಕೊಂಡು ವೀಕ್ಷಕರಿಗೆ 'ದೃಶ್ಯಸಂಧಿ' (visual focus) ಯ ಪಾತ್ರ ವಹಿಸಿದ್ದನ್ನು ಗಮನಿಸಿ, 'They Create a dialogue between the forms which I invented and the many different elements in those spaces' ಎನ್ನುತ್ತಾನೆ. ಅಲ್ಲಿನ ವಾತಾವರಣ, ಜನರ ಬಗ್ಗೆ 'Even though we will not disturb the farming or the every day lives of the people there, the project will certainly create some changes in their lives... conservative people often do not like changes.... the project will confront them and cause them to re-examine themselves.... It takes courage, curiosity, enthusiasm and excitement to accept something which they have never faced before.'[31] ಹೀಗೆ ನಿರ್ದಿಷ್ಟ ಸೈಟನ್ನು ದುಡಿಸಿಕೊಂಡು ಅಭಿವ್ಯಕ್ತಿಸಿದಾಗ ಉಂಟಾಗುವ ಅನುಭವ ಇದೇ ವಸ್ತುಗಳನ್ನು ಬೇರೆ



ಚಿತ್ರ - 79

ಉಮೇಶ್‌ರವರ, 'ಚಕ್ರವ್ಯೂಹ' ಸ್ಥಳನಿರ್ದಿಷ್ಟ - ನೆಲ ಅಭಿವ್ಯಕ್ತಿ ಆಸ್ಟ್ರೇಲಿಯ, 1998.



ಚಿತ್ರ - 80

Vivan Sundaram, House/Boat (Boat: installation view), 1994 700 x 250 x 180 cm, Kalamkhush handmade paper, steel, glass, wood, video monitor (with Maya Krishna Rao in performance), collection: Artist, New Delhi "The boat, a container grounded for temporary shelter, and stationed beside the assaulted home, is wide open for the spectator to walk into, or to view the video enactment at the prow end. Propped up on railway sleepers, the ensemble can also be read as that of a cross: the dysfunctional boat, hoisted up awkwardly, its body lying on heavy blocks of wood carrying the marks of nails" (Vivan Sundaram in an interview for the exhibition, Shelter, in 1999 at Delhi/Mumbai)



ಚಿತ್ರ - 81

ಎಸ್. ಗೋಪಿನಾಥ್‌ರವರ 'TRAP' ಇನ್‌ಸ್ಟಾಲೇಷನ್, ಅಭಿವ್ಯಕ್ತಿ 1997. ಚಿತ್ರಕಲಾಪರಿಷತ್ತಿನ ಆವರಣ.



ಚಿತ್ರ - 82

ಸುಬೋಧ್ ಘೋಷ್‌ರವರ '29 Mornings'
ಇನ್‌ಸ್ಟಾಲೇಷನ್, 1996.

ಬೇರೆ ಸೈಟುಗಳಲ್ಲಿ ಅಳವಡಿಸಿದಾಗ ವಿಭಿನ್ನ ಅನುಭವ ಸಾಧ್ಯತೆಗಳು ಅಲ್ಲಿನ ವೀಕ್ಷಕ ಸಮುದಾಯಕ್ಕೆ ಉಂಟಾಗಬಹುದು. ಅವು ಮೊದಲಿನದಕ್ಕಿಂತ ಬೇರೆಯೇ ಆದ ಅಭಿವ್ಯಕ್ತಿಗಳೂ ಆಗಬಹುದು. ಆ ಅಭಿವ್ಯಕ್ತಿಯು ಯಾವ ಸಂದರ್ಭ, ಹಿನ್ನೆಲೆಗಳಲ್ಲಿ ಕಾಣಿಸಿಕೊಂಡಿದೆ ಎಂಬ ಅಂಶಗಳೂ ವೀಕ್ಷಕನಿಗೆ ಉಂಟಾಗುವ ಅನುಭವದ ಮೇಲೆ ಪ್ರಭಾವ ಬೀರುತ್ತವೆ. ಆದರೆ ಇಂದಿನ 'Global present'ನ ಕಾರಣದಿಂದ 'Information technology' ಪ್ರವಾಹದಲ್ಲಿ 'epistemological crisis'ನ ಅಲೆಗೆ ಸಿಕ್ಕಿಕೊಂಡಿರುವ ಇನ್‌ಸ್ಟಾಲೇಷನ್ ಕಲೆಯ ಮೂಲಕ ಅಭಿವ್ಯಕ್ತಿಸುತ್ತಿರುವ ಕಲಾವಿದ/ಕಲಾವಿದೆಯರು ಜಾಗತಿಕ, ಹೊಸತನ ಒತ್ತಡಗಳಲ್ಲಿ ಅಭಿವ್ಯಕ್ತಿಸುತ್ತಿದ್ದಾರೆ. ಬದಲಾಗುತ್ತಿರುವ ಭೂದೃಶ್ಯಗಳು ಅದರಲ್ಲೂ ನಗರ ಸಂಸ್ಕೃತಿಯ ಭೂದೃಶ್ಯಗಳು ತಮ್ಮ ಮೂಲ ಹೆಗ್ಗುರುತುಗಳನ್ನು (landmark) ಕಳೆದುಕೊಳ್ಳುತ್ತಿವೆ. ಉಳಿದುಕೊಂಡಿರುವ ಅಲ್ಪಸ್ವಲ್ಪ ಹಳೆಯ ಐತಿಹಾಸಿಕ ಪ್ರಜ್ಞೆಯ ಹೆಗ್ಗುರುತುಗಳನ್ನು ಉಳಿಸಿಕೊಂಡಿರುವ ರಸ್ತೆ, ಪ್ರದೇಶಗಳನ್ನು ಹೊರತು ಪಡಿಸಿ ನೋಡಿದರೆ ಭಾರತವನ್ನೂ ಒಳಗೊಂಡಂತೆ ವಿಶ್ವದ ಎಲ್ಲ ಪ್ರಮುಖನಗರಗಳ ಬೀದಿಗಳು ಬಹುತೇಕ ಒಂದೇ ರೀತಿ ಕಾಣುತ್ತವೆ. ಜಾಗತೀಕರಣದ

ಫಲವಾದ ಈ ಬಳುವಳಿಗೆ ಅಂತಾರಾಷ್ಟ್ರೀಯ ಬ್ರಾಂಡೆಡ್-ಕಂಪನಿಗಳು ಎಲ್ಲೆಡೆ ಬೇರುಬಿಟ್ಟಿರುವುದು ಮುಖ್ಯ ಕಾರಣವಾಗಿದೆ. ದೆಹಲಿ ಮುಂಬಯಿ, ಕೊಲ್ಕತ್ತಾ, ಬೆಂಗಳೂರು, ಹೈದರಾಬಾದು ನಗರಗಳ ಭೂದೃಶ್ಯಗಳನ್ನು ಗಮನಿಸಿ. ಈ ಅಂಶಗಳು ಇನ್‌ಸ್ಟಾಲೇಷನ್ ಕಲಾವಿದ ಕಲಾವಿದೆಯರ ಸ್ಥಳ -ನಿರ್ದಿಷ್ಟ ಅಭಿವ್ಯಕ್ತಗಳಿಗೆ ಸವಾಲುಗಳನ್ನೂ ಹೊಸ ಸಾಧ್ಯತೆಗಳನ್ನೂ ತಂದುಕೊಡುತ್ತವೆ. ಹಾಗೆಯೇ 'ಸರಕು ಸಂಸ್ಕೃತಿ'ಯ ಬಿಗಿವಾತಾವರಣದ ಗ್ರಹಿಕೆಗಳೂ ಅಭಿವ್ಯಕ್ತಿಗಳಾಗಿ ಕಾಣಿಸಿಕೊಳ್ಳುವ ಸಾಮರ್ಥ್ಯವನ್ನು ಸಾಧಿಸಿವೆ; ಇತ್ತೀಚೆಗೆ ತಮ್ಮ ಮನೆ, ಸ್ಟುಡಿಯೋ, ಪುಟ್ಟ ಅವಕಾಶಗಳಲ್ಲೂ ಮಿತಸಂಖ್ಯೆಯ ಆಯ್ದ ವೀಕ್ಷಕರು ನೋಡಲು ಸಾಧ್ಯವಾಗುವಂತೆಯೂ ಇನ್‌ಸ್ಟಾಲೇಷನ್ ಕಲೆ ಕಾಣಿಸಿಕೊಳ್ಳುತ್ತಿದೆ. ಬೃಹತ್ ಅವಕಾಶ, ವೀಕ್ಷಕರ ಸಾಗರವೇ ಹರಿದು ಬರುವಂತಹ ಪ್ರದರ್ಶನಗಳು ಅಪರೂಪಕ್ಕೆ ಆಗಾಗ ಇದ್ದೇ ಇವೆ.

ಬಳಕೆದಾರರು ಬಳಸಿ ಬಿಸಾಡುವ ಕಸವನ್ನೇ ಅಭಿವ್ಯಕ್ತಿಗೆ ಬಳಸಿದ 'line out' 1999ರ ಇನ್‌ಸ್ಟಾಲೇಷನ್‌ನ Tomoko tokahashi, ಹಾಗೂ ತನ್ನ 'Break Down' (ಫೆಬ್ರವರಿ 2001) ಅಭಿವ್ಯಕ್ತಿಗಾಗಿ ಆ ವರೆಗೆ ಮುಚ್ಚಿದ್ದ ತನ್ನ[32] ಅಂಗಡಿಯನ್ನು

2002ರ ಅರ್ಪಣಾ ಕೌರ್‌ರವರ ಒಂದು non-site installation. ಸೋಹ್ನಿ ಮತ್ತು ಮಹಿವಾಲ್‌ರ ಕಥಾನಕವನ್ನು ತಮ್ಮದೇ ದೃಷ್ಟಿಯಲ್ಲಿ ಬಿಂಬಿಸಿದ್ದರು. ಮುಂಬಯಿಯ ಜಹಾಂಗೀರ್ ಕಲಾಗ್ಯಾಲರಿಯ ಈ ಅಭಿವ್ಯಕ್ತಿಯಲ್ಲಿ ಹಲವು ವಸ್ತುಗಳ ಜತೆ ಜತೆಗೇ ಚಿತ್ರಕೃತಿಗಳನ್ನೂ ಮಡಿಸಿಕೊಂಡಿದ್ದರು.

ಚಿತ್ರ - 83



ತೆರೆದು ಎರಡು ವಾರಗಳ ಕಾಲ ತನ್ನ ಎಲ್ಲ ವಸ್ತುಗಳನ್ನು ಸಾರ್ವಜನಿಕವಾಗಿ ನಾಶಮಾಡಿದ ಬ್ರಿಟೀಷ್ ಕಲಾವಿದ ಮೈಖೇಲ್ ಲ್ಯಾಂಡಿ ಸಾಕಷ್ಟು ರೀತಿಯ ಪ್ರತಿಕ್ರಿಯೆಯನ್ನು ತಮ್ಮ ವೀಕ್ಷಕರಿಂದ ಪಡೆದರು.ಬ್ರಿಟನ್ನಿನ ಮಾರ್ಕ್‌ಪೋವೆಲ್ ಲಂಡನ್ನಿನ ಮ್ಯೂಸಿಯಂ ಆಫೇ ಇನ್‌ಸ್ಟಾಲೇಷನ್‌ನಲ್ಲಿ (2001) 'supply and Demand' ಶೀರ್ಷಿಕೆಯ ಅಭಿವ್ಯಕ್ತಿ ವೀಕ್ಷಕರು ಹಾಗೂ ಕಲಾವಿದರ ನಡುವೆಯ ವಿಚಾರವಿನಿಮಯ ಸಾಧ್ಯತೆ, ಸಂದರ್ಭವನ್ನು ವಾಣಿಜ್ಯ ಚಟುವಟಿಕೆಯನ್ನಾಗಿ ಪರಿವರ್ತಿಸಿದ ಬೆಳವಣಿಗೆ ತೋರಿತು. ವೀಕ್ಷಕರನ್ನು ಕಂಪ್ಯೂಟರ್ terminals ಮೇಲೆ ರೇಖಾ ಚಿತ್ರ ರಚಿಸಲು ಸೂಚಿಸಲಾಗುತ್ತಿತ್ತು.

ಬಹುತೇಕ ವೀಕ್ಷಕರು ಹಿಂದೆ ಮುಂದೆ ನೋಡದೆ ತಮಗೆ ಬಂದಂತೆ ಚಿತ್ರಿಸಿದರು. ನಂತರ ಅದನ್ನು ಮೂರು ಆಯಾಮಗಳ ಕಾರ್ಡ್ ಬೋರ್ಡ್ ವಸ್ತುವನ್ನಾಗಿ ರೂಪಾಂತರಿಸಲಾಯಿತು. ಆದರೆ ಈ ರೂಪಾಂತರಕ್ಕೆ ಮೊದಲು ಕಲಾವಿದ ಮತ್ತು ವೀಕ್ಷಕನ/ಳ ನಡುವೆ ಆಗುವ ಒಪ್ಪಂದದಂತೆವೀಕ್ಷಕನು ಆ ವಸ್ತುವನ್ನು ಒಂದು ನಿರ್ದಿಷ್ಟ ಮೊತ್ತದ ಹಣಸಂದಾಯ ಮಾಡಿ ಪಡೆಯುವ ವ್ಯವಸ್ಥೆ ಇದ್ದಿತು.

ಕಲೆಯ ವಸ್ತು, ರೂಪ ಇತ್ಯಾದಿಗಳಾವುವೂ ಇಲ್ಲದ 'A Space for conversation 2000' ಬ್ರಿಟನ್ನಿನ ಸೈಮನ್ ಮೊರೆಟ್ಟಿಯವರ ಅಭಿವ್ಯಕ್ತಿ ಹಲವು ವೃತ್ತಾಕಾರದ ಕಾರ್ಪೆಟ್‌ಗಳನ್ನು ಹಾಸಿದ ಸ್ಥಳದಲ್ಲಿ (ಟೇಟ್ ಮಾಡರ್ನ್ ಮ್ಯೂಸಿಯಂ, ಲಂಡನ್) ವೀಕ್ಷಕರು ಕುಳಿತು ಸೂಚನೆಯಂತೆ ಪೆನ್ನು, ಪೇಪರ್ ಬಳಸಿ ಇತರರೊಂದಿಗೆ ಕೇವಲ ರೇಖಾಚಿತ್ರಗಳ ಮೂಲಕ ಸಂಭಾಷಿಸಲು ಪ್ರಾರಂಭಿಸುತ್ತಾರೆ. ಮಾತಿಗೆ ಇಲ್ಲಿ ಕೆಲಸ ಇಲ್ಲ; ಮೌನ. ಇಲ್ಲಿ ಪರಸ್ಪರ ಸಂಪರ್ಕ ಸಾಧಿಸುವವರ ನಡುವೆ ಸ್ಥಳಾಂತರಗೊಂಡು ಓಡಾಡುವ ಕಾಗದದಲ್ಲಿ ಹಲವಾರು ರೂಪಗಳು ವಿಶಿಷ್ಟವಾಗಿ ರೂಪುಗೊಳ್ಳುತ್ತವೆ. ಹಲವರ Collaboration ರೀತಿಯ ಚಿತ್ರಭಾಷೆಯ ರೂಪಗಳು ಬೆಳೆಯುತ್ತವೆ.

1986ರಿಂದಲೇ ಸುತ್ತಲಿನ ಹಲವು ವಸ್ತುಗಳನ್ನು ಸಂಗ್ರಹಿಸುವ ಜರ್ಮನಿಯ Karsten Bott ಅವುಗಳನ್ನು ವರ್ಗೀಕರಿಸುವ ಮತ್ತು ದಾಖಲಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಈ ಪ್ರಕ್ರಿಯೆ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯಾಗಿ ಮೂಡಿ ಬಂದಿತು. ಶೀರ್ಷಿಕೆ Von Jedem Eins (one of each', 2001)ಬ್ರಿಟನ್ನಿನ ಟ್ರಾಸಿ ಎಮಿನ್ ತನ್ನ ಪ್ರತಿನಿತ್ಯದ ಬದುಕನ್ನೇ ಆತ್ಮ ಚರಿತ್ರೆಯಂತೆ 'MY Bed', 1998ರ ಇನ್‌ಸ್ಟಾಲೇಷನ್‌ನಲ್ಲಿ ಅಭಿವ್ಯಕ್ತಿಸಿದ್ದು ಸಹಜವಾಗಿದೆ. ಅಲ್ಲಿನ ವಸ್ತುಗಳು ಆಕೆಯನ್ನೆ ಅಲ್ಲದೆ ಆಕೆಯೊಂದಿಗೆ ಹಲವು ರೀತಿಯ ಸಂಬಂಧ ಹೊಂದಿರುವವರ ಬಗ್ಗೆಯೂ ಬೆಳಕು ಚೆಲ್ಲುವಂತಿವೆ.

ಪ್ಯಾರೀಸಿನಲ್ಲಿ 1958ರಲ್ಲಿ Yres Klein ಯಾವುದೇ ಕಲಾಕೃತಿ, ಅಭಿವ್ಯಕ್ತಿಗಳಿಲ್ಲದ ಖಾಲಿ ಗ್ಯಾಲರಿಯನ್ನು 'Levide' ಅಂದರೆ 'The Void'ಶೀರ್ಷಿಕೆಯಡಿ ಪ್ರದರ್ಶಿಸಿದರು. ವೀಕ್ಷಕರಿಗೆ ಅಚ್ಚರಿ, ಗೊಂದಲ. ಎರಡು ವರ್ಷಗಳ ನಂತರ ಅಂದಿನ ಪ್ರಶ್ನೆಗಳಿಗೆ ಉತ್ತರವಾಗಿ ಅವರ ದೃಷ್ಟಿಗೆ ಪೂರಕವಾಗಿ Arman ರವರಿಂದ ಅದೇ ಗ್ಯಾಲರಿ ಅನಗತ್ಯ ವಸ್ತುಗಳು ಕಸ ಇತ್ಯಾದಿಗಳಿಂದ ತುಂಬಿ leplein ಅಂದರೆ 'Full' ಶೀರ್ಷಿಕೆಯಡಿ ಪ್ರದರ್ಶನಕ್ಕಾಗಿ ತೆರೆದುಕೊಂಡಿತು!



ನಳಿನಿ ಮಲಾನಿಯವರ 'Remembering Toba Tek Singh',
ವಿಡಿಯೋ ಇನ್‌ಸ್ಟಾಲೇಷನ್, 1998.

ಚಿತ್ರ - 84

1997ರಲ್ಲಿ Ayse Erkmanರವರ 'Sculpture on Air' ಪ್ರದರ್ಶನ ನಡೆಯಿತು. ಮ್ಯೂಸಿಯಂಗೆ ಸ್ವಲ್ಪದೂರದ ಸ್ಥಳದಲ್ಲಿ ಮ್ಯೂಸಿಯಂ ಸಂಗ್ರಹದ ಶಿಲ್ಪಗಳನ್ನು ಹೆಲಿಕ್ಯಾಪ್ಟರ್ ಮೂಲಕ ಸಾಗಿಸಲಾಗುತ್ತಿತ್ತು. ಹಿಂತಿರುಗಿದ ಹೆಲಿಕ್ಯಾಪ್ಟರ್ ಮತ್ತೊಂದು ಶಿಲ್ಪವನ್ನು ಮ್ಯೂಸಿಯಂನಿಂದ ತಂದಿಟ್ಟು ಮೊದಲಿಟ್ಟಿದ್ದ ಶಿಲ್ಪವನ್ನು ಮ್ಯೂಸಿಯಂಗೆ ಒಯ್ಯುತ್ತಿತ್ತು. ಹೀಗೆ ಈ ಕ್ರಿಯೆ ಪುನರಾವರ್ತಿತವಾಗುತ್ತಿತ್ತು!

ಟರ್ಕಿಯ Ayse Erkmanರವರ ಈ ಇನ್‌ಸ್ಟಾಲೇಷನ್ ಅಭಿವ್ಯಕ್ತಿ ವಾರದಲ್ಲಿ ಒಮ್ಮೆ ಅಥವಾ ಎರಡು ಸಲ ಪುನರಾವರ್ತಿತವಾಗುತ್ತಿತ್ತು. Munster Sculpture projects 1997ರ ಅಡಿ ಈ ಅಭಿವ್ಯಕ್ತಿ ಸಾಧ್ಯವಾಯಿತು. Hans Haacke to the population 1999-2000 ವಿಶಿಷ್ಟವಾದದ್ದು. ಜರ್ಮನಿಯ ಪಾರ್ಲಿಮೆಂಟ್‌ಕಟ್ಟಡದ ಉತ್ತರದ ತೆರೆದ ಕೋರ್ಟ್ ಯಾರ್ಡ್‌ನಲ್ಲಿ ಪಾರ್ಲಿಮೆಂಟಿನ 669 ಸದಸ್ಯರಿಂದ ಅವರವರ ಕ್ಷೇತ್ರದ ಮಣ್ಣು ತರಿಸಿ ಮರದ ಉದ್ದನೆಯ ಬಾನೆಯಲ್ಲಿ ತುಂಬಲು ಆಹ್ವಾನಿಸಿದನು; ಸುಮಾರು 100 ಕಿಲೋಗ್ರಾಂ ಮಣ್ಣು, ಪಾರ್ಲಿಮೆಂಟಿನ (Reichstag) ಮಹಾದ್ವಾರದ ಮೇಲಿರುವ' Dem

deutschen volke' (to the German people)ಪದಗಳಿಗೆ ವಿರುದ್ಧವಾಗಿ ಈ ಪ್ರತಿಷ್ಠಾಪನಾ ಅಭಿವ್ಯಕ್ತಿಯನ್ನು ಯೋಜಿಸಲಾಗಿತ್ತು. Haacke ಮಹಾದ್ವಾರದ ಮೇಲಿನ 'Dem Detschen Volke' ಬರಹದ ಅಕ್ಷರಗಳ ಆಕಾರ ಮತ್ತು ಶೈಲಿ, ಅಕ್ಷರಗಳಲ್ಲಿಯೇ to the German people ಎಂಬ ಅರ್ಥದ ಪದಗಳಿಗೆ ಬದಲಾಗಿ 'Nationalistic'ಎಂದು ವ್ಯಾಖ್ಯಾನಿಸಿ ಬಳಸಿದನು!ಇತರ ರಾಷ್ಟ್ರಗಳ ಜನರನ್ನು ಪರಿಗಣನೆಗೆ ತೆಗೆದುಕೊಳ್ಳದೆ ಪಾರ್ಲಿಮೆಂಟ್ ವಿಫಲಗೊಂಡಿದೆ ಎಂಬುದು ಈ ಕಲಾವಿದನ ತಕರಾರು. ಈ ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಜರ್ಮನಿಯ ಪಾಲಿರ್ಮೆಂಟ್‌ನಲ್ಲಿ ವಿವಿಧ ರಾಜಕೀಯ ಪಕ್ಷಗಳ ನಡುವೆ ಕಾವೇರಿದ ಚರ್ಚೆಗೆ ಕಾರಣವಾಯಿತು. ಮತದಾನವೂ ನಡೆಯಿತು. ಕಲಾವಿದನ ಪರವಾಗಿ 260 ಮತಗಳು, ವಿರುದ್ಧವಾಗಿ 258 ಮತಗಳು ಬಿದ್ದರೆ 31ಸದಸ್ಯರು ಮತದಾನದಲ್ಲಿ ಪಾಲ್ಗೊಳ್ಳಲಿಲ್ಲ. ಎಲ್ಲ ಸಂಪ್ರದಾಯ ವಾದಿ ಪಕ್ಷಗಳು ಈ ಇನ್‌ಸ್ಟಾಲೇಷನ್‌ನನ್ನ ವಿರೋಧಿಸಿದವು. ಇದೇ ಪಾರ್ಲಿಮೆಂಟ್ ಕಟ್ಟಡವನ್ನು ಕ್ರಿಸ್ಟೋ ಮತ್ತು ಜೆನ್ನೆ-ಕ್ಲಾಡೆ 1971-1995ರ ನಡುವೆ ಬಟ್ಟೆಗಳಿಂದ ಸುತ್ತ ಹೊದಿಸಲು ಸಾಕಷ್ಟು ಹೆಣಗಿದ್ದರು. ಬರ್ಲಿನ್‌ಗಾಗಿ 1945ರಲ್ಲಿ ನಡೆದ ಯುದ್ಧದಲ್ಲಿ ಅಲ್ಲಿನ ಪಾರ್ಲಿಮೆಂಟ್ ಕಟ್ಟಡ Reich stag ವಿನಾಶದ ಅಂಚಿನಲ್ಲಿತ್ತು. 1957-1971ರ ನಡುವೆ ಅದನ್ನು ನವೀಕರಿಸಲಾಯಿತು. 1989ರಲ್ಲಿ ಬರ್ಲಿನ್ ಗೋಡೆ ಮುರಿದು ಬಿದ್ದಾಗ ಈ ಕಟ್ಟಡ ಜರ್ಮನಿಯ ಪಾರ್ಲಿಮೆಂಟಾಗಿ ಪುನಃ ಪ್ರಾಮುಖ್ಯತೆಗಳಿಸಿತು. 1961ರಲ್ಲಿ ಕ್ರಿಸ್ಟೋ ಫೋಟೋಗ್ರಾಫ್‌ಗಳು ಹಾಗೂ ಮುದ್ರಿತ ಬರಹದ ಕೊಲಾಜ್ ಮಾಡಿದ್ದ 'Project for



ಚಿತ್ರ - 85

ಸುಬೋಧ್‌ಗುಪ್ತರವರ 'My Mother and me', ಇನ್‌ಸ್ಟಾಲೇಷನ್, 1997.

a wrapped, public building ' ಚಿಂತನೆ 1971-1995ರ ನಡುವೆ ಅರಳಿತು. ಈ ಅವಧಿಯಲ್ಲಿ ಕ್ರಿಸ್ಟೋ ಹಲವಾರು ತಿಂಗಳು ಬಾನ್‌ನಲ್ಲಿ 352 ಪಾರ್ಲಿಮೆಂಟ್ ಸದಸ್ಯರೊಂದಿಗೆ ಇನ್‌ಸ್ಟಾಲೇಷನ್ ಪ್ರಾಜೆಕ್ಟ್‌ಗಾಗಿ ಲಾಬಿ ಮಾಡುತ್ತ ಕಳೆದನು! ಹಿಂದೆ ಪಾರ್ಲಿಮೆಂಟ್ ಸದಸ್ಯರು Hans Haacke ನ ಇನ್‌ಸ್ಟಾಲೇಷನ್ ಸಂದರ್ಭದಲ್ಲಿ ಕಟುವಾಗಿ ನಡೆದುಕೊಂಡದನ್ನು ನೆನಪುಮಾಡಿಕೊಳ್ಳಿ. ಕಟ್ಟಡವನ್ನು ಬಟ್ಟೆಗಳಿಂದ ಹೊದಿಸಲು 3 ಬಾರಿ ಒಪ್ಪಿಗೆ ನಿರಾಕರಿಸಲಾಯಿತು. 1977, 1981 ಮತ್ತು 1987. ಕೊನೆಗೂ 1994ರ ಫೆಬ್ರುವರಿ 25ರಂದು ಈ ಪ್ರಾಜೆಕ್ಟ್‌ಗೆ ಮತದಾನದ ಮೂಲಕ ಒಪ್ಪಿಗೆ ದೊರೆಯಿತು. 1995ರ ಜೂನ್ 18ರಂದು ಪಾರ್ಲಿಮೆಂಟ್ ಕಟ್ಟಡದ ನಾಲ್ಕೂಕಡೆ ಬಟ್ಟೆ ಬಿಚ್ಚಿಕೊಂಡಿತು. ಇಡೀಕಟ್ಟಡವನ್ನು ಒಂದಿಂಚೂ ಬಿಡದೆ ಹೊದಿಸಲಾಯಿತು! 100,000 ಚದರಮೀಟರ್‌ನ ಪುನರ್ ಬಳಸಬಲ್ಲ ಅಲ್ಯೂಮಿನಿಯಂ ಲೇಪಿತ ಬಟ್ಟೆಯ 70 ಪ್ಯಾನಲ್‌ಗಳನ್ನು ಬಳಸಲಾಯಿತು! 14ದಿನ ಈ ಹೊದಿಕೆಯ ವ್ಯವಸ್ಥೆ ಇದ್ದಿತು! ಹೀಗೆ ಕ್ರಿಸ್ಟೊ ಮತ್ತು ಜೆನ್ನೆ -ಕ್ಲಾಡೆ ಹಲವಾರು ಬೃಹತ್ ಪ್ರಾಜೆಕ್ಟ್‌ಗಳನ್ನು ಮಾಡಿದರು. ಕಟ್ಟಡಗಳನ್ನು ಹೊದಿಸುವ, ದ್ವೀಪಗಳನ್ನು ಸುತ್ತುವರಿಯುವ, ತೀರ ಪ್ರದೇಶ ಹಾಗೂ ಒಳನಾಡಿನ ಗುಡ್ಡ ಬೆಟ್ಟಗಳಿಗೆ ಮೈಲಿಗಟ್ಟಲೆ ತೆರೆ, ಬೇಲಿ ಹಾಕುವ ಅಭಿವ್ಯಕ್ತಿಗಳವು. ವರ್ಷಗಟ್ಟಲೆ ಚಿಂತಿಸಿ, ಯೋಜಿಸಿ ಹಣದ ವ್ಯವಸ್ಥೆ

ವಿವಾನ್ ಸುಂದರಂರವರ 'Memorial'
ಇನ್‌ಸ್ಟಾಲೇಷನ್‌ನ ಒಂದು ನೋಟ, 1993. ನವದೆಹಲಿ

ಚಿತ್ರ - 86



ಮಾಡಿಕೊಂಡು ಅಭಿವ್ಯಕ್ತಿಸಿದ ಪ್ರಕ್ರಿಯೆಗಳು.[33] ಇದೊಂದು ಬಿಡುವಿಲ್ಲದ ನಿರಂತರ ಚಟುವಟಿಕೆ. ಸೈಟು, ವಿವಿಧ ಮಾಧ್ಯಮ, ಮ್ಯೂಸಿಯಂ, ವಾಸ್ತುಶಿಲ್ಪ ಇತ್ಯಾದಿಗಳ ಹಿನ್ನೆಲೆಯಲ್ಲೇ ಅಲ್ಲದೆ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳಲ್ಲಿ ತಮ್ಮನ್ನೇ ವಿಸರ್ಜಿಸಿಕೊಂಡು ವಿಶಿಷ್ಟ ಅನುಭವ ಲೋಕದಲ್ಲಿ ಪ್ರೇಕ್ಷಕರೊಂದಿಗೆ ಆನಂದಿಸುವ ಕಲಾವಿದ /ಕಲಾವಿದೆಯರು ಇಂದು ಕಾಣಸುತ್ತಿದ್ದಾರೆ. ಕಲಾಸಂಸ್ಥೆಗಳಾದ ಕಲಾಶಾಲೆ ಗ್ಯಾಲರಿ, ಮ್ಯೂಸಿಯಂಗಳ ಸಹಯೋಗದೊಂದಿಗೆ ವೀಕ್ಷಕರೊಂದಿಗೆ ಸಮೀಕರಣಗೊಂಡು ತಮ್ಮ ಸ್ವಾಯತ್ತತೆಯನ್ನು ಸ್ವಲ್ಪ ಮಟ್ಟಿಗೆ ಮರೆತು ಹಲವು ಪ್ರಯೋಗಾತ್ಮಕ ಇನ್‌ಸ್ಟಾಲೇಷನ್ ಸೃಷ್ಟಿಯಲ್ಲಿ ತಲ್ಲೀನರಾಗಿ ಕಲಾಸಂಸ್ಥೆಗಳನ್ನು ಒಂದು ರೀತಿಯಲ್ಲಿ ಸಾಂಸ್ಕೃತಿಕ ಪ್ರಾಯೋಗಾಲಯವನ್ನಾಗಿ ಮಾಡುತ್ತಿರುವವರೂ ಹೆಚ್ಚುಹೆಚ್ಚು ಕಾಣಸುತ್ತಿದ್ದಾರೆ. ಕಂಪ್ಯೂಟರ್ ನೆರವು ದುಡಿಸಿಕೊಳ್ಳುವ ಐ.ಟಿ ಹಾಗೂ ಪ್ರಚಾರ ಮಾಧ್ಯಮಗಳನ್ನು ಬಳಸಿ ಒಂದು ನಿರ್ದಿಷ್ಟ ಅವಕಾಶದ ಭೌತಿಕ ಸೀಮಾರೇಖೆಗಳನ್ನು ಮೀರಿ ಅಭಿವ್ಯಕ್ತಿಸುವುದು ಸಾಧ್ಯವಾಗಿದೆ. ಹಾಗೆಯೇ ತಮ್ಮ ಸ್ಮೃತಿ ಪಟಲದ ದಾಖಲೆಗಳನ್ನು ಕಾಲಾತೀತವಾಗಿಯೂ ಹಲವರು ನಿರ್ವಹಿಸಿಕೊಳ್ಳುತ್ತಿದ್ದಾರೆ. ಇನ್‌ಸ್ಟಾಲೇಷನ್ನಿನ ಅವಕಾಶದಲ್ಲಿ ತಾವೇ ಸುತ್ತಾಡಿ ಅನುಭವಿಸಿ ಕಲಾವಿದನ ಆಭಿವ್ಯಕ್ತಿಯೊಂದಿಗೆ ತಮ್ಮದೇ ಆದ ರೀತಿಯಲ್ಲಿ ಧ್ಯಾನಿಸಿ ಸಂವಾದಿಸುವ ವೀಕ್ಷಕರ ಪಾತ್ರವನ್ನು ತಮ್ಮದೇ ಆದ ರೀತಿಯಲ್ಲಿ ಬಳಸಿಕೊಳ್ಳುವ ಕಲಾವಿದರ ಪ್ರಯತ್ನಗಳೂ ನಡೆದಿವೆ; ನಡೆಯುತ್ತಿವೆ. ಈ ಎಲ್ಲ ದೃಷ್ಟಿಗಳಲ್ಲೂ ಕೆಲವೊಮ್ಮೆ ಇವೆಲ್ಲವನ್ನೂ ಮೀರಿ ನಮ್ಮವರು ಅಭಿವ್ಯಕ್ತಿಸಿದ್ದಾರೆ. ನಮ್ಮ ಕಾಲವಿದ/ ಕಲಾವಿದೆಯರು ಇಂದು ವಿಶ್ವದ ಹಲವು ಪ್ರಮುಖ ಕಲಾಕೇಂದ್ರಗಳಲ್ಲಿ 'Art-in-Residance' ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸೃಷ್ಟಿಸಿ ಬರುತ್ತಿದ್ದಾರೆ. ಹೊರಗಿನವರೂ ಇಲ್ಲಿದ್ದು ಸೃಷ್ಟಿಸಿ ಹೋಗುತ್ತಿದ್ದಾರೆ.



ಚಿತ್ರ - 87

ಸುರೇಖರವರ ಒಂದು ವಿಡಿಯೋ ಇನ್‌ಸ್ಟಾಲೇಷನ್ ನೋಟ. 2006.

ಸ್ವಲ್ಪ ಹಿಂದೆ 1960ರ ದಶಕಕ್ಕೆ ಹಿಂತಿರುಗಿದರೆ ಭೂಪೇನ್ ಖಾಕರ್ ಮತ್ತು ವೀವಾನ್ ಸುಂದರಂ[34] ರವರುಗಳು Popಕಲೆಗೆ ಹತ್ತಿರವಾಗಿ ಬರೋಡಾದಲ್ಲಿ ಕೈಗೊಂಡ ಹಲವು ಪ್ರಯೋಗಗಳು 'Bringing in the popular within the space of high art the early experimenters, by implication were opening a space for a latent discourse on the Post modern' ಬೆಳವಣಿಗೆಗಳಿಗೆ ಕಾರಣವಾದವು.[35] 1968ರ ಕಾಲಕ್ಕೆ 'six days of creation' ಶೀರ್ಷಿಕೆಯ 'Performance' ಗಳನ್ನು ಎಂ.ಎಫ್.ಹುಸೇನ್ ಕೊಡಲಾರಂಭಿಸಿದರು. ಅವರ ದೇಹ ಭಾಷೆಯೂ ಪ್ರಭಾವ ಬೀರುವಂತಿರುತ್ತಿತ್ತು. ಫುಟ್‌ಪಾತಿನ ಮೇಲೆ ಬಣ್ಣ ಸುರಿದು ಆ ಅವಕಾಶದಲ್ಲಿ ಕಾರನ್ನು ಚಲಿಸಿ ನಂತರ ಆ ಕಾರಿನ ಚಕ್ರಗಳನ್ನು ಕ್ಯಾನ್ ವಾಸಿನ ಅವಕಾಶದಲ್ಲಿ ಹರಿಸಿ ಆ ಕ್ಯಾನ್‌ವಾಸನ್ನು ಪ್ರದರ್ಶನಕ್ಕೆ ಅಣಿಗೊಳಿಸಲಾಗುತ್ತಿತ್ತು. ರೆಸ್ಟೋರೆಂಟಿನ ಟೇಬಲಿನ ಮೇಲಿನ ಹೊದಿಕೆ ಮೇಲೆ ಸಾರುಸುರಿದು ಕುದುರೆಯ ರೂಪವನ್ನು ಮೂಡಿಸುತ್ತಿದ್ದುದು, ಅವುಗಳನ್ನು ಕೊಳ್ಳಲು ಅಭಿಮಾನಿಗಳು ಕಾದುಕುಳಿತ್ತಿರುತ್ತಿದ್ದುದು ಅಪೂರ್ವ ಸಂದರ್ಭಗಳೇ ಸರಿ!ಒಂದು ರೀತಿಯ Culture industry ಯಾಗಿ ಹುಸೇನ್ ಖ್ಯಾತರು.[36] ಪ್ರಾರಂಭದಲ್ಲಿ ಕನ್ನಡದ ಪುಷ್ಪಮಾಲಾ International post modernಗೆ ಹತ್ತಿರವಾಗಿ ಅಭಿವ್ಯಕ್ತಿಸುತ್ತಿದ್ದರು. ಭೂಪೇನ್ ಖಾಕ್ಕರ್‌ರವರಿಂದ 1992ರ ಜರ್ಮನಿಯ ಇನ್‌ಸ್ಟಾಲೇಷನ್ ಕಲೆಗೆ ಹೆಚ್ಚಿನ ಒತ್ತು ನೀಡುವ ಡಾಕ್ಯುಮೆಂಟಾ ಪ್ರದರ್ಶನದಲ್ಲಿ 'Pan Shop' ಮೂಡಿಬಂದಿತ್ತು. 'This could be possibly read as a reaction to the global postmodernist linguistic freedom'ಎಂದು A.D. ಗುಪ್ತ ಹಾಗೂ ಶಿವಾಜಿ ಕೆ.ಪಣಿಕರ್ ಅಭಿಪ್ರಾಯ ಪಟ್ಟಿದ್ದಾರೆ.[37] ವೀವಾನ್ ಸುಂದರಂ ನಳಿನಿ ಮಲಾನಿಯವರುಗಳು 60ರ ದಶಕದಲ್ಲಿ ಕ್ಯಾನ್‌ವಾಸಿನ ಅವಕಾಶದಲ್ಲಿ ಬಣ್ಣಗಳಿಂದ ಅಭಿವ್ಯಕ್ತಿಸುವುದರಿಂದ ಬಹುದೂರ ಹೋಗಿದ್ದರು. 1966ರಲ್ಲಿ ವೀವಾನ್ ಸುಂದರಂ 'Touch of Brightness' ಶೀರ್ಷಿಕೆಯ Construction ಅಭಿವ್ಯಕ್ತಿಯನ್ನು ಮುಂಬಯಿಯ ತಮ್ಮ ಪ್ರಥಮ ಏಕ ವ್ಯಕ್ತಿ ಪ್ರದರ್ಶನದಲ್ಲಿ ಮೂಡಿಸಿದ್ದರು. ಸಂಸ್ಕಾರ ಸಂದರ್ಭದಲ್ಲಿ ಬಳಸುವ ಪದಾರ್ಥಗಳನ್ನು ಆ ಅಭಿವ್ಯಕ್ತಿಯಲ್ಲಿ ದುಡಿಸಿಕೊಂಡಿದ್ದರು! (1985ರ ನಂತರ ವಷ್ಟೇ ಅವರು ಮಿಶ್ರ ಪದಾರ್ಥಗಳನ್ನು ಬಳಸಲಾರಂಭಿಸಿದರು.) ಅವರ 1985ರ 'Signs of Fire' ಮರದ ಪೆಟ್ಟಿಗೆಗಳ ಗಾಜಿನ ಮುಂಭಾಗಗಳಲ್ಲಿ ಗಾಯಗೊಂಡ ಭೂದೃಶ್ಯಗಳ ಪ್ರಾತಿನಿಧ್ಯತೆಯನ್ನು ಬಣ್ಣಲೇಪಿಸಿದ ಕಲ್ಲು, ದ್ರಾಕ್ಷಿ ಬಳ್ಳಿಯ ಇದ್ದಿಲು, ಸುಟ್ಟಮರ ಇತ್ಯಾದಿಗಳ ಮೇಲ್ಮೈಗಳಿಂದ ಸಾಧಿಸಿದ್ದರು. 1991ರಲ್ಲಿ ದ್ರಾಕ್ಷಿಬಳ್ಳಿಯ ಇದ್ದಿಲು ಹಾಗೂ ಎಂಜಿನ್ ಆಯಿಲ್ ಮಾಧ್ಯಮದ ಇನ್‌ಸ್ಟಾಲೇಷನ್ ಅಭಿವ್ಯಕ್ತಿ 'Signs of Fire'ನ ಮುಂದುವರೆದ ಬೆಳವಣಿಗೆಯೇ ಆಗಿತ್ತು. ಕೊಲ್ಲಿರಾಷ್ಟ್ರಗಳ ಯುದ್ಧದ ರಾಜಕಾರಣಕ್ಕೆ ಇದ್ದಿಲು ಹಾಗೂ ಇಂಜಿನ್ ಆಯಿಲ್ ಬಳಸಿದ್ದು ಸಾಂಕೇತಿಕ. 1992ರ 'Collaboration/ Combines' ಅಭಿವ್ಯಕ್ತಿಗಳಲ್ಲಿ ಮಾಧ್ಯಮಗಳ ಸಾಧ್ಯತೆಗಳ ಅನ್ವೇಷಣೆ ಮುಂದುವರಿಯಿತು. ಅವರ 'Memorial Immemorial' ಹಿಂಸೆಯ ಕೇಂದ್ರೀಕೃತ ಅಭಿವ್ಯಕ್ತಿ. (ಫುಟ್ ಪಾತ್ ಮೇಲೆ ಕೇಳುವವರಿಲ್ಲದೆ ಬಿದ್ದಿರುವ ಹೆಣದ ಛಾಯಾಚಿತ್ರಗಳು, (ಪುನರಾವೃತ್ತಿಗೊಂಡ ಚಿತ್ರಗಳು)

ಚಿತ್ರ - 88

ತಮ್ಮ ಇನ್‌ಸ್ಟಾಲೇಷನ್ ಸೃಷ್ಟಿ
ಪ್ರಕ್ರಿಯೆಯ ಸಂದರ್ಭದಲ್ಲಿ
ವಾಲ್ಸನ್‌ಕೊಲ್ಲೇರಿ.





ಚಿತ್ರ - 89

ವೈ. ಕುಮಾರ್‌ರ ಮಾನವೀಯ
ಅನುಕಂಪ, ಸರ್ವಧರ್ಮ
ಸಮನ್ವಯ ಭಾವದ ಅಭಿವ್ಯಕ್ತಿ.
ಒಳಗೆ ಹೋಗಿ
ಬಂದವರಿಗೆ ಆಗುತ್ತಿದ್ದ
ಅನುಭವ ವಿಶಿಷ್ಟ.

ಜತೆಗೆ ಛಾಯಾಚಿತ್ರದಲ್ಲಿನ ಹೆಣವನ್ನು ನಕಲು ಮಾಡಿದ ಪ್ಲಾಸ್ಟರ್ ಹೆಣದ ಆಕಾರಗಳಿದ್ದವು.)ಟಿನ್ ಪೆಟ್ಟಿಗೆಗಳು, ಪಿನ್ನು, ಮೊಳೆ ಮತ್ತು ನಿಯಾನ್ ದೀಪಗಳು ಹಾಗೂ ಬಣ್ಣಗಳನ್ನು ಧಿಕ್ಕರಿಸಿದ್ದ ಫೋಟೋಗಳು ಈ ಅಭಿವ್ಯಕ್ತಿಯಲ್ಲಿ ಕಾಣಿಸಿಕೊಂಡಿದ್ದವು. ಪ್ರವೇಶದ್ವಾರದಲ್ಲಿ ಕಬ್ಬಿಣದ ತಡೆಗಟ್ಟು (barricades) ಕಲ್ಲಿನ ಕಾಲುಹಾದಿಗಳು ಹಲವು ದಿಕ್ಕಿನತ್ತ ಹಾದುಹೋಗಿದ್ದವು. ಪ್ರದರ್ಶನದ ಮಧ್ಯಭಾಗದಲ್ಲಿ ರಕ್ತದ ಅನುಭವ ನೀಡುವ ಆ ಬಣ್ಣದ ನೀರಿನ ಕಾಲುವೆ ಇದ್ದಿತು.

1993ರ ನಳಿನಿ ಮಲಾನಿಯವರ 'Medea' ಇನ್‌ಸ್ಟಾಲೇಷನ್ ಅಭಿನಯವನ್ನೂ ಅಳವಡಿಸಿಕೊಂಡಿದ್ದಿತು. ಆದರೂ ನಮ್ಮಲ್ಲಿ Installation ಎಂದು ಕರೆಯಲ್ಪಡುವ ಯುವ ಕಲಾವಿದರ 1990ರ ದಶಕದ ಬಹುಪಾಲು ಅಭಿವ್ಯಕ್ತಿಗಳು ಹುಟ್ಟಿಕೊಂಡಿದ್ದೇ '......... ranging between breaking the confinement of frame..... assemblages of evocatively conflating to gether disparate materials' (lalitkala contemporary 41,1995, P.23)ನಂತಹ ಸಂದರ್ಭದಿಂದಾಗಿ, 'end of ideology' ಅಂಶಗಳ ಪ್ರಭಾವವೂ ಹಲವರ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳ ಹಿಂದೆ ಕೆಲಸಮಾಡಿದೆ. ಈ ಅಭಿವ್ಯಕ್ತಿಯಲ್ಲಿ ಆಯ್ದುಕೊಳ್ಳುವ ಮಾಧ್ಯಮದಲ್ಲಿ ದುಡಿಸಿಕೊಳ್ಳುವ ಸಾಮಗ್ರಿಯ ಆಯ್ಕೆಯೂ ಆಯಾ ಕಲಾವಿದನ/ಕಲಾವಿದೆಯ ಸಂವೇದನಾ ತೀವ್ರತೆಯ, ಗ್ರಹಿಕೆಯ ಆಳದ ಪ್ರತಿಪಾದನೆಯನ್ನು ಮಾಡಬಲ್ಲದು; ಧೋರಣೆಯನ್ನೂ ಬಿಂಬಿಸಬಲ್ಲದು. ಇಲ್ಲಿ ಮಿಶ್ರಮಾಧ್ಯಮದ ಬಳಕೆಯನ್ನು ಚಿತ್ರ, ಶಿಲ್ಪ ಪ್ರಿಂಟ್‌ಗಳಲ್ಲಿ ದುಡಿಸಿಕೊಳ್ಳುತ್ತಿರುವವರ ಸಮಕಾಲೀನ ಸಂದರ್ಭದ ಕೇಂದ್ರ ಪ್ರಜ್ಞೆಯ ನೆಲೆಗಳ ಅನಾವರಣದ ಸಶಕ್ತತೆಯನ್ನು ನೆನಪುಮಾಡಿಕೊಳ್ಳಬಹುದು. ತನಗೆ ಅಗತ್ಯಕಂಡ ಸುತ್ತಲಿನ ಎಲ್ಲ ಸಾಮಗ್ರಿಗಳ ಸಾಹಚರ್ಯೆಯಿಂದ ಅಸಾಮಾನ್ಯ ಅಪೂರ್ಣ ವರ್ತಮಾನಕಾಲದ ಸಂವೇದನೆಯ ಧ್ವನಿಯನ್ನು ಹಿಡಿದಿಡಲು ಹವಣಿಸುತ್ತಿರುವ ಕಲಾವಿದ/ಕಲಾವಿದೆಯರ ಸಂಖ್ಯೆ ಇಂದು ಹೆಚ್ಚಾಗುತ್ತಿರುವುದು ಗಮನಾರ್ಹ. ಎನ್.ಪುಷ್ಪ ಮಾಲಾ, ಶೀಲಾಗೌಡ, ಲಲಿತಾಶಂಕರ್, ರವಿಕುಮಾರ್ ಕಾಶಿ, ಎಂ.ಎಸ್.ಉಮೇಶ್, ಹರ್ಷಾ ಎನ್.ಎಸ್, ಸಿ.ಎಫ್. ಜಾನ್, ರಾಘವೇಂದ್ರ ರಾವ್, ಶಾಂತಾಮಣಿ, ರವಿಶಂಕರರಾವ್, ರಮೇಶ್‌ಚಂದ್ರ, ಶ್ರೀನಿವಾಸ ಪ್ರಸಾದ , ರಮೇಶ್ ಕಲ್ಕೂರ್, ಆಯೇಶಾ ಅಬ್ರಹಾಂ, ಗೋಪಿನಾಥ್, ಸ್ಮಿತಾಕಾರಿಯಪ್ಪ, ಸುರೇಖ, ಬಾಬು ಈಶ್ವರ ಪ್ರಸಾದ್, ಕಿರಣ್‌ಸುಬ್ಬಯ್ಯ, ಶ್ಯಾಮಲಾ, ರಂಜನಿ ಕೆ.ಶೆಟ್ಟರ್, ಜಿ.ಸುರೇಶ್‌ಕುಮಾರ್, ಅರ್ಚನಾ ಹಂದೆ, ಅರ್ಚನಾ ಹೆಬ್ಬಾರ್ , ಪುರುಷೋತ್ತಮ ಅಡವೆ, ವಿಶ್ವೇಶ್ವರ ಪರ್ಕಳ ಮೊದಲಾದವರು ಇನ್‌ಸ್ಟಾಲೇಷನ್ ಕಲೆಯ ಮೂಲಕ ಮಾತ್ರ ಅಭಿವ್ಯಕ್ತಿಸುವ ಧೋರಣೆಯನ್ನು ಅರಗಿಸಿಕೊಂಡಿರುವುದು ಗಮನಾರ್ಹ. ಈ ಎಲ್ಲರ ಜತೆಗೆ ಇನ್ನೂ ಹಲವರು ಸೇರ್ಪಡೆಗೊಳ್ಳುತ್ತಿರುವ ಗಂಭೀರ ಬೆಳವಣಿಗೆ ಸ್ವಾಗತಾರ್ಹ. ವೇದನಾಯರ್, ಗೋಗಿ ಸರೋಜ್‌ಪಾಲ್, ಕುನ್ಹಿರಾಮನ್, ವಾಲ್ಸನ್‌ಕೊಲ್ಲೇರಿ, ಪ್ರಕಾಶ್ ಬಾಬು, ಯೂಸೂಫ್ ಅರಕ್ಕಲ್, ಶೀಬಾ ಚ್ಛಾಚಿ, ಸೋಮನ್, ರಾಜ್‌ಕುಮಾರ್ ಮುಝಿಂದರ್, ರವಿಷಾ, ವೇಣುಗೋಪಾಲ್, ಉದಯ ವೀರಸಿಂಗ್, ಮಾರಿಯೋ ಡಿ.ಸೌಝಾ, ವೆಂಕಟಾಚಲಪತಿ, ಕೆ.ಟಿ. ಶಿವಪ್ರಸಾದ್, ಗೋಪಾಲ್ ಕಮ್ಮಾರ್, ಎಸ್.ಕೆ.ಚಂದ್ರಕಾಂತ್, ಮಹಮ್ಮದ್ ಶಫಿ.ಜಿ.ಮಶಾಲ್‌ಕರ್, ಬಿ.ಎನ್.ರಾಜೇಶ್, ವೈ. ಕುಮಾರ್, ಗೌತಮ್ ವಿ.ಎ., ಮಿಟ್ಟು ಖಟಾವ, ಲಕ್ಷ್ಮೀಪತಿ, ಪರಶುರಾಮ್, ಎಂ.ಜಿ. ದೊಡ್ಡಮನಿ, ಮಂಜುನಾಥ್ ಮೊದಲಾದ ಹೆಸರುಗಳಲ್ಲಿ ಇನ್‌ಸ್ಟಾಲೇಷನ್



ಚಿತ್ರ - 90

ರಂಜನಿ ಕೆ. ಶೆಟ್ಟಾರ್‌ರವರ 2007ರ ಒಂದು ಇನ್‌ಸ್ಟಾಲೇಷನ್ ಅಭಿವ್ಯಕ್ತಿ.



ಚಿತ್ರ - 91

ಮೊಹಮ್ಮದ್, ಜಿ. ಮಹಾಲ್‌ಕರ್‌ರವರ ಇನ್‌ಸ್ಟಾಲೇಷನ್ ಒಂದರ ದೃಶ್ಯ, 2006

ಕಲೆಯ ದಿಗ್ಗಜರೇ ಅಲ್ಲದೆ ಉದಯೋನ್ಮುಖರೂ ಇದ್ದಾರೆ. ಈ ಎಲ್ಲರ ಅಭಿವ್ಯಕ್ತಿಗಳಲ್ಲಿನ ಖಾಸಗಿ ಪುರಾಣದಂತಹ ಆಶಯ, ನಿರ್ವಹಣೆಗಳು ಮತೀಯ ಪುರಾಣಕ್ಕಿಂತಲೂ ಬೇರೆಯೇ ಆದ ದೃಷ್ಟಿಯವು.[38]

1993ರ ಸಹಮತ್‌ನ 'ಹಮ್‌ಸಬ್ ಅಯೋಧ್ಯಾ' ಪ್ರದರ್ಶನದ ದೃಷ್ಟಿಯ ಬೆಂಬಲಿತ ಬೆಂಗಳೂರಿನ ಕೆಲವು ಕಲಾವಿದ/ಕಲಾವಿದೆಯರ 'Coalition for secularism' ಗುಂಪಿನ 'Cultural Spiral in plastic' ಇನಸ್ಟಾಲೇಷನ್ ಅಭಿವ್ಯಕ್ತಿಯಲ್ಲಿ ಭಾರತೀಯ ವೈವಿಧ್ಯಮಯ ಧರ್ಮ ತತ್ವಶಾಸ್ತ್ರಗಳ ಮುಖ್ಯ ಹೇಳಿಕೆಗಳು ಹಾಗೂ ರೇಖಾ ಚಿತ್ರಗಳನ್ನು ಸುರುಳಿಯಾಕಾರದ ಪ್ಲಾಸ್ಟಿಕ್ ಪಾರದರ್ಶಕ ಹಾಳೆಗಳ ಭಿತ್ತಿಯ ಅವಕಾಶದಲ್ಲಿ (ಬೆಂಗಳೂರಿನ ಪುಟ್ಟಣ್ಣಶೆಟ್ಟಿ ಪುರಭವನ ಹಾಗೂ ರವೀಂದ್ರ ಕಲಾಕ್ಷೇತ್ರಗಳ ನಡುವಿನ ಉದ್ಯಾನದಲ್ಲಿ) ಮೂಡಿಸಲಾಗಿತ್ತು. ಇದು ಸ್ಥಳನಿರ್ದಿಷ್ಟ ಅಭಿವ್ಯಕ್ತಿಯೇನೂ ಅಲ್ಲ. ಸಿ.ಎಫ್. ಜಾನ್‌ರವರ ಜತೆ ಹಲವಾರು ಕಲಾವಿದ / ಕಲಾವಿದೆಯರು ಪಾಲ್ಗೊಂಡು ಅಭಿವ್ಯಯಕ್ತಿಸಿದ್ದ ಇನ್‌ಸ್ಟಾಲೇಷನ್‌ನಲ್ಲಿ ಪಾದರಸದ, ನಮ್ಮನ್ನು ನಾವು ನೋಡಿಕೊಳ್ಳುವ ಕನ್ನಡಿಗಳನ್ನೂ ದುಡಿಸಿಕೊಳ್ಳಲಾಗಿತ್ತು. Secular cultureನ ಸೃಷ್ಟಿಯಲ್ಲಿ ನಮ್ಮ Cultural pluralism ಸಂದರ್ಭದ ನಡುವೆ Secular Selfಅನ್ನು ಹುಟ್ಟು ಹಾಕಿದ ಸಂದರ್ಭ ಅದು.[39]

ಲಂಡನ್ ಸಂಜಾತೆ ಬೆಂಗಳೂರಿನಲ್ಲಿರುವ ಆಯೇಶಾ ಅಬ್ರಹಾಂ ಇನ್ನಿಲ್ಲವಾದ ತಮ್ಮ ಅಜ್ಜಿಯ ಸ್ಮರಣೆ ಹಾಗೂ ಅಜ್ಜಿಯ ಮನೆಯೊಂದು ನಗರೀಕರಣದ ತಳುಕಿನಲ್ಲಿ ಇಲ್ಲವಾಗುವ ಹಿನ್ನೆಲೆಯಲ್ಲಿ ತಮ್ಮ ಕೌಟುಂಬಿಕ ನೆನಪುಗಳನ್ನು ಮೆಲುಕು ಹಾಕುವ ಹಳೆಯ ಅನುಭವಗಳ ಮರುಕಳಿಕೆಯ ಆಶಯದ ಇನಸ್ಟಾಲೇಷನ್ ಅಭಿವ್ಯಕ್ತಿಗೆ ಕಾರಣರಾದರು. ವಿಸ್ತಾರ್ ಆಶ್ರಯದ ಕಾಗದ 'Paper trails' ಶಿಬಿರದಲ್ಲಿ ಅವರು ಸೃಷ್ಟಿಸಿದ ಇನ್‌ಸ್ಟಾಲೇಷನ್ ಕಲೆಯ ಹೊಳಹುಗಳು ಅದೇ ಹಾದಿಯನ್ನು ಅರಸಿಹೊರಟಂತಿತ್ತು. Pulp fiction(s)

Tug at the rest vestiges of the part feel nurtured by the unthreatned softness. Remove the industrial process and stick your hands in the mess of the pulp churning in a digital world the child in me is 'out' wanting to feel pleasure.[40] ಶಿಬಿರದ ಆಯೆಶಾರ ಅಭಿವ್ಯಕ್ತಿಗಳು ಶಿಲ್ಪದ ಕಲ್ಪನೆಯ ವ್ಯಾಪ್ತಿಮೀರಿ ಇನ್‌ಸ್ಟಾಲೇಷನ್‌ಗಳಾಗಿ ಮೂಡಿಬಂದಿದ್ದವು. ಯೂಸೂಫ್ ಅರಕ್ಕಲ್, ಸಿ.ಎಫ್.ಜಾನ್, ಆಂಟೋನಿಯೋ ಎ.ಕಾಸ್ಟಾರವರ ಅಭಿವ್ಯಕ್ತಿಗಳು ಇನ್‌ಸ್ಟಾಲೇಷನ್ ಸತ್ವಗಳನ್ನು ಹೊಂದಿದ್ದವು.

ಶೀಲಾಗೌಡ ಬಂಡುಕೋರ ಸ್ತ್ರೀವಾದಕ್ಕೆ ಅತ್ಯುತ್ತಮ ಉದಾಹರಣೆಯಂತಹ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳಿಗೆ ಕಾರಣರಾಗಿರುವವರು. ಭಾರತೀಯ ಸಮಾಜ, ಅದರಲ್ಲೂ ಹಿಂದೂ ಸಮಾಜ ಸ್ತ್ರೀಶೋಷಣೆಗೆ ಕಾರಣವಾಗಿರುವ ರೀತಿ ವಿಕೃತ, ಇಂತಹ ಹಲವು ಮುಖಗಳ ಒಳನೋಟಗಳ ಅವರು (1992-93) ಸಗಣಿ, ಕುಂಕುಮ ಇತ್ಯಾದಿಗಳನ್ನು

ಚಿತ್ರ ಹಾಗೂ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳಲ್ಲಿ ಸ್ವೋಪಜ್ಞತೆಯಿಂದ ದುಡಿಸಿಕೊಂಡಿದ್ದಾರೆ. ಸೂಜಿ, ದಾರ, ಕೆಂಪು ವರ್ಣದ್ರವ್ಯಗಳನ್ನು 'And tell him of my pain' (1998)ಇನ್‌ಸ್ಟಾಲೇಷನ್ ಅಭಿವ್ಯಕ್ತಿಯಲ್ಲಿ ಶಕ್ತಿಯುತವಾಗಿ ತಂದುಕೊಂಡಿದ್ದಾರೆ. Gallant Hearts (1999) ನಲ್ಲಿ ದಾರ-ಸಗಣಿ(ಬೆರಣಿ)ಗಳನ್ನು ತಮಗೆ ಅಗತ್ಯ ಕಂಡ ರೀತಿಯಲ್ಲಿ ನಿರ್ವಹಿಸಿಕೊಂಡಿದ್ದಾರೆ. 1995ರಲ್ಲಿ ತೆಂಗಿನನಾರು, ಸೂಜಿ-ದಾರ, ಎಂಬ್ರಾಯಿಡರಿ ನೆಟ್‌ನೆರವಿನಿಂದ ಅಭಿವ್ಯಕ್ತಿಸಿದ್ದ ಶೀಲಾಗೌಡ ಪ್ರಖರ ಗ್ರಹಿಕೆಗಳ ಅಭಿವ್ಯಕ್ತಿಗಳಿಗೆ ಕಾರಣರಾಗಿ ಪದಾರ್ಥ (material) ಮತ್ತು ಮಾಧ್ಯಮಗಳ ಸಾಧ್ಯತೆಯ ಆಯಾಮಗಳನ್ನು ವಿಸ್ತರಿಸಿದ್ದಾರೆ.

ವಿಶಿಷ್ಟ ಹಿನ್ನೆಲೆಯೊಂದರಲ್ಲಿ 'ದೃಶ್ಯ ಕಲಾವಿದರ 'target audience' ಯಾರೆಂದು ಹೇಳುವುದು ಸುಲಭವಲ್ಲ'[4] ಎನ್ನುವ ಶೀಲಾಗೌಡ ಅವರ ಇನ್‌ಸ್ಟಾಲೇಷನ್‌ಗಳ ಜೀವಧ್ವನಿ ವೀಕ್ಷಕರೆ ಎಂಬುದನ್ನಂತೂ ಸಾಧಿಸಿತೋರಿಸಿದ್ದಾರೆ. ಎಂತಹ ವೀಕ್ಷಕರು? ಅವರ ನೆಲೆ ಏನು? ಎಂಬ ಪ್ರಶ್ನೆಗಳಿಗೆ ಇಂದಿನ ಸಂದರ್ಭದಲ್ಲಿ ಉತ್ತರಿಸುವುದು ಸುಲಭವಲ್ಲ; ಹೌದು. ಆದರೆ ಇನ್‌ಸ್ಟಾಲೇಷನ್,performance ಸಂದರ್ಭಗಳಲ್ಲಿ ನಮ್ಮ ನಡುವೆ ಹಲವು ರೀತಿಯ ವೀಕ್ಷಕರು ನಡೆದಾಡುವುದನ್ನು ನೋಡಿ ಕೌತುಕಗೊಂಡಿದ್ದೇವೆ. ಶೀಲಾಗೌಡ, ಉಮೇಶ್, ಲಲಿತಾಶಂಕರ್, ಸುರೇಖರವರ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳ ಸಂದರ್ಭಗಳು ಇದಕ್ಕೊಂದು ರುಜುವಾತು. 2007ರಲ್ಲಿ ನಡೆದ ಬೆಂಗಳೂರಿನ ಮ್ಯಾಕ್ಸಮುಲ್ಲರ್ ಭವನದಲ್ಲಿನ ಸುರೇಖರವರ ವಿಡಿಯೋ ಇನ್‌ಸ್ಟಾಲೇಷನ್‌ಗಳ ಪ್ರದರ್ಶನ ಅವಧಿಯಲ್ಲಂತೂ ರಾಜ್ಯ -ಹೊರರಾಜ್ಯಗಳ ಹಲವು ನೆಲೆಯ ವೀಕ್ಷಕರ ದಂಡು ಸಿನಿಮಾಗಳ 'ಹೌಸ್‌ಫುಲ್' ಪ್ರದರ್ಶನ ನೆನಪಿಸುವಂತೆ ತುಂಬಿತ್ತು! ಆದರೆ ಸಾಹಿತ್ಯಲೋಕದ ಕೆಲವರು 'ದೃಶ್ಯಕಲೆಗಳ ಅದೃಶ್ಯ' ಶೀರ್ಷಿಕೆಯಡಿ 'ಕನ್ನಡ ನಾಡಿನ ಕಲೆ ಸಂಸ್ಕೃತಿಗಳಲ್ಲಿ ಅ-ದೃಶ್ಯವಾಗಿ ಅಡಗಿರುವ ವಲಯ ದೃಶ್ಯ ಕಲೆಗಳದ್ದು. ಕನ್ನಡದಲ್ಲೊಂದು ಹೊಸ ಕಾದಂಬರಿ ಅಥವಾ ರಂಗಪ್ರಯೋಗ ಬಂದರೆ ಅದು ಅಷ್ಟಿಷ್ಟಾದರೂ ಗಮನ ಸೆಳೆಯುತ್ತದೆ; ಸಾಕಷ್ಟಲ್ಲದಿದ್ದರೂ ಅವುಗಳ ವಿಮರ್ಶೆ-ವ್ಯಾಖ್ಯಾನ ನಡೆಯುತ್ತದೆ. ಆದರೆ, ಕನ್ನಡ ನಾಡಿನಲ್ಲೇ ಕೆಲಸ ಮಾಡುವ ಚಿತ್ರಕಾರ ಅಥವಾ ಶಿಲ್ಪಿಗಳು ಪ್ರಸ್ತುತ ಏನು ಮಾಡುತ್ತಿದ್ದಾರೆಂಬ ಮಾಹಿತಿ ಕೂಡಕನ್ನಡದ ಬೌದ್ಧಿಕವರ್ಗಕ್ಕೆ ಲಭ್ಯವಿಲ್ಲ' ಎಂಬ ದೃಷ್ಟಿ ಕಲಾಕೃತಿ, ಕಲಾಪ್ರದರ್ಶನಗಳ ಕಾರಣಕ್ಕಾಗಿ ಹಾಸ್ಯಾಸ್ಪದ. ದೃಶ್ಯಕಲೆಯಲ್ಲಿ ಅರ್ಥಗಳನ್ನು ಹುಡುಕುವವರಿಗೆ ಸ್ಪಂದಿಸಲಾರದವರಿಗೆ ಸಂವೇದನಾ ಸೂಕ್ಷ್ಮತೆಗಳು ಇಲ್ಲದವರಿಗೆ 'ಅ-ದೃಶ್ಯ'ದ ಹಲವು ಆಯಾಮಗಳು ಕಾಡುವುದು ಸಹಜ. ಪತ್ರಿಕಾರಂಗದ ವಿವಿಧ ಅಂಕಣಗಳನ್ನು ಸಾಹಿತ್ಯಮೂಲದವರೇ ನೋಡಿಕೊಳ್ಳುವುದು, ಬಹುತೇಕ ಬರಹಗಾರರ ಸಂಪರ್ಕ ಹಲವು ರೀತಿಗಳಲ್ಲಿ ಸಾಧ್ಯವಾಗುವುದು ದೃಶ್ಯಕಲಾವಿದರಿಗೆ, ವಿಮರ್ಶಕ -ಇತಿಹಾಸಕಾರರಿಗೆ ಸಾಧ್ಯವಾಗದ ಸಂದರ್ಭ ಇದು. ವೀಕ್ಷಕರನ್ನು ಮುಟ್ಟಲು ದೃಶ್ಯಕಲೆಗೆ ಹಲವು ಹಾದಿಗಳಿವೆ. ಆಸಕ್ತವೀಕ್ಷಕರು 'ತಮ್ಮ ಆಯ್ಕೆಯ' ಹಲವು ಪ್ರಕಾರಗಳ ದೃಶ್ಯಕಲಾ ಪ್ರದರ್ಶನಗಳಿಗೆ ಭೇಟಿನೀಡುತ್ತಾರೆ. 'ಚಿತ್ರಸಂತೆ'ಯಂತೆ ದೃಶ್ಯಕಲಾಜಾತ್ರೆಗಳಿಗೆ ಸಾವಿರಾರು ಸಂಖ್ಯೆಯಲ್ಲಿ ವೀಕ್ಷಕರು ಧಾವಿಸುತ್ತಾರೆ! ಶೀಲಾಗೌಡ 'ದೃಶ್ಯಕಲೆ-ಅದೃಶ್ಯವಾಗಿರುವುದು ನೋಡಲು ಒಲ್ಲೆ

ಎನ್ನುವವರಿಗೆ' ಎನ್ನುತ್ತಾರೆ. ನೋಡುವವರನ್ನೇ ಅವಲಂಭಿಸಿದ, ಅವರೂ ಮುಖ್ಯ ಭೂಮಿಕೆಯೊಂದನ್ನು ನಿರ್ವಹಿಸುವ ಇನ್‌ಸ್ಟಾಲೇಷನ್ ಕಲಾಪ್ರಕಾರ ಸ್ಥಳನಿರ್ದಿಷ್ಟ, ಕಾಲ ನಿರ್ದಿಷ್ಟ ಅವಧಿಯ ನಂತರ ಅದೃಶ್ಯವಾಗುವುದು, ವಿಡಿಯೋ ಹಾಗೂ ಛಾಯಾಚಿತ್ರಮಾಧ್ಯಮಗಳಲ್ಲಿ. ಉಳಿದುಕೊಳ್ಳುವುದು ಕೆಲವೊಮ್ಮೆ ಈ ಮೊದಲೇ ಹೇಳಿರುವಂತೆ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳು ಪುನಃ ಗ್ಯಾಲರಿಗಳಲ್ಲಿ ಕಾಣಿಸಿಕೊಳ್ಳುವುದೂ ಉಂಟು. ಈ ಮೊದಲು ಒಂದು ಇನ್‌ಸ್ಟಾಲೇಷನ್ ಪ್ರದರ್ಶನ ಸಂದರ್ಭದಲ್ಲಿ ಬಂದು ಹೋದ ವೀಕ್ಷಕರ ಅನುಭವ-ಪ್ರತಿಕ್ರಿಯೆಗಳು ಅದೇ ಪ್ರದರ್ಶನ ಮತ್ತೊಮ್ಮೆ ನಡೆದಾಗ ವಿಭಿನ್ನವಾಗಿರಬಲ್ಲ ಸಾಧ್ಯತೆಗಳು ಇದ್ದೇ ಇವೆ.

ಬೆಂಗಳೂರಿನ ಗ್ಯಾಲರಿಯೊಂದರಲ್ಲಿ ಶೀಲಾಗೌಡ 'ಕೇಳುವಿಕೆ'ಯನ್ನು 'ಕಾಣು'ವಂತೆ ಮಾಡಲು ಅಂದರೆ 'The act of listening' ಅನ್ನು ದೃಶ್ಯ ರೂಪದಲ್ಲಿ ನೀರಿನ ಕೊಳವೆಗಳನ್ನು ದುಡಿಸಿಕೊಂಡು ನಿರ್ವಹಿಸಿದರು. ಅದು ನ್ಯಾಯಾರ್ಕಿನಲ್ಲಿಯೂ ಪ್ರದರ್ಶಿಸಲ್ಪಟ್ಟಿತು. ಅಂದರೆ ಈ ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಪುನಃ ರೂಪುಗೊಂಡು ಕಾಣಿಸಿಕೊಂಡಿತು. ಪಾಲ್ಗೊಂಡ ವೀಕ್ಷಕರು ಬೇರೆ ಅಷ್ಟೇ. ಆಕಾಶವಾಣಿಯ ಎ.ಎಸ್.ಮೂರ್ತಿಯವರ

ಶ್ಯಾಮಲಾರವರು ಮಧ್ಯಪ್ರದೇಶದ ಪಚ್ಚಮಡಿ ಗಿರಿಧಾಮದಲ್ಲಿ ಅಭಿವ್ಯಕ್ತಿಸಿದ್ದ ಒಂದು ಸ್ಥಳನಿರ್ದಿಷ್ಟ ಇನ್‌ಸ್ಟಾಲೇಷನ್ ``Banquet on the Earth tabale'' 2004. Material: Iron table, Bricks, Yellow clay, Five, Mandara leaves, food, 12.5x 12.5x2 feet

ಚಿತ್ರ - 92





ಚಿತ್ರ - 93

ಚಿಂತನ್ ಉಪಾಧ್ಯಾಯರವರ ``PINK SHOP''
ಇನ್‌ಸ್ಟಾಲೇಷನ್, (ಚಿತ್ರ ಕೃತಿಗಳೊಂದಿಗೆ), 2006

ಹದಿನೈದು ನಿಮಿಷದ Monologue ನ ಶಬ್ದರೂಪವನ್ನು ತಮ್ಮ ಇನ್‌ಸ್ಟಾಲೇಷನ್‌ನಲ್ಲಿ ಶೀಲಾಗೌಡ ತಂದುಕೊಂಡಿದ್ದರು. 'ಸಂವಹನ ಮತ್ತು ಅಂತರ'ದ ದೃಷ್ಟಿಯ ಹಿನ್ನೆಲೆಯಲ್ಲಿ ನ್ಯೂಯಾರ್ಕಿನವರಿಗೆ ಮೂರ್ತಿಯವರ ವಿಶಿಷ್ಟ ಕನ್ನಡ ಮಾತುಗಳು 'ಶಬ್ದಾಂತರ'ವಾಗಿದ್ದವು. ಸ್ಮಿತಾ ಕಾರಿಯಪ್ಪನವರ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ವ್ಯವಸ್ಥೆಮಾಡಿದ್ದ 'In habiting space within space', (17ರಿಂದ 19, ಮೇ 1996), ಚಿತ್ರ ಆರ್ಟ್ ಗ್ಯಾಲರಿಯಲ್ಲಿನ 'WARP WOOF WEFT' (27-29, ಡಿಸೆಂಬರ್, 1999), Sumukha ಗ್ಯಾಲರಿಯ The Air' (ಆಗಸ್ಟ್, 12-19, 2000) ಒಂದು ರೀತಿಯಲ್ಲಿ ಅವರೇ ಹೇಳಿಕೊಂಡಿರುವಂತೆ 'The marriage of material with space' ನಂಥಹ ಅಭಿವ್ಯಕ್ತಿ, U.K.Hatton Galleryಯಲ್ಲಿ ನಡೆದ ಅವರ Sitespecific (E) SCAPEಶೀರ್ಷಿಕೆಯ ಮಾರ್ಚ್ 9-28,1998ಇನ್‌ಸ್ಟಾಲೇಷನ್‌ಗಳು ಬದುಕಿನ ಹಲವು ಒಳನೋಟಗಳನ್ನು ಬಿಂಬಿಸುವಂಥವು. ಕೆಲವು ಅವರ ಆತ್ಮ-ಚರಿತ್ರೆಯ ಪುಟಗಳಂತಹವು. ಬಿ.ಹೆಚ್.ಶ್ರೀನಿವಾಸಪ್ರಸಾದ್‌ರವರ ಹಲವು ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳು ಸ್ವಯಂನವೈಭವವೇ ಅಲ್ಲದೆ ಆತ್ಮಚರಿತ್ರೆಗೆ ಹತ್ತಿರ. ಕೆಲವು ಸ್ಥಳ ನಿರ್ದಿಷ್ಟ ಇನ್‌ಸ್ಟಾಲೇಷನ್‌ಗಳು ಪ್ರಕೃತಿಯ ಜೀವಧ್ವನಿಯಂತಹವು.



ಸುಬೋಧ್ ಕೇರ್ಕರ್‌ರವರ "The Tenth Planet" ಸ್ಥಳ ನಿರ್ದಿಷ್ಟ ಅಭಿವ್ಯಕ್ತಿ 2002. ಚಿತ್ರ - 94

ತಮ್ಮ ವಿಶಿಷ್ಟ ದೃಷ್ಟಿಯ ಶಿಲ್ಪಗಳಿಂದಾಗಿ ಹೆಚ್ಚು ಚರ್ಚೆಗೆ ಒಳಗಾಗಿರುವ ಎನ್. ಪುಷ್ಪಮಾಲಾರವರು Postmodernನ Feministಗ್ರಹಿಕೆಗಳಿಂದಾಗಿ ಕಲಾವಲಯದಲ್ಲಿ ಪರಿಚಿತರು. ನೋಡುವ, ಗ್ರಹಿಸುವ, ಅಭಿವ್ಯಕ್ತಿಸುವ ಹಾಗೂ ಪ್ರದರ್ಶಿಸುವ ರೀತಿಗಳ ಸಾಧ್ಯತೆಗಳನ್ನು ಮೀರುವ ಕೆಲವೊಮ್ಮೆ ಧಿಕ್ಕರಿಸಿ-ತಿರಸ್ಕರಿಸುವ ಕಲಾವಿದೆ ಅವರು. 1999ರಲ್ಲಿ ಅವರು ಕ್ಯೂರೇಟ್ ಮಾಡಿದ 'ಸ್ಥಳ ಪುರಾಣಗಳು 'ಸ್ಥಳ ನಿರ್ದಿಷ್ಟ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳಲ್ಲಿ ವೀಕ್ಷಕರನ್ನು ವಿಶೇಷ ರೀತಿಯಲ್ಲಿ ಪಾಲ್ಗೊಳ್ಳುವಂತೆ ಮಾಡಲಾಯಿತು, ವೀಕ್ಷಕರ ಪ್ರತಿಕ್ರಿಯೆಯೂ ಅಚ್ಚರಿ ಮೂಡಿಸುವ ಹೊಸ ಅನುಭವ ಲೋಕವನ್ನು ವರ್ಣಿಸುವಂತಿತ್ತು. ಪುಷ್ಪಮಾಲಾ ಎಲ್ಲವನ್ನೂ ತಮಗಿಷ್ಟ ಬಂದ ರೀತಿಯಲ್ಲಿ ನೋಡಬಲ್ಲರು, ಅವರನ್ನೂ ಸಹ ಅಂದರೆ ಎಲ್ಲವನ್ನೂ ಪ್ರಶ್ನಿಸುವಂತೆ, ವಿಡಂಬನೆಯನ್ನು ಪ್ರಶ್ನಿಸಿಕೊಳ್ಳಬಲ್ಲರು. ಅವರ ಅಭಿವ್ಯಕ್ತಿ ಹಾಗಾಗಿಯೇ Post Colonial post modern, post-Structuralist ಚಿಂತನೆಗಳಿಗೆ ಹತ್ತಿರವಾಗಿದೆ.



ಚಿತ್ರ - 95 ವೆಂಕಟಾಚಲಪತಿಯವರು ಜಯನಗರದ ಸಾರ್ವಜನಿಕ ಉದ್ಯಾನದಲ್ಲಿ ಅಭಿವ್ಯಕ್ತಿಸಿದ ಸ್ಥಳ ನಿರ್ದಿಷ್ಟ "Smoke, Noise and the earth"ಇನ್‌ಸ್ಟಾಲೇಷನ್‌ನ ಸಂದರ್ಭದಲ್ಲಿ ವೀಕ್ಷಕರೊಂದಿಗೆ ಇದ್ದಾರೆ. 2004

ಹಲವು ಮಾಧ್ಯಮಗಳಲ್ಲಿ ಅಭಿವ್ಯಕ್ತಿಸುತ್ತಿರುವ ನಟರಾಜ ಶರ್ಮ ಮೂಲತಃ ಸ್ವ-ಭಾವ ವ್ಯಕ್ತಿತ್ವದೊಂದಿಗೆ ದೃಶ್ಯಾತ್ಮಕ ಆಟವಾಡುವವರು. ಚಿತ್ರ-ಶಿಲ್ಪಗಳಲ್ಲಿ ಅಭಿವ್ಯಕ್ತಿಸುತ್ತಲೇ ತಮ್ಮ 'ಅಹಂ' ಅನ್ನು ತಾವೇ ಅಲುಗಾಡಿಸಿ ಅಣಕ ಮಾಡುವವರು. ವಿಶಿಷ್ಟ ದೃಷ್ಟಿಯ ಶಿಲ್ಪಗಳನ್ನೂ ಸೃಷ್ಟಿಸಿರುವ ನಟರಾಜ ಶರ್ಮ"Freedom Bus A View from 6th Standard"(2001-04)ಮಿಶ್ರ ಮಾಧ್ಯಮದ ಶಿಲ್ಪ ಸರಣಿಯಿಂದಲೂ ನೆನಪಾಗುತ್ತಿದ್ದಾರೆ. 2007ರ ಸಂದರ್ಭದಲ್ಲಿ ಅವರು ಇನ್‌ಸ್ಟಾಲೇಷನ್ ಕಲೆಯಾಗಿ ಅಭಿವ್ಯಕ್ತಿಸಿದ ನಮ್ಮ ಸಂದರ್ಭದ ಉಸಿರು ಗಟ್ಟಿಸುವ ಗ್ರಹಿಕೆ ಸಾಕಷ್ಟು ಚರ್ಚೆಗೆ ಒಳಗಾಗಿದೆ.

ಮಹತ್ವಾಕಾಂಕ್ಷೆಯ ಉಮೇಶ್ ಬಹು ಮಾಧ್ಯಮದಲ್ಲಿ (Multi media) ಅಭಿವ್ಯಕ್ತಿಸುತ್ತಿರುವವರು. ತಮ್ಮ ಗ್ರಹಿಕೆಗಳನ್ನು ತೀವ್ರತೆಯಿಂದ ಶಿಲ್ಪವೇ ಅಲ್ಲದೆ ಬಹುತೇಕ ಇನ್‌ಸ್ಟಾಲೇಷನ್ ಕಲಾಪ್ರಕಾರದ ಮೂಲಕ ಅಭಿವ್ಯಕ್ತಿಸುತ್ತಿರುವವರು.

ಅವರದೇ ಆದ ದೃಷ್ಟಿ, ಧೋರಣೆಗಳು ಅವರ ಅಭಿವ್ಯಕ್ತಿಗಳಲ್ಲಿ ಕಾಣಿಸಿಕೊಂಡಿರುವ ರೀತಿಗಳಲ್ಲಿ ತೀವ್ರತೆಯ ಅನುಭವವಾಗುತ್ತದೆ. ಸಮಕಾಲೀನ ಧ್ವನಿಯ ಪ್ರಜ್ಞೆ ಇದೆ. ಬಹುತೇಕ ಅವರು ಗ್ಯಾಲರಿ ರಾಜಕಾರಣವನ್ನು ಧಿಕ್ಕರಿಸಿ'ಸ್ಥಳ ನಿರ್ಧಿಷ್ಟ'ಕಾಲ ನಿರ್ದಿಷ್ಟ

ಅಭಿವ್ಯಕ್ತಿಗಳಲ್ಲಿ ಅವರು ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಬೆಂಗಳೂರಿನ ಹೊರವಲಯದ ಕೊಡಿಗೆ ಹಳ್ಳಿಯ ಹೊಲಗಳ ಬಯಲಿನ ನೆಲಾಕೃತಿ 1996ಹಾಗೂ ಆನಂತರದ ಹಲವು ಅಭಿವ್ಯಕ್ತಿಗಳು ಬಹು ಮುಖ್ಯವಾಗಿ ವೀಕ್ಷಕರನ್ನು ಅರಗಿಸಿಕೊಂಡೇ ಅಭಿವ್ಯಕ್ತಗೊಂಡ "Between myth and history ಹಾಗೂRights Riots?"ಬಹುಕಾಲ ಕಾಡುವಂತೆ ಮೂಡಿ ಬಂದಿದ್ದವು. ಇವರು ಬಹು ಮಾಧ್ಯಮದ ಅಭಿವ್ಯಕ್ತಿಗಳಿಗಿಂತಲೂEarith workಗಳಲ್ಲಿ ಪರಿಸರ ಪರ ಎಂದೇನೂ ಹೇಳಲಾರೆನಾದರೂ ಅವು ನಿರಾಕರಿಸುವ ಅಲ್ಲ/ಇಲ್ಲ ಗಳೆಯುವ ಸಾಂಪ್ರದಾಯಿಕ ವ್ಯಾಕರಣ ಬದ್ಧ ಹಾದಿ, ಮತ್ತು ಸಾಮಗ್ರಿ(Material)ಹಾಗೂ ಬಹು ಮುಖ್ಯವಾಗಿ ಎಲ್ಲರೂ ಗಮನಿಸಬೇಕಿರುವುದು 'ದೃಶ್ಯ ಕಲೆಯ ಉದ್ದೇಶವನ್ನೆ 'ಪ್ರಶ್ನಿಸುವುದು.

ದೇಹವನ್ನು ಆಧುನಿಕೋತ್ತರ ದೃಷ್ಟಿ, ಧೋರಣೆಗಳ ಅಭಿವ್ಯಕ್ತಿಗೆ ದುಡಿಸಿಕೊಳ್ಳುತ್ತಿರುವ ಕೆಲವರ ನಡುವೆ ಸುರೇಖ ವಿಶಿಷ್ಟವಾಗಿ ಕಾಣುತ್ತಾರೆ. ಬಂಡುಕೋರ ಸ್ತ್ರೀವಾದಿ ಕಲಾವಿದೆಯರ ನಡುವೆ ವಿಶ್ವಾತ್ಮಕ ದೃಷ್ಟಿಯ ಅಭಿವ್ಯಕ್ತಿಗಳಿಂದಾಗಿ ಗಣನೀಯರೂ ಆಗಿದ್ದಾರೆ. ದೇಶ-ವಿದೇಶಗಳ ನಡುವೆ ನಡೆದಾಡುತ್ತಾ ಜಾಗತೀಕರಣದ ನೆನಪುಗಳನ್ನೂ ತಂದುಕೊಡುತ್ತಿದ್ದಾರೆ. ಎರಡು ಆಯಾಮಗಳ ಚಿತ್ರಮಾಧ್ಯಮದ ಮುಂದುವರೆದ ಮುಖಾಮುಖಿಯಂತೆ ವಿಡಿಯೋ ಮಾಧ್ಯಮಕ್ಕೆ ಜಿಗಿದ ಅವರು ಆ ಮಾಧ್ಯಮದ ಮೂರು ಆಯಾಮಗಳನ್ನು ಅದರ ದೃಶ್ಯಸಾಧ್ಯತೆಗಳನ್ನು ದುಡಿಸಿಕೊಂಡು ಇನ್‌ಸ್ಟಾಲೇಷನ್ ಕಲಾಪ್ರಕಾರಕ್ಕೆ ತಮ್ಮದೇ ಆದ ರೀತಿಯ ಕೊಡುಗೆ ನೀಡಿದವರು. ವಿಡಿಯೋ ಮತ್ತು ಫೋಟೋ ಇನ್‌ಸ್ಟಾಲೇಷನ್ ಕಲಾ ಮಾಧ್ಯಮಗಳನ್ನು ಹಲವು ರೀತಿಗಳಲ್ಲಿ ದುಡಿಸಿಕೊಂಡಿದ್ದಾರೆ. ಈ ಬೆಳವಣಿಗೆಗೆ ಹಿನ್ನೆಲೆಯಾಗಿ 1996-97ರ ಮಿಶ್ರಮಾಧ್ಯಮದ ಅಭಿವ್ಯಕ್ತಿಗಳು ಇವೆ. ಎರಡನೆಯ ವಿಶ್ವ ಸಮರದ ಸಂದರ್ಭದಲ್ಲಿ ಬ್ರಿಟೀಷರಿಗಾಗಿ ಮಡಿದ ಭಾರತೀಯ ಯೋಧರ ಗೌರವಾರ್ಥ 'They grow every where' ನಂತಹ ಇನ್‌ಸ್ಟಾಲೇಷನ್ ಗ್ರಹಿಕೆಗಳೂ ಅವರೊಳಗಿನ ವಿಶಿಷ್ಟ ಕಲಾವಿದೆಯ ಒಳನೋಟಗಳನ್ನು ಅನಾವರಣಗೊಳಿಸುತ್ತವೆ. ಏಕೆಂದರೆ ಸುತ್ತಲಿನ ಎಲ್ಲ ಆಗುಹೋಗುಗಳೇ ಅಲ್ಲದೇ ಭೂತ-ವರ್ತಮಾನಕಾಲಗಳನ್ನು ಮುಖಾಮುಖಿಯಾಗಿಸುವ ಸಂಧಿಕಾಲ, ಅವಕಾಶಗಳನ್ನು ಸಾಧಿಸುವ ಅಭಿವ್ಯಕ್ತಿಗಳು ಅವರವು. ಸಾಂಸ್ಕೃತಿಕ ಭೂತಕಾಲದ ವಿಸ್ಮೃತಿಗೆ ಒಳಗಾಗಿರುವ ಇಂದಿನ ಸಂದರ್ಭದಲ್ಲಿ ಸುರೇಖ ವರ್ತಮಾನಕ್ಕೆ ತಂದುಕೊಳ್ಳುವ ಹಾಗೂ ಕಸಿಮಾಡುವ ಜನಪ್ರಿಯ ಜಾನಪದ ಹಾಗೂ ಮಿಥ್ಯೆಗಳನ್ನು ಆಧರಿಸಿದ ಪಾತ್ರಗಳು Larger than lifeನಂತಹ ವ್ಯಾಪ್ತಿಯ ವ್ಯಕ್ತಿತ್ವವನ್ನು ಪಡೆದುಕೊಂಡಿವೆ. ವಿಡಿಯೋ ಮಾಧ್ಯಮ ಅವರ ಗ್ರಹಿಕೆಗಳಿಗೆ ಸೂಕ್ತವಾಗಿ ಕಾಣಿಸಿಕೊಂಡಂತೆ 2003ರಲ್ಲಿ ಹಲವು ಅಸಾಮಾನ್ಯ ಅಭಿವ್ಯಕ್ತಿಗಳು ಮೂಡಿಬಂದವು. 'Bhagirathi, Bringing water'(2003) 'Reaching my Self' (2003), Threading the thread, (2003) "line of control" (2003), 'One to one' (2004), ಎಂ.ಜಿ.ರಸ್ತೆಯ Donot urinate, 'Perfect mirrors', 'Birds can Fly' (2005)ಅವುಗಳಲ್ಲಿ ಮುಖ್ಯವಾದವು. ಬಹುತೇಕ ವಿಡಿಯೋ ಇನ್‌ಸ್ಟಾಲೇಷನ್ ಕಲೆಯಾಗಿಯೇ ಗ್ಯಾಲರಿಗಳಲ್ಲಿ ಪ್ರದರ್ಶಿಸಲ್ಪಟ್ಟಿವೆ. ಆದರೆ ದೇಹವನ್ನು ತಮ್ಮ ವೈಯಕ್ತಿಕ ಅಭಿವ್ಯಕ್ತಿಗಾಗಿ ದುಡಿಸಿಕೊಂಡಿರುವ ಪುಷ್ಪಮಾಲಾ, ಸ್ಮಿತಾ ಕಾರಿಯಪ್ಪ

ಮೊದಲಾದ ಕಲಾವಿದೆಯರ ನಡುವೆ ಸುರೇಖ ಭೂತಕಾಲದ ಭಾಗೀರಥಿಯಂತಹ ಹೆಣ್ಣುಗಳ ಪಾತ್ರಗಳನ್ನು ಸಮಕಾಲೀನವಾಗಿ ಪುನರ್ ಸೃಷ್ಟಿಸುವ ಕಾರಣಕ್ಕಾಗಿ ತಮ್ಮ ದೇಹವನ್ನು ದುಡಿಸಿಕೊಂಡಿದ್ದಾರೆ. ಇಂದಿನ ನಗರ ಸಂಸ್ಕೃತಿಯ ಹೆಣ್ಣಿನ ಅಸಹಜ ಸಾವು ಕಾಡುವ ಸುರೇಖರವರ 'Communing with urban heroines'ನ ವಿಡಿಯೋ ಇನ್‌ಸ್ಟಾಲೇಷನ್‌ನಲ್ಲಿ 'Janaki - between fire and sky' 2006, (1.28 mins) (diptych), The Boiling concept/ the burning concept - 2006, (3.32 mins), making home - (2 mins) 2006, Again and again - defying time and gravity - 2 mins. 2006, F-lovers (7 mins), 2006 ಇವುಗಳೊಂದಿಗೆ Three fragmented actions of silence (8.50 mins)2006/07, ಮತ್ತು A Strange moment of stillness (7.5 mins) 2006, ಫೋಟೋ ಇನ್‌ಸ್ಟಾಲೇಷನ್ 'Flowers for the kitchen', 'Binding Senses' ಮೊದಲಾದವು 2007ರಲ್ಲಿ ಬೆಂಗಳೂರಿನ ಗೊಯತೆ -ಸಂಸ್ಥೆಯಲ್ಲಿ (ಮಾಕ್ಸ್‌ಮುಲ್ಲರ್ ಭವನ) ಮಹತ್ವಾಕಾಂಕ್ಷೆಯಿಂದ ಪ್ರದರ್ಶಿಸಲ್ಪಟ್ಟವು. ವಿಮೋಚನಾದ ಆಶ್ರಯದ 'ಹಿಂಸೆಯನ್ನು ಕಲ್ಪಿಸಿಕೊಳ್ಳಲಾರದಂತಾಗಿಸುವುದು' (Making Violence unthinkable) ವಿಷಯ ಕುರಿತ ಚರ್ಚೆಯ ನಡುವೆ ಹಾಗೂ ನಂತರ ಈ ವಿಡಿಯೋ ಇನ್‌ಸ್ಟಾಲೇಷನ್‌ನ ನಡುವೆ ನಡೆದಾಡಿ

ಚಿತ್ರ - 96

ಸ್ಮಿತಾ ಕಾರಿಯಪ್ಪನವರ "Sliced -Spiced - Glazed" ಆಹಾರದ ಒಂದು ಇನ್‌ಸ್ಟಾಲೇಷನ್, ಸ್ಟುಡಿಯೋ ಕುಂಬಾರರಾದ ಹಂಸವರ್ಧನ್ ಮತ್ತು ಸಿಂಧಿಯಾ ಸುಘಾನೆಯವರ ನೆರವಿನೊಂದಿಗೆ ಮೂಡಿ ಬಂದಿದ್ದ ಅಭಿವ್ಯಕ್ತಿ ಇದು. ಇಲ್ಲಿ ವೀಕ್ಷಕರು ಸಹಜ ಹಾಗೂ ಕೃತಕ ಆಹಾರದ ತಿಂಡಿ-ತಿನಿಸುಗಳ ನಡುವೆ ನಡೆದಾಡುತ್ತಿದ್ದರು. ನಿಜವಾದ ತಿಂಡಿ-ತಿನಿಸುಗಳನ್ನು ತಿನ್ನುತ್ತಲೇ ಸೆರಾಮಿಕ್‌ನಿಂದ ಮೂಡಿ ಬಂದಿದ್ದ ಕೃತಕ ತಿಂಡಿ-ತಿನಿಸುಗಳ ನೈಜತೆಗೆ ಅಚ್ಚರಿಗೊಂಡಿದ್ದೂ ಕಂಡು ಬಂದಿತು.







ವಿಡಿಯೋಗಳೊಂದಿಗೆ ಪರಸ್ಪರ ಭಾಗವಹಿಸಿ ವಿಶಿಷ್ಟ ದೃಶ್ಯಸೃಷ್ಟಿ ಗ್ರಹಿಕೆಗಳ ಅಭಿವ್ಯಕ್ತಿಗಳ ನಡುವೆ ಇದ್ದ ವೀಕ್ಷಕರಿಗೆ ಬಹುಕಾಲ ಕಾಡುವಂತಹ ಅನುಭವಗಳು ದಕ್ಕಿರಬಹುದು. ಈ ಪ್ರದರ್ಶನ ಸಂದರ್ಭದ ಹೇಳಿಕೆಯ ಕೆಲವು ಗಣನೀಯ ಅಂಶಗಳನ್ನು ಓದಿ.

1. ಈ ವಿಡಿಯೋಗಳ ಮುಖ್ಯ ಆಸಕ್ತಿ ಇರುವುದು ದೈನಂದಿನ ಅಂಶಗಳಲ್ಲಿ ಸ್ತ್ರೀದೇಹ ಮತ್ತು ಅವುಗಳ ದೈನಿಕತೆಯ ನಡುವಣ ಸಂಬಂಧಗಳಲ್ಲಿ ಇಲ್ಲಿ ಜಲ, ಅಗ್ನಿ ಹಾಗೂ ಪ್ರಕೃತಿಯ ಅಂಶಗಳನ್ನು ನಗರೀಕೃತ ಹೆಣ್ಣಿನ ಕನಸಿನ ಘಟನೆಗಳಿಗೆ ರೂಪಕಗಳಾಗಿ ಬಳಸಲಾಗಿದೆ. ಸೇಂದ್ರೀಯ ಅನುಭವವನ್ನು ದೇಹದೊಂದಿಗೆ ತಾಳೆ ಹಾಕುವುದು ಸುರೇಖರ ವಿಡಿಯೋ ಚಿತ್ರಣದ ಪ್ರಮುಖ ಅಂಶ.

2. ನಶಿಸುವಿಕೆ ಈ ಕೃತಿಗಳ ಮುಖ ಹಂದರ. ನಗರೀಕರಣದ ಹಿನ್ನೆಲೆಯ ದಿನ ನಿತ್ಯದ ಸಹಜ ಅನುಭವವೋ ಎಂಬಂತೆ ನಶಿಸುವಿಕೆಯನ್ನು ಇಲ್ಲಿ ರೂಪಿಸಲಾಗಿದೆ... ದೇಹವೆಂಬ ಅಂಶವನ್ನು ಪುನರ್ ರೂಪಿಸುವ ಮತ್ತು ಸಮಸ್ಯಾತ್ಮಕಗೊಳಿಸುವ ನೆಲೆಗಳಾಗಿ ಈ ವಿಡಿಯೋಗಳು ಪರಿಗ್ರಹಿಸುತ್ತವೆ. ಈ ದೇಹಗಳು ಅನೇಕ ಹಂದರಗಳ ಪೂರಕ/ ವೈವಿಧ್ಯಮಯ ಇತಿಹಾಸಗಳನ್ನುಳ್ಳ ಸ್ತ್ರೀವಾದಿ ವಾಗ್ವಾದಗಳ ವೈರುಧ್ಯಮಯ ಸಂದರ್ಭ ಸೂಚಿಯಾಗಿ, ಸ್ತ್ರೀವಾದಿ ಅವಕಾಶಗಳನ್ನು ಪುನರುದ್ದೀಪಿಸುವ / ಪುನರ್‌ನೆಲೆಗೊಳಿಸುವ ಕಾರ್ಯದಲ್ಲಿ ನಿರತವಾಗಿವೆ. ಈ ವಿಡಿಯೋಗಳಲ್ಲಿ.....

3. ಸುರೇಖ ವಿಡಿಯೋ ಹಾಗೂ ಛಾಯಾಚಿತ್ರಣ ಮಾಧ್ಯಮವನ್ನು ವ್ಯಂಗ್ಯ, ವೈರುಧ್ಯ ಹಾಗೂ ಪ್ರಚೋದನಾಗುಣಸೂಚಿಯಾಗಿ ಬಳಸಿಕೊಳ್ಳುತ್ತಾರೆ.

ಇತ್ತೀಚಿನ ಹಲವು ಓಡಾಟ ಒಡನಾಟಗಳ ಜಾಗತಿಕ ಸಂದರ್ಭದಲ್ಲಿ ಹೊಸಮಾಧ್ಯಮ ಪದಾರ್ಥಗಳು (material) ಹೆಚ್ಚಾಗಿ ದುಡಿಸಿಕೊಳ್ಳಲ್ಪಡುತ್ತಿವೆ. ಬಹುಮಾಧ್ಯಮಗಳ ಅಭಿವ್ಯಕ್ತಿಗಳು ಅಪರೂಪಕ್ಕೆ ಆದರೆ ಬಹುದೊಡ್ಡ ರೀತಿಯಲ್ಲಿ ಕಾಣಿಸಿಕೊಂಡಿರುವಂತೆಯೇ ಆಧುನಿಕೋತ್ತರ ದೃಶ್ಯಸಂಸ್ಕೃತಿಯ ರಾಜಕಾರಣವೂ ಗಣನೀಯವಾಗಿ ಪ್ರಭಾವಬೀರಿದೆ.

ಸ್ತ್ರೀ ಸಂವೇದನೆ ಶೀಲಾಗೌಡ, ಪುಷ್ಪ ಮಾಲಾ,ಅರ್ಚನಾ ಹಂದೆ, ಶಾಂತಾಮಣಿ, ಸುರೇಖ, ಸ್ಮಿತಾ ಕಾರಿಯಪ್ಪ, ರಂಜನಿ ಶೆಟ್ಟಾರ್‌ರವರುಗಳ ಹಲವು ಮಾಧ್ಯಮಗಳ ಇನ್‌ಸ್ಟಾಲೇನ್‌ಗಳಲ್ಲಿ ಶಕ್ತಿಯುತವಾಗಿ ಗ್ರಹಿಸಲ್ಪಟ್ಟಿದೆ.

ಮೈಸೂರಿನಲ್ಲಿರುವ ಎನ್.ಎಸ್.ಹರ್ಷರವರ ಇನ್‌ಸ್ಟಾಲೇಷನ್‌ಗಳು ಆಸ್ಟ್ರೇಲಿಯ Queensland art Galleryಯಲ್ಲಿಯೇ ಅಲ್ಲದೆ 2006ರ ಸಿಂಗಪುರದ ಬೈನಾಲೆಯಲ್ಲಿಯೂ ವಿಶಿಷ್ಟ ವೀಕ್ಷಕರನ್ನು ಪಾಲ್ಗೊಳ್ಳುವಂತೆ ಮಾಡಿತು. 2007ರ ಮುಂಬಯಿಯ Kalagoda Festivalನ Bodhi Art ಪ್ರಾಯೋಜಕತ್ವದ 'A Mirage' ಬಹುಜನರನ್ನು ಹತ್ತಿರ ಸೆಳೆಯಿತು. ಸಿಂಗಪುರದ 2006 ಬೈನಾಲೆಯ 'Cosmic Orphans'(4ಸೆಪ್ಟೆಂಬರ್ -12



ಚಿತ್ರ - 97 *ಸ್ಮಿತಾಕಾರಿಯಪ್ಪನವರ Khoj-2002 ರ ಒಂದು ಇನ್‌ಸ್ಟಾಲೇಷನ್, ಮೈಸೂರು.*

ನವೆಂಬರ್, 2006) ಶ್ರೀ ಕೃಷ್ಣದೇವಾಲಯದ ಮೇಲ್‌ಮಾಳಿಗೆಯಲ್ಲಿ ಕಾಣಿಸಿಕೊಂಡಾಗ ವೀಕ್ಷಕರ ಪ್ರತಿಕ್ರಿಯೆಗಲು ವಿಭಿನ್ನ. 11x7 ಮೀಟರುಗಳ ಅವಕಾಶದಲ್ಲಿ ಭಾರತೀಯ ಭಿತ್ತಿಚಿತ್ರ ಪರಂಪರೆಯನ್ನು ಸಮಕಾಲೀನವಾಗಿಕೊಂಡು Emulsion wall paint ನಿಂದ ಮೂಡಿ ಬಂದ ಅಭಿವ್ಯಕ್ತಿ ಸಿಂಗಪುರದ national heritage site ಆಗಿ ಘೋಷಿಸಲ್ಪಟ್ಟಿರುವ ಈ ದೇವಾಲಯದ ಅಧ್ಯಕ್ಷ ಪಿ.ಶಿವರಾಮನ್ I sat one night and looked at your art; a unique realisation crept over me - it was like I was visualising the varied emotions, thoughts, the cross-cultural domains of life and also the events which taught me how to sail in the ocean of life etc., in each of your collage of paintings. If was internal journey which gave me a border perspective of my self and has envisioned me to undo a few internal scenarios in my life to make my life totally 'life beautiful' ಎಂದು ಹರ್ಷರವರಿಗೆ ಹೇಳುತ್ತಾರೆ. ಆ ಉತ್ಸವದ ಅಥವಾ ಬೈನಾಲೆಯ ವಸ್ತುವೇ 'Belief' ಹಾಗಾಗಿ ದೇವಾಲಯವೆಂಬ ವಿಶಿಷ್ಟ ನಂಬಿಕೆಯ ಶಿಖರದಲ್ಲಿ ಹರ್ಷ ಅಭಿವ್ಯಕ್ತಿಸಿದ್ದ ರೀತಿ ವೀಕ್ಷಕರಿಗೆ ಕೌತುಕವನ್ನೂ ಉಂಟುಮಾಡಿರಬೇಕು. ಪವಿತ್ರ ಭಾವನೆಯ ದೇವಾಲಯ ಹಾಗೂ ಸುತ್ತಲಿನ ನಗರದ ಭೂದೃಶ್ಯಗಳ ನಡುವೆ ಈ 'cosmic orphans' ಒಂದು ರೀತಿಯಲ್ಲಿ 'temporary site-specific' ಅಭಿವ್ಯಕ್ತಿ. ಇಡೀ ದೇವಾಲಯ ಅಲ್ಲಿ ದೇವತೆಗಳ ಶಿಲ್ಪಗಳು ಜನರ 'ನಂಬಿಕೆ'ಗಳ ನಡುವೆ ಹರ್ಷ 'ನಿದ್ರೆ'ಯನ್ನು ಆಧರಿಸಿದ ಆಕ್ರಮಿಸಿದ ಹಲವು ರೀತಿಯ ನೆಲೆಯ ಜನರನ್ನು ಹಲವು ಭಂಗಿಗಳಲ್ಲಿ ನಿದ್ರೆಯನ್ನು ಆವರಿಸಿದಂತೆ, ಅಥವಾ ನಿದ್ರೆಯೋ ಅವರನ್ನು

ಆವರಿಸಿದಂತೆ ಚಿತ್ರಿಸಿದ್ದರು. ಚಪ್ಪಟೆಯಾಗಿ ಒಂದೊಂದೇ ಬಣ್ಣಗಳಿಂದ ಮಹಡಿಯ ಗೋಪುರದ ಬದಿಯ ನೆಲದ ಮೇಲೆ ಜನರನ್ನು ಚಿತ್ರಿಸಿದ್ದರು. ವೀಕ್ಷಕರೂ ಅವುಗಳ ಮೇಲೆ ಮಲಗಿ ನಿದ್ರೆ ಹೋಗುವ ಅವಕಾಶ ಸಾಧ್ಯತೆಗಳು ಪ್ರತಿಯೊಬ್ಬರೂ ತಮ್ಮದೇ ಆದ ಲೋಕವೊಂದನ್ನು ಕಾಣುವ ಅನುಭವಿಸುವ ಸಂದರ್ಭ ಸೃಷ್ಟಿಸಿದ್ದವು. ಕಾಲಕಳೆದಂತೆ ಬಣ್ಣಗಳು ಬಿಸಿಲಿಗೆ ಕಳೆದುಹೋಗಿ 'Cosmic orphans' ಇಲ್ಲವಾಗುತ್ತಾರೆ.

2005ರಲ್ಲಿ ಹರ್ಷ ತುಮಕೂರಿನ TVS ಶಾಲೆಯ ಆಶ್ರಯದಲ್ಲಿ ಕಲ್ಲಿನ ಗುಡ್ಡವೊಂದರ ಮೇಲ್ಮೈ ಅವಕಾಶದಲ್ಲಿ ರೆಕ್ಕೆಗಳನ್ನು ಬಿಳಿಯ ಬಣ್ಣದ ಬಟ್ಟೆಯಿಂದ ಕತ್ತರಿಸಿ ಅಂಟಿಸಿ ಕಾಲ ಸ್ಥಳ-ನಿರ್ದಿಷ್ಟ ಇನ್‌ಸ್ಟಾಲೇಷಶನ್‌ಗೆ ಭೂಮಿಕೆ ಸಿದ್ಧಪಡಿಸಿಕೊಂಡರು. TVS ಶಾಲೆಯ ಮಕ್ಕಳನ್ನು ಆ ರೆಕ್ಕೆಗಳಿಗೆ ಹೊಂದುವಂತೆ 'attention' ಸ್ಥಿತಿಯಲ್ಲಿ ನಿಲ್ಲಿಸಲಾಯಿತು. ನಂತರ ಸ್ವಲ್ಪಕಾಲ ಅನುಭವಿಸಲು ಕಲ್ಪಿಸಲಾಯಿತು. ಶಾಲೆಗೆ ಹಿಂತಿರುಗಿದ ನಂತರ ರೆಕ್ಕೆಗಳಿಗೆ ಹೊಂದಿಕೊಂಡು ನಿಂತಿದ್ದಾಗ ಅವರು ಮನಸ್ಸು ಏನನ್ನು ಚಿಂತಿಸಿತು, ಅನುಭವಿಸಿತು? ಎಂಬುದನ್ನು ಬರೆಯಲು ಸೂಚಿಸಲಾಯಿತು. ಇಲ್ಲೂ ವಿಭಿನ್ನ ಅನುಭವ-ಅಭಿಪ್ರಾಯ; ಹಾರುವ ಕನಸು ಕಂಡವರೂ ಬಹಳ.

ಬಿ.ಜೆ.ಶ್ಯಾಮಲ್‌ರವರ ಇನ್‌ಸ್ಟಾಲೇಷನ್‌ಗಳು ಬಹುತೇಕ ಸ್ಥಳ -ನಿರ್ದಿಷ್ಟವಾದವು. ಮುಂಬಯಿ, ಉದಯಪುರ, ನಾರ್ವೆ, ಬೆಂಗಳೂರುಗಳಲ್ಲಿ ಅವರ ಅಭಿವ್ಯಕ್ತಿಗಳು ಕಾಣಿಸಿಕೊಂಡಿವೆ. ನಂದೀಶ್‌ರೊಂದಿಗೆ 'ಜಲ' ಶೀರ್ಷಿಕೆಯಡಿ ಬೆಂಗಳೂರು ಹಾಗೂ ಕೊಚ್ಚೀನ್ ಕೋಟೆಯಲ್ಲಿ ಪೋಸ್ಟರ್, ಲೇಬಲ್, ಎಳನೀರಿನ ಗೊನೆಗಳೊಂದಿಗೆ ಶ್ಯಾಮಲಾ ಒಮ್ಮೆ ವಿಶಿಷ್ಯವಾಗಿ ಅಭಿವ್ಯಕ್ತಿಸಿದರು. ನೀರಿನ ಶುದ್ಧತೆ-ಕೆರೆಗಳನ್ನು ರಕ್ಷಿಸುವ, ಆಶಯದ ಅಭಿವ್ಯಕ್ತಿ ಕೃತಕ ಪಾನೀಯಗಳ ವಿರುದ್ಧದ ಧೋರಣೆಯ ಅಭಿವ್ಯಕ್ತಿ ಇದು. ವೀಕ್ಷಕರೆಲ್ಲ ಎಳನೀರು ಕುಡಿಯುವ ಸಂದರ್ಭ ಸೃಷ್ಟಿ. ಜಿ.ಸುರೇಶ್ ಕುಮಾರ್ 'Life line', 'Harvest for a better Monsoon', 2003. 'Fate of a selfish Tree' 2003 ಇನ್‌ಸ್ಟಾಲೇಷನ್‌ಗಳು '.....is sues of environmental degradation: the urban madiating the rural, the past finding its reshaped function in the present and the natural coexisting uneasily with the arfificial'[42] ದೃಷ್ಟಿಯವು.

ಹೀಗೆ ನಮ್ಮ ನಡುವೆ ಹಲವು, ವೈವಿಧ್ಯಮಯ ಅನುಭವಲೋಕವನ್ನು ವೀಕ್ಷಕರಿಗೆ ಸೃಷ್ಟಿಸಿಕೊಟ್ಟ ಹಲವರೂ ಇನ್ನೂ ಹೊಸ ಹೊಸ ಸಾಧ್ಯತೆಗಳತ್ತ ಇನ್‌ಸ್ಟಾಲೇಷನ್ ಕಲೆಯನ್ನು ಕೊಂಡೊಯ್ಯುವ ಪ್ರಯತ್ನಗಳಲ್ಲಿದ್ದಾರೆ. ದೃಶ್ಯಕಲೆ ಇನ್ನೂ ಹತ್ತು ಹಲವು ಪ್ರಕಾರಗಳ ನಡುವೆ ಇನ್‌ಸ್ಟಾಲೇಷನ್ ಕಲೆ ಹಲವು ರೀತಿಗಳಲ್ಲಿ ವಿಸ್ತರಿಸಿಕೊಳ್ಳುವ ಆಶಯಗಳು ಹಲವರ ದೃಷ್ಟಿ ಧೋರಣೆಗಳಲ್ಲಿ ವ್ಯಕ್ತವಾಗುತ್ತಿದೆ.

ಚಿತ್ರ - 98

ಎನ್.ಎಸ್. ಹರ್ಷಾರವರ ಒಂದು ಸ್ಥಳ ನಿರ್ದಿಷ್ಟ, ಕಾಲ ನಿರ್ದಿಷ್ಟ ಅಭಿವ್ಯಕ್ತಿಯ ಒಂದು ದೃಶ್ಯ. ಟಿ.ವಿ.ಎಸ್. ಶಾಲೆ, ತುಮಕೂರು, 2005.



3. ವೀಕ್ಷರ ಸುತ್ತ-ಮುತ್ತ ಕಾಣಿಸಿಕೊಂಡ ಕೆಲವು ಆಯ್ದ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳು...

ಬಹುಮಾಧ್ಯಮದಲ್ಲಿ ಸಮಕಾಲೀನ ಹಿಂಸೆ

ಕಲೆಯ ವಿವರಣೆ ಇಂದು ಸಂಕೀರ್ಣ. ಕಲೆ ಎಂದರೆ ಏನು? ಎಂಬ ಪ್ರಶ್ನೆ ಹಿಂದಿನ ದಿನಗಳಲ್ಲಿ ಕೇಳಲ್ಪಟ್ಟಂತೆ ಇಂದಿಗೂ ಕೇಳಲ್ಪಡುತ್ತಿದೆ. ಸಂದರ್ಭ ಪ್ರಭಾವಿಸುವ, ವೀಕ್ಷಕರೂ ಪಾಲ್ಗೊಳ್ಳುವ ಇನ್‌ಸ್ಟಾಲೇಷನ್ ಕಲೆಯ ಭಾವಾಭಿವ್ಯಕ್ತಿಯೂ ಹೆಚ್ಚು ಕಾಣಿಸಿಕೊಳ್ಳುತ್ತಿದೆ. ಹೀಗಾಗಿ ಕಲಾವಿದರೂ ಸಹ ತಮ್ಮದು ಕಲೆಯ ಪರಿಧಿಯಲ್ಲಿ ಬರುತ್ತದೆಯೇ? ಇಲ್ಲವೆ? ಇಲ್ಲವಾದರೆ ಹೇಗೆ ಇಲ್ಲವಾಗಿದೆ? ಹೌದಾದರೆ ಹೇಗೆ ಹೌದಾಗಿದೆ? ಎಂಬ ಸ್ಪಷ್ಟನೆಯನ್ನು ತಮಗೆ ತಾವೇ ಕಂಡುಕೊಳ್ಳುವ ಮನಸ್ಥಿತಿಯಲ್ಲಿದ್ದಾರೆ. ಹಾಗಾಗಿ When I say I might stop making Art as a result of this period in transition, I mean the art I am making right now. I might do something else and probably I will say it is art' ಎಂದ ಉಮೇಶ್ ಮದ್ದನ ಹಳ್ಳಿಯವರು ತಮ್ಮ ಅಭಿವ್ಯಕ್ತಿಯ ಪ್ರದರ್ಶನದ ಕರಪತ್ರದಲ್ಲಿ (ಆಗಸ್ಟ್ 12 ರಿಂದ 14, 2005 ಬೆಂಗಳೂರು ಅರಮನೆ ಮೈದಾನದ ಗಾಯತ್ರಿ ವಿಹಾರ) ಹೇಳಿಕೊಂಡಿರುವುದು ಸಹಜವಾಗಿಯೇ ಇದೆ. ಉಮೇಶ್ ಮದ್ದನಹಳ್ಳಿಯವರ 'rights riots?' ಕಾಲ ನಿರ್ದಿಷ್ಟ ವಿಡಿಯೋ, ಶಿಲ್ಪ, ಶಬ್ದ-ದೃಶ್ಯ ಬಹುಮಾಧ್ಯಮವನ್ನು ದುಡಿಸಿಕೊಂಡ ಅಭಿವ್ಯಕ್ತಿಯ ಪ್ರದರ್ಶನ ಅದು. ಈ ಹಿಂದಿನ ಅವರ ಎಲ್ಲ ಪ್ರದರ್ಶನಗಳಂತೆ ವಿಶಿಷ್ಟತೆಯನ್ನು ಮೆರೆಯಿತು. ಅವರು ನೆಲ, ಕಾಗದ ಇತ್ಯಾದಿ ಮಾಧ್ಯಮಗಳಿಂದ ('Between Myth and history' ಯಿಂದ ಆರಂಭಿಸಿ ಇಂದಿನ 'Rights Riots?' ಪ್ರದರ್ಶನಗಳನ್ನು ಇಲ್ಲಿ ಉಲ್ಲೇಖಿಸಬಹುದು) ದೂರವಾಗಿ ಜಾಗತಿಕವಾದ ಕಂಪ್ಯೂಟರ್ ತಂತ್ರಜ್ಞಾನದ ನೆರವನ್ನು ಪಡೆದ ಅಭಿವ್ಯಕ್ತಿಗೆ ಜಿಗಿದಿದ್ದರು.

ರಂಗಭೂಮಿ, ಚಲನಚಿತ್ರರಂಗದ ಸಂಗವಿರುವವರು ಉಮೇಶ್, 'ಭೂಮಿಗೀತೆ' ಮತ್ತಿತರ ಚಿತ್ರಗಳ ನಾಯಕ ನಟರಾಗಿಯೂ ಅಭಿನಯಿಸಿದ್ದಾರೆ.

ಸಹಜವಾಗಿಯೇ ತಮ್ಮ ದೃಶ್ಯಕಲಾ ಅಭಿವ್ಯಕ್ತಿ ಬಹುಸಂಖ್ಯಾತರನ್ನೂ ತಲುಪಬೇಕೆಂಬ ಆಶಯ ಹೊಂದಿದವರಂತೆ ಕಂಡರೂ, ದೊಡ್ಡ ರೀತಿಯಲ್ಲಿ ಪ್ರದರ್ಶನಗಳನ್ನು ವ್ಯವಸ್ಥೆ ಮಾಡಿದರು. ಅವೆಲ್ಲ ಗಂಭೀರವಾಗಿಯೇ ರೂಪುಗೊಂಡಿರುತ್ತವೆ. ಸಾಮಾನ್ಯರಿಗೂ ಸಹಜ ಪ್ರವೇಶ ಅವಕಾಶ ಇರುತ್ತದೆ. ಅವರ 1996ರ ಭೂಮಿಯನ್ನು ದುಡಿಸಿಕೊಂಡ ಅಭಿವ್ಯಕ್ತಿ ಭಾರತೀಯ ದೃಶ್ಯಕಲಾರಂಗದಲ್ಲಿ ದೊಡ್ಡ ಸುದ್ದಿ ಮಾಡಿದ್ದು ನಿಮಗೆ ನೆನಪಾಗಬಹುದು.

ಅಲ್ಪಸಂಖ್ಯಾತರು ಹಾಗೂ ಬಹುಸಂಖ್ಯಾತರ ನಡುವೆ ಹಲವು ರೀತಿಯ ಹಿಂಸಾಚಾರಗಳು, ಬಹುಸಂಖ್ಯಾತರ ಅಟ್ಟಹಾಸ ಮೆರೆಯುತ್ತವೆಯಷ್ಟೆ. ಮತೀಯ ಗಲಭೆಗಳು ಹಲವು ಕಾರಣ-ಸಂದರ್ಭಗಳ ನೆಪಗಳಲ್ಲಿ ಆಗಾಗ ಭುಗಿಲೇಳುವ ರೀತಿ

ಆತಂಕಮಯ. ಗುಜರಾತಿನ ಗೋಧ್ರಾ ಗಲಭೆಗಳಲ್ಲಿ ಅಮಾನವೀಯ ಹಿಂಸೆಯ ಫಲವಾಗಿ ಮೂಡಿಬಂದ ಮಾನವೀಯ ಅನುಕಂಪದ ಮುಖ ಅನ್ಸಾರಿಯದು. ಅವನ ಆತಂಕಗೊಂಡ, 'ನನ್ನನ್ನು ಕೊಲ್ಲಬೇಡಿ' ಎಂದು ಬೇಡಿಕೊಳ್ಳುವ, ಕಣ್ಣೀರು ಸುರಿಸುವ ಮುಖ ಬಹುತೇಕ ದೇಶ ವಿದೇಶಗಳ ಪತ್ರಿಕೆಗಳ ಮುಖಪುಟಗಳಲ್ಲಿ ಕಾಣಿಸಿಕೊಂಡು ಕೋಟ್ಯಾಂತರ ಓದುಗರಿಗೆ ಗಾಬರಿಯನ್ನುಂಟು ಮಾಡಿತಷ್ಟೆ. ಆ ಮುಖವನ್ನು ಬೆಂಗಳೂರಿನ KOJ ಅಂತಾರಾಷ್ಟ್ರೀಯ ಕಲಾ ಶಿಬಿರದ ತಮ್ಮ ಅಭಿವ್ಯಕ್ತಿಯಲ್ಲಿ ಸುರೇಶ್ ಜಯರಾಮ್ ದುಡಿಸಿಕೊಂಡಿದ್ದರು. ಇಲ್ಲಿ ಆ ಮುಖದ ಆತಂಕ, ತೊಳಲಾಟಗಳನ್ನು ತೀವ್ರತೆಯಿಂದ ಅನುಭವಿಸಿ ಅನ್ಸಾರಿಯನ್ನು ತಮ್ಮೊಳಕ್ಕೆ 'ಪರಕಾಯ ಪ್ರವೇಶ' ಮಾಡಿಸಿಕೊಂಡಂತೆ, ತಮ್ಮನ್ನು 'ರೂಪಾಂತರ' 'ಭಾವಾಂತರ'ಗಳಿಗೆ ಒಳಪಡಿಸಿಕೊಂಡಂತೆ ಕ್ಯಾಮರಾದಲ್ಲಿ ಗ್ರಹಿಸಲ್ಪಟ್ಟು ಪ್ರದರ್ಶನದಲ್ಲಿ ಉಮೇಶ್ ಬಿಂಬಿಸಲ್ಪಟ್ಟರು. ತಮ್ಮ ತೀವ್ರತೆಯ 'ಅಭಿನಯ'ದ ಅಭಿವ್ಯಕ್ತಿಯಿಂದ ಅವರು ಮತೀಯ ಗಲಭೆಗಳ ಹಿಂಸೆಯ ಫಲವಾದ ನೋವು ಆತಂಕಗಳನ್ನು ಉಂಟು ಮಾಡುತ್ತಾರೆ.

ಈ ಅನುಭವಕ್ಕೆ ಪೂರಕವಾಗಿ ಅವರು ಗಾಯತ್ರಿ ವಿಹಾರದ ಒಂದು ಭಾಗವನ್ನು ವಿಶೇಷ ರೀತಿಯಲ್ಲಿ ಸಜ್ಜುಗೊಳಿಸಿದ್ದರು. ಇಡೀ ವಿಶ್ವದಲ್ಲಿ ನಾವು ಅಗಾಗ ಕೇಳುವ ನೋಡುವ ಇಂತಹ ಮತೀಯ ಗಲಭೆ, ಜನಾಂಗೀಯ ಗಲಭೆಗಳಲ್ಲಿ ನೊಂದವರು ಪ್ರಾಣ ಕಳೆದುಕೊಂಡವರ ಸಂಖ್ಯೆಗೆ ಮಿತಿ ಇದೆಯೆ? ಈ ಹಿನ್ನೆಲೆಯಲ್ಲಿ ತಲೆಬುರುಡೆಗಳ ನಕಲು ರೂಪಗಳು ನೋಡುಗನನ್ನು ಸ್ವಾಗತಿಸುವಂತೆ ವಿಶಿಷ್ಟವಾಗಿ ನಾವು ಕಿವಿಯಿಂದ ಅವುಗಳ ಆಕ್ರಂದನ ಕೇಳುವ ರೀತಿಯಲ್ಲಿ ಪದರ್ಶಿಸಲ್ಪಟ್ಟಿದ್ದವು. ನಾವು ಹತ್ತಿರ ಹೋದಂತೆಯೇ ನಮ್ಮೊಂದಿಗೆ ಮಾತನಾಡಲಾರಂಭಿಸುವ ಅವು ತಮ್ಮ ನೋವಿನ ರೀತಿಯನ್ನು ಹೇಳಿಕೊಳ್ಳುತ್ತಿದ್ದವು. ಇಲ್ಲಿ ಶಬ್ದವನ್ನು ಸಮಕಾಲೀನ ಉನ್ನತ ತಂತ್ರಜ್ಞಾನದ ಸಾಧ್ಯತೆಗಳಿಂದ ದುಡಿಸಿ ಬಳಸಿಕೊಂಡಿದ್ದ ರೀತಿ ಪರಿಣಾಮಕಾರಿ. ದೊಡ್ಡವರೇ ಅಲ್ಲದೆ ಚಿಕ್ಕ ಮಕ್ಕಳ ಆಕ್ರಂದನ ಅವರ ಗೋಳುಗಳನ್ನು ನಾವು ಕೇಳಿ ಅನುಭವಿಸಬಹುದಾಗಿತ್ತು. ಕೇಳುಗರಿಗಾಗಿ ಕಾದಿರುವಂತೆ ಕಾಣುತ್ತಿದ್ದ ಆ ಬುರುಡೆಗಳು ನಾವು ಅವುಗಳ ಹತ್ತಿರ ಹೋದಂತೆಯೇ ಅವು ಹೇಳಿಕೊಳ್ಳುತ್ತಿದ್ದ ರೀತಿಗಳಲ್ಲಿ ಕಲಾವಿದನ ಸಂವೇದನಾಶೀಲತೆಯ ಜತೆ ಜತೆಗೇ ಚತುರತೆ, ಬುದ್ಧಿವಂತಿಕೆ, ತಂತ್ರಜ್ಞಾನದ ಅರಿವು ಇತ್ಯಾದಿಗಳು ಕೆಲಸ ಮಾಡಿವೆ.

ಮುಂದೆ ಹೋದಂತೆ ಏಕಕಾಲದಲ್ಲಿ 4 ವಿಡಿಯೋಗಳಲ್ಲಿ ನಮ್ಮೊಂದಿಗೆ ತಮ್ಮ ಅಘಾತಕಾರಿ ಅನುಭವವನ್ನು ಹೇಳಿಕೊಳ್ಳುವ ಅಥವಾ ಅವರಷ್ಟಕ್ಕೆ ಅವರೇ ಹೇಳಿಕೊಳ್ಳುವ ಮುಗಿಯದ, ಗಾಬರಿಯ ಸಂದರ್ಭ ಅಲ್ಲಿ ಮುಂದುವರೆಯುತ್ತದೆ. ನಾಲ್ಕು, ದೃಶ್ಯ - ಶ್ರವ್ಯ ಕಥನದಂತಹ ಕಥನದಂತಹ ಅಭಿವ್ಯಕ್ತಿಯಲ್ಲಿ ನಾಲ್ವರ ಧ್ವನಿ, ಕಣ್ಣುಗಳಲ್ಲಿ ಅನುಭವವಾಗುವ ಗಾಬರಿ, ನೋವುಗಳ ಹಿನ್ನೆಲೆಯಲ್ಲಿ ಕಾಡಿರುವ ಹಿಂಸೆಯ ಸ್ವರೂಪವನ್ನು ನಾವು ಚಿಂತಿಸುವಂತೆ ಮಾಡುತ್ತವೆ. 'I decided never to move away from this place, I am enjoying this, now that I know something happening as my head, later I realise I am loosing my expression' ಎಂಬ ಮಾತುಗಳು 4 ವಿಡಿಯೋಗಳಲ್ಲಿ ಕಲಾವಿದ ಆಯ್ಕೆ ಮಾಡಿಕೊಂಡು ತಮ್ಮ ಭಾವ -ಧ್ವನಿಗಳನ್ನು

ನೀಡಿರುವವರಿಂದ ಪುನರಾವರ್ತಿತಗೊಳ್ಳುವಂತೆ ಕೇಳಿಸುತ್ತಲೇ ಇರುತ್ತವೆ. ಈ ಹಿಂಸೆಯ ಅನುಭವಕ್ಕೆ ಪೂರಕವಾಗಿ ಸಾಂಕೇತಿಕವಾಗಿ ತಲೆಯ ಶಿಲ್ಪವೊಂದನ್ನು ರಕ್ತದೊಂದಿಗೆ ತೋಯಿಸುವ, ಸಿಡಿಸುವ, ವಿಕೃತಗೊಳಿಸುವ ಪ್ರಕ್ರಿಯೆಯ ಆಶಯವೂ ಇದೆ.

ಮುಂದಿನ ಕೋಣೆಯಲ್ಲಿ ಉಮೇಶರವರ ಚಿತ್ರದ ಬಿಂಬ ಡಿಜಿಟಲ್ ತಂತ್ರಜ್ಞಾನದ ನೆರವಿನೊಂದಿಗೆ ಭಿತ್ತಿಯಲ್ಲಿ ದೊಡ್ಡ ರೀತಿಯಲ್ಲಿ ಕಾಣಿಸಿಕೊಂಡಿತ್ತು. ಜತೆಗೆ ಅಳುವಿನ ಆಕ್ರಂದನ, 'How can I convince you not to kill me' ಎಂಬ ಆತಂಕದಲ್ಲಿ ಕೈಮುಗಿವ ಸ್ತಬ್ದ ಚಿತ್ರ ದೃಶ್ಯ ಅದು. ರಾಷ್ಟ್ರಪತಿಯವರು ಖೈದಿಗಳಿಗೆ ನೀಡುವ ಕ್ಷಮಾದಾನದ ಹಿನ್ನೆಲೆಯ ಚಿಂತನೆಯ ದೃಷ್ಟಿ. ವೀಕ್ಷಕರಿಗೆ ಇವನನ್ನು ನೇಣು ಹಾಕುತ್ತೀರೋ? ಬಿಡುಗಡೆ ಮಾಡುತ್ತೀರೋ? ಎಂಬ ಪ್ರಶ್ನೆ-ಸಂದರ್ಭವನ್ನು ಎದುರಿಸಿಗುಂಡಿ ಒತ್ತಿ ಅವರಿಷ್ಟದ ತೀರ್ಪು ಕೊಡಬಹುದಾಗಿದ್ದ ಪ್ರದರ್ಶನ ಅದು. ಇಲ್ಲಿಯೂ ತಂತ್ರಜ್ಞಾನದ ನೆರವು ಪಡೆಯಲಾಗಿತ್ತು. ನೇಣು ಹಾಕಬೇಕು ಎಂಬ ನೀವು ನಿರ್ದಿಷ್ಟ ಗುಂಡಿ ಒತ್ತಿದರೆ ನೇಣಿನ ದೃಶ್ಯ ಅಲ್ಲಿ ಹಾಜರಾಗುತ್ತಿತ್ತು. ಬಿಡುಗಡೆ ಮಾಡುವ ಗುಂಡಿ ಒತ್ತಿದರೆ ತೆರೆಯ ಮೇಲಿನ ವ್ಯಕ್ತಿವೇಗವಾಗಿ ಅಲ್ಲಿಂದ ಪಾರಾಗಿ ಓಡುವ ದೃಶ್ಯ. ಗೊತ್ತಿಲ್ಲದೆ ಯಾರು ಯಾವ ಗುಂಡಿ ಏಕೆ ಒತ್ತುತ್ತಾರೆ? ಎಂಬುದ ಗಂಭೀರವಾಗಿ ಪರಿಗಣಿಸಲ್ಪಡದೇ ಹೋದರೂ ಸಹ ವೀಕ್ಷಕರಿಗೆ ಮತೀಯ ಹಿಂಸೆಯ ಒಳನೋಟಗಳ ಹಲವು ಪದರಗಳನ್ನಾದರೂ ಸ್ಪರ್ಶಿಸಿದ ಅನುಭವ ಆಗಬಲ್ಲದು.

ಸುಶಾಂತ್ ಮಂಡಲ್‌ರವರ ಒಂದು ಇನ್‌ಸ್ಟಾಲೇಷನ್ ಕಲೆಯ ನೋಟ 2007

ಕನ್ನಡ ಭಾಷೆಯ ಮಿತಿಗೆ, ಅದರ ಸಾಧ್ಯತೆಗೆ ಸಿಲುಕಿದ ಕವಿ ಬೇಂದ್ರೆಯವರ ಅಭಿವ್ಯಕ್ತಿಯ ಹೋರಾಟ ಅಧ್ಯಯನಯೋಗ್ಯ. ಹಾಗೆಯೇ ದೃಶ್ಯಕಲಾವಿದರು, ಕಲಾವಿದೆಯರು ತಮ್ಮ ಸೌಂದರ್ಯ ಶಾಸ್ತ್ರದ ಭಾಷೆಯನ್ನು ರೂಢಿಸಿಕೊಳ್ಳುವಲ್ಲಿ ಹೊಸದಾಗಿ ಅನ್ವೇಷಿಸಿಕೊಳ್ಳುವಲ್ಲಿ ನಡೆಸುತ್ತಿರುವ ದೃಶ್ಯ ಅಭಿವ್ಯಕ್ತಿಯ ಹೋರಾಟದ ಸಾಹಸಗಳು ಹಲವು. ಕೊಲ್ಕತ್ತೆಯ ಸುಶಾಂತ್ ಮಂಡಲ್ ಮೂಲತಃ ವರ್ಣ ಚಿತ್ರಕಲಾವಿದರು. ನಂತರವಷ್ಟೇ ಅವರು ಅಲ್ಲಿನ ಹಿಡಿತ ಮೀರಿ ಕ್ಯಾನ್‌ವಾಸ್‌ನೊಂದಿಗೆ ಮರದ ಮಾಧ್ಯಮವನ್ನೂ ದುಡಿಸಿಕೊಳ್ಳಲಾರಂಭಿಸಿದವರು. ಅವರು ವರ್ಣಚಿತ್ರಕಲೆಯ ವ್ಯಾಕರಣ ಮೀರಿ ನಡೆದಿದ್ದರು; Assemblages ಗೆ ಹತ್ತಿರವಾಗಿ Constructionಗೆ ಪೂರಕವಾಗಿ ಧ್ಯಾನಿಸುತ್ತಿದ್ದರು. ಪ್ರಸ್ತುತ ಅವರು ನಮ್ಮ ನಡುವೆ ಇರುವ ಹಲವು ಪ್ರಕಾರ ಮಾಧ್ಯಮಗಳ ದೃಶ್ಯಕಲೆಯ ಅಭಿವ್ಯಕ್ತಿಯ ಹಾದಿಗಳಲ್ಲಿ ಹೊಸದಾದ Multimediaವನ್ನು ಚಲನಶೀಲತೆಯಿಂದ ದುಡಿಸಿಕೊಂಡಿದ್ದಾರೆ. ರೂಪ ಮತ್ತು ಪದಾರ್ಥ (material)ಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದವರು. ಅದನ್ನೇ ಮುಂದುವರೆಸಿ ಬೆಂಗಳೂರಿನ ಗ್ಯಾಲರಿ SKE ನಲ್ಲಿ 'It Doesn't Bite' (2007) ಶೀರ್ಷಿಕೆಯ ಇನ್‌ಸ್ಟಾಲೇಷನ್ ಕಲೆಯನ್ನು ಪ್ರದರ್ಶಿಸಿದರು. ಎರಡು ಆಯಾಮಗಳಿಂದ ಮೂರು ಆಯಾಮಗಳ ಅಭಿವ್ಯಕ್ತಿಗೆ ಹೆಜ್ಜೆಯಿರಿಸಿ ಈಗ ಅದನ್ನೂ ಮೀರಿ ನಡೆದಿದ್ದಾರೆ; Installationಗಳಾಗಿಸಿದ್ದಾರೆ.



ಚಿತ್ರ - 99

ಸುಶಾಂತ್ ಮಂಡಲ್‌ರವರ' ``Doesn't Bite' (2007)non-site ಇನ್‌ಸ್ಟಾಲೇಷನ್‌ನ ಒಂದು ನೋಟ.

Kinetic ಶಿಲ್ಪಗಳು ಅವರಿಗೆ ಬಲು ಇಷ್ಟ. ಕಾಲ್ಡರ್ ಎಂಬ ಶಿಲ್ಪಿಯ ಬೃಹತ್ ಚಲನಶೀಲ(Kinetic) ಶಿಲ್ಪಗಳನ್ನು ನೆನಪು ಮಾಡಿಕೊಳ್ಳಿ. ಸರಳ, ಕನಿಷ್ಠ ತಂತ್ರಾಂಶದ ಮೋಟಾರಿನಯಾಂತ್ರಿಕತೆಯನ್ನು ಹಲವು ಆಯಾಮಗಳಲ್ಲಿ ದುಡಿಸಿಕೊಂಡ, ವೀಕ್ಷಕರೊಂದಿಗೆ ಪಾರದರ್ಶಕತೆಯಿಂದ ತೆರೆದುಕೊಳ್ಳುವ ಅವರೊಂದಿಗೆ ಹೊಂದಿಕೊಳ್ಳುವ ಅಭಿವ್ಯಕ್ತಿಗೆ ಪ್ರಯತ್ನಿಸಿ ವಿಶಿಷ್ಟ ಸಂತೋಷವನ್ನು ಅನುಭವಿಸಿದವರು ಸುಶಾಂತ್. ಆಹ್ಲಾದಿಯಲ್ಲಿ ಮುನ್ನಡೆದರು.

ಯಂತ್ರಚಾಲಿತ ಹಲವು ನಡೆಗಳು, ವಿಶಿಷ್ಟ ಸಂಚಲನಭಾವಗಳು, ವಿಡಿಯೋದ ದೃಶ್ಯಾತ್ಮಕ ವೇಗಗಳು, ಸೋಪಿನ ನೀರಿನ ಮೂಲಕ ಗಾಳಿಯು ಬೆರೆತು ಮೂಡಿಬರುವ ತೇಲುವ, ಹಾರುವ, ಅಂತಿಮವಾಗಿ ನೆಲಕ್ಕೆ ಒರಗುವ ಸೋಪು- ಗಾಳಿಯ ಗುಳ್ಳೆಗಳು ಇವೆಲ್ಲ ವೀಕ್ಷಕರು ಬೆರಗಿನಿಂದ ಪಾಲ್ಗೊಳ್ಳುವಂತೆ ಮಾಡುತ್ತವೆ. ಇಂದಿನ ವಿಕ್ಷಿಪ್ತನಗರ ಜೀವನದ ಹಲವು ವಿಕೃತಮುಖಗಳ ನಡುವೆ ಗಾಬರಿ ಮೂಡಿಸುವ ಹಗ್ಗ ಕಟ್ಟಿದ

ಗೋಣಿಚೀಲವೊಂದರಲ್ಲಿ ಚಲನೆಯನ್ನು ವೀಕ್ಷಕ ಅನುಭವಿಸುವ ಪ್ರದರ್ಶನ ಇದು. ಹಾಗೆಯೇ ಚೀಲದ ಉಸಿರಾಟ ಹೇಗೆ? ಎಂಬುದರ ಎಲ್ಲ ಚಲನಶೀಲ ಒಳನೋಟಗಳನ್ನು CCD ಕ್ಯಾಮರ ಮೂಲಕವೇ ಅಲ್ಲದೆ ಆಕರ್ಷಕ ವರ್ಣಚಿತ್ರವೊಂದರಿಂದಲೂ ವಿವರಿಸಿದ್ದರು! ವೀಕ್ಷಕರೊಂದಿಗೆ ಎಂತಹ ಸಂಬಂಧ ಸಂಪರ್ಕ ಸೇತುವೆ ನೋಡಿ; Installation ಕಲೆಯ ಆತ್ಮವೇ ಈ ಬಹುಮುಖ್ಯ ಅಂಶ.

ಪ್ರಸ್ತುತ ಇಲ್ಲಿ ಪ್ರಸ್ತಾಪಿತ 'It doesn't Bite' ಪ್ರದರ್ಶನದಲ್ಲಿ ಸೋಪು ನೀರಿನ ಗುಳ್ಳೆಗಳ ಸುತ್ತ ಹರಿದ ದೃಶ್ಯಕಲಾಲಹರಿ ಚಲನಶೀಲ ಅಭಿವ್ಯಕ್ತಿ ವೀಕ್ಷಕರನ್ನು ಆಕರ್ಷಿಸುತ್ತದೆ. ಈಗುಳ್ಳೆಗಳ ರಚನೆ, ಶಕ್ತಿ ಸಾಧ್ಯತೆ, ಗುಣ-ಲಕ್ಷಣ, ಇತಿ ಮಿತಿಗಳ ಸುತ್ತಲಿನ ಕಲಾವಿದನ ಸೃಷ್ಟಿಶೀಲ ಬೆರಗು ನೋಡುಗರ ಅನುಭವಕ್ಕೆ ದಕ್ಕುತ್ತವೆ. 'ಅವರವರ ಭಾವಕ್ಕೆ ಅವರವರ ಭಕುತಿಗೆ' ಎಂಬ ಗೋಡೆಗಳ ತಡೆ ಇಲ್ಲಿಲ್ಲ. ಒರಟು Material ಗಳಿಂದ ಮಗುವಿನ ಮುಗ್ಧ ಭಾವ ವೈಭವದ ಹೊಳಹುಗಳೂ ಸೂಕ್ಷ್ಮಜ್ಞರಿಗೆ ಅನುಭವವಾಗಬಹುದು. ಈ ಕೃತಿಗಳಲ್ಲಿ ಜೀವಧ್ವನಿ (life source) ಇದೆ. ಸೌಂದರ್ಯ ಅರಸುವವರಿಗೆ ಇಂತಹ ಇನ್‌ಸ್ಟಾಲೇಷನ್ ಕಲೆಯ ಅಭಿವ್ಯಕ್ತಿಗಳು 'ಇನ್ನೆಲ್ಲಿಯ ರವಿವರ್ಮ-ನಂದಲಾಲ್- ಅಮೃತಾ-ವೆಂಕಟಪ್ಪ' ಎನ್ನಿಸುವುದು ಸಹಜವೆ. ಇಲ್ಲಿ ಇವೆಲ್ಲವುಗಳನ್ನು ಮೀರಿ ಅಭಿವ್ಯಕ್ತಿ ಮುಖ್ಯಪಾತ್ರ ವಹಿಸುತ್ತದೆ. ಕಲಾವಿದನ ಸಂದರ್ಭಕ್ಕೆಪೂರಕ ಭೂಮಿಕೆಯಾಗುತ್ತದೆ. ಇಂದು ದೃಶ್ಯ ಕಲಾವಿದ/ಕಲಾವಿದೆಯರ ಅಭಿವ್ಯಕ್ತಿಯ ಹಾದಿಗಳನ್ನು ಗಮನಿಸಿ. ದೇಹ, ಅಭಿನಯ, ವಿಡಿಯೋ, ಮೂಲಗಳ performance, multimedia installationsಗಳನ್ನು ನೆನಪುಮಾಡಿಕೊಳ್ಳಿ. ಪುಷ್ಪಮಾಲಾ, ಸ್ಮಿತಾಕಾರಿಯಪ್ಪ, ಸುರೇಖರವರುಗಳ ಅಭಿವ್ಯಕ್ತಿಗಳು ಈ ಸಾಲಿಗೆ ಸೇರುತ್ತವೆ. 2006 ರಿಂದ ಪ್ರದರ್ಶಿತಗೊಳ್ಳುತ್ತಿರುವ ನಾಟಕ ಗಿರೀಶ್ ಕಾರ್ನಾಡ್‌ರ 'ಒಡಕಲು ಬಿಂಬ' ನಾಟಕ ಎನ್ನುವುದಕ್ಕಿಂತ ಹೆಚ್ಚಾಗಿ Multi Mediaದೊಂದಿಗೆ ಅರಂಧತಿನಾಗ್ ತಮ್ಮನ್ನೇ ದುಡಿಸಿಕೊಂಡ ಗಣನೀಯ 'Performance' ಆಗಿ ನನ್ನ ಅನುಭವಕ್ಕೆ ಬಂದಿದೆ. ಸ್ಕ್ರಿಪ್ಟ್ ವಸ್ತು ಬೇರೆಯವರದು. ಅದಕ್ಕೆ ಪೂರಕವಾಗಿ ತಮ್ಮನ್ನು ದುಡಿಸಿಕೊಂಡ ಅರುಂಧತಿನಾಗರದ್ದು ಸ್ವಯಂ ಅನುಭವವಲ್ಲ ಎಂದರೆ ಸುರೇಖರವರ 'ಕೆರೆಗೆಹಾರ'ದ ವಸ್ತುವೂ ಹಾಗೆಯೇ ಅಲ್ಲವೇ? ಇರಲಿ ಪುನಃ ಸುಶಾಂತ್ ಮಂಡಲ್‌ರ 'It doesn't Bite' ಇನ್‌ಸ್ಟಾಲೇಷನ್ ಕಲೆಗೆ ಬರೋಣ. ಪ್ರದರ್ಶನದ 'Sky Bubbles 'Shadow', 'Moving sack', 'Bubbles tray' with claws' ಇನ್‌ಸ್ಟಾಲೇಷನ್‌ಗಳೆಲ್ಲಾ ಹಲವು ದೃಶ್ಯ ಕುತೂಹಲವನ್ನು ಮೂಡಿಸುವುವೆ ಆಗಿವೆ. ಈ ಅಭಿವ್ಯಕ್ತಿಗಳಿಗೆ ದುಡಿಸಿಕೊಂಡಿರುವ ಪದಾರ್ಥಗಳನ್ನು ಓದಿ. ಮರದ ಪೆಟ್ಟಿಗೆ, ಉಕ್ಕಿನ ರಚನೆಗಳು, ಗಾಜಿನ ಸೀಸೆಗಳು, ಇಂಟಿಗ್ರೇಟೆಡ್ ದೀಪಗಳು, ಸೋಪು ನೀರು, ಗಾಳಿಯ ಪಂಪು, ಟೈಮರ್, LED ದೀಪಗಳು, ಟ್ರಾನ್ಸ್‌ಫಾರ್ಮರ್‌ಗಳು, ಗಾಜಿನ ಟ್ಯೂಬು, ಗೋಣಿಚೀಲ, ಫೈಬರ್ ಗಾಜು, CCD ಕ್ಯಾಮರ, ಟಿ.ವಿ. ಕಪ್ಪು ಗ್ರಾನೈಟ್ ಚಪ್ಪಡಿ ಇತ್ಯಾದಿ. ಅಸಾಮಾನ್ಯ ವೆಚ್ಚ ಅಚ್ಚರಿ. ಆದರೂ ಇನ್‌ಸ್ಟಾಲೇಷನ್ ಕಲೆಯ ಪ್ರಕಾರ ಹೀಗೆ. ಇನ್ನೂ ನೀವು ಊಹಿಸದ ಎಷ್ಟೋ ಪದಾರ್ಥ

(material)ಗಳನ್ನು ಕಲಾವಿದರು/ ಕಲಾವಿದೆಯರು ದುಡಿಸಿಕೊಳ್ಳಬಲ್ಲರು; ವೀಕ್ಷಕರನ್ನು ಒಳಗೊಂಡೂ ಅವರಿಗೇ ಅಚ್ಚರಿ-ಸಂಭ್ರಮಗಳನ್ನು ಉಂಟುಮಾಡಲೂ ಬಲ್ಲರು!

ಬಹುಮುಖಿ ಸಂಸ್ಕೃತಿಗಳ ನಡುವಿನ ಅಭಿವ್ಯಕ್ತಿ

ಪ್ರಸ್ತುತ ಸಂದರ್ಭಕ್ಕೆ ಸಲ್ಲುವ **ಇನ್‌ಸ್ಟಾಲೇಷನ್ ಕಲೆ** ಹಾಗೂ **ಹ್ಯಾಪೆನಿಂಗ್ಸ್**‌ಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೆ ನಿರ್ವಹಿಸಿಕೊಂಡ ಅಂತಾರಾಷ್ಟ್ರೀಯ ಕಲಾವಿದರ ಕಾರ್ಯಗಾರ (ಅಕ್ಟೋಬರ್ 19ರಿಂದ ನವೆಂಬರ್ 1, 2002) ಮೈಸೂರಿನ ಆಲೀವ್ ಗಾರ್ಡನ್ ರೆಸಾರ್ಟ್‌ನಲ್ಲಿ ನಡೆಯಿತು.

ನವದೆಹಲಿಯಲ್ಲಿ ಮಾತ್ರ ವ್ಯವಸ್ಥೆಯಾಗುತ್ತಿದ್ದ ಈ ಪ್ರತಿಷ್ಠಿತ ಕಲಾಕಾರ್ಯಾಗಾರ ಇದೇ ಮೊದಲ ಬಾರಿಗೆ ದಕ್ಷಿಣ ಭಾರತಕ್ಕೆ ಅದರಲ್ಲೂ ಕರ್ನಾಟಕಕ್ಕೆ ದಕ್ಕಿದ್ದು ಸ್ವಾಗತಾರ್ಹ ಬೆಳವಣಿಗೆ. ಇಲ್ಲಿ ನಮ್ಮ ಯುವ ಕಲಾವಿದರ, ಇತಿಹಾಸಕಾರರ ಪ್ರಯತ್ನ, ಶ್ರಮ ಸಾಕಷ್ಟು ಕೆಲಸ ಮಾಡಿವೆ. ಬೆಂಗಳೂರು -ಮೈಸೂರುಗಳ ಪ್ರಾಯೋಜಕರ ಪಾಲೂ ಇದೆ.

ವಿವಿಧ ಸಾಂಸ್ಕೃತಿಕ ಹಿನ್ನೆಲೆಯ ಕಲಾವಿದರು ಹೊಸ ಹೊಸ ರೀತಿಯ ನಿರ್ವಹಣೆಯಲ್ಲಿ ಸ್ಥಳೀಯವಾಗಿ ಲಭ್ಯವಾಗುವ ಪರಿಕರಗಳನ್ನು ಮಾಧ್ಯಮವನ್ನಾಗಿ ಬಳಸಿ ಹೊಸ ಹೊಸ ಸೌಂದರ್ಯಾತ್ಮಕ ವಿಧಾನಗಳನ್ನು ಹುಡುಕಿಕೊಳ್ಳುವ ಉದ್ದೇಶದ ಕೋಝ್ (ಹುಡುಕಾಟ, ಅನ್ವೇಷಣೆ) ಶೀರ್ಷಿಕೆಯ 2002ರ ಕಾರ್ಯಾಗಾರ ತನ್ನ ಮೂಲ ಉದ್ದೇಶಕ್ಕೆ ಪೂರಕವಾಗಿತ್ತು. ಯುನೈಟೆಡ್ ಕಿಂಗಡಮ್, ಜರ್ಮನಿ, ಮಲೇಷಿಯಾ, ಸ್ವಿಟ್ಜರ್‌ಲ್ಯಾಂಡ್, ಕೆನಡಾ, ನೈಜೀರಿಯಾ, ಆಸ್ಟ್ರೇಲಿಯಾ, ಬಾಂಗ್ಲಾದೇಶ್, ನ್ಯೂಜಿಲಾಂಡ್, ಶ್ರೀಲಂಕಾ, ಆಮ್ ಸ್ಟೆರ್‌ಡೆಮ್‌ಗಳ ಪ್ರತಿಭಾನ್ವಿತ ಕಲಾವಿದ ಕಲಾವಿದೆಯರೇ ಅಲ್ಲದೆ ನಮ್ಮ ದೇಶದ ಹಲವಾರು ಕಲಾವಿದರೂ ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಇನ್‌ಸ್ಟಾಲೇಷನ್ ಕಲೆ ಅಭಿವ್ಯಕ್ತಿ ಪ್ರಕಟಗೊಳ್ಳುವ ಸ್ಥಳವನ್ನೇ ಒಂದು ಸೌಂದರ್ಯಾತ್ಮಕ ಅಂಗವನ್ನಾಗಿ ಅರಗಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ಅಂಶಕ್ಕೆ ಪೂರಕವಾಗಿಯೇ ಕಾರ್ಯಾಗಾರದಲ್ಲಿ ಎಲ್ಲರೂ ತಮ್ಮ ಅಭಿವ್ಯಕ್ತಿಯನ್ನು ತಂದುಕೊಂಡಿದ್ದರು. ಅಲ್ಲಿನ ನೆಲ, ಮರಗಿಡ, ಕಟ್ಟಡ, ಕಟ್ಟಡದ ನೆಲ, ಗೋಡೆ, ಸೂರು, ಕಲ್ಲು ಇತ್ಯಾದಿಗಳೇ ಅಲ್ಲದೆ ಭೂಮಿಯಿಂದ ಮೊಳಕೆಯೊಡದ ರಾಗಿಯ ಪೈರನ್ನೂ ಸಹ ಕಲಾವಿದರು ದುಡಿಸಿಕೊಂಡಿದ್ದರು.

ನ್ಯೂಜಿಲ್ಯಾಂಡ್‌ನ ಮೈಖೇಲ್ ಟುಫೆರಿಯ ಹ್ಯಾಪೆನಿಂಗ್ ಅಭಿವ್ಯಕ್ತಿಯ ಹಿಂದೆ ಅವರ ಜನಾಂಗೀಯ ಆದಿಮ ಸಂಸ್ಕೃತಿಯ ನೆರಳು ದಟ್ಟವಾಗಿತ್ತು. ಮೈಸೂರಿನ ಕೋಝ್ 2002ರ ವಿಡಿಯೋ ದಾಖಲೆ ಪರಿಪೂರ್ಣವಲ್ಲದಿದ್ದರೂ ಉಪಯುಕ್ತವಾಗಿ ಮೂಡಿಬಂದಿದೆ. ಮೈಖೇಲ್ ಟುಫೆರಿಯ ಈ ಅಪರಿಚಿತ ಅಭಿವ್ಯಕ್ತಿಯ ಮಾಧ್ಯಮದಲ್ಲಿ ಇತಿಹಾಸಪೂರ್ವ ಬದುಕಿನ ಸತ್ವಶಕ್ತಿಯುತವಾಗಿ ಮೂಡಿ ಬಂದಿದೆ.

ರೋಮಾಂಚಕಾರಿಯಾಗಿ ಅರೆನಗ್ನ ದೇಹಿ ಕಲಾವಿದ ಗೂಳಿಯ ಮುಖವಾಡ

ಧರಿಸಿಗೋಡೆಯ ಅವಕಾಶದಲ್ಲಿ ಪಟಾಕಿ ಸರಗಳನ್ನು ಸಿಡಿಸಿ ಸುಟ್ಟ ಗಾಯದಂತಹ ರೇಖೆಗಳಿಂದ ಮೂಡಿಸುವ ರೇಖಾ ಚಿತ್ರ, ಹಸಿ ಮೀನಿನ ಭಕ್ಷಣೆ, ಕುಣಿತ ಇತ್ಯಾದಿಗಳು ವೀಕ್ಷಕರಿಗೆ ರೋಮಾಂಚಕಾರಿ. ಹಸುವಿನ ಮೈ ಮೇಲೆ ತನ್ನ ಮೈಮೇಲಿನ ಹಚ್ಚೆಯ ರೂಪಗಳನ್ನು ಚಿತ್ರಿಸಿ ತನ್ನ ಅಣ್ಣನೆಂದು ಭಾವಿಸಿ ನಡೆಸಿಕೊಳ್ಳುವ ಘಟನೆಯ ನಡವಳಿಕೆಯೂ ಆತ್ಮೀಯ ಅನುಭವ ನೀಡಬಲ್ಲದು.

ನೆಲದಲ್ಲಿ ರಾಗಿಯನ್ನು ಬಿತ್ತಿ ತಾಯಿಗೆ ತನ್ನ ಮನದಾಳದ ಪತ್ರವನ್ನು ಮೊಳಕೆಗಳ ಅಕ್ಷರಗಳಿಂದ ಬರೆದಿದ್ದ ಹೇಮಾ ಉಪಾಧ್ಯಾಯ, ಮಲ್ಲಿಗೆ ಹೂವಿನ ಋತುವಿನ ಮೊಗ್ಗಿನ ಜಡೆಯ ಅಲಂಕಾರದ ಛಾಯಾ ಚಿತ್ರಗಳನ್ನು ವಿಶಿಷ್ಟ ರೀತಿಯಲ್ಲಿ ಪ್ರದರ್ಶಿಸಿ ಒಂದು ವಿಶಿಷ್ಟ ಸಾಂಸ್ಕೃತಿಕ ಪರಂಪರೆಯ ಅಧ್ಯಯನದಂತಹ ಅಭಿವ್ಯಕ್ತಿಗೆ ಕಾರಣರಾಗಿರುವ ಸುರೇಖಾ ವಿಶಿಷ್ಟ ಅಭಿವ್ಯಕ್ತಿ ಪ್ರಕ್ರಿಯೆಗೆ ಕಾರಣರಾಗಿದ್ದಾರೆ. ರೆಸಾರ್ಟ್‌ನ ಕಟ್ಟಡದ ಸೂರಿನಲ್ಲಿ ಸುರೇಖಾರಿಂದ ಜೇನುಗೂಡು ಸೃಷ್ಟಿಯಾಗಿತ್ತು. ಸ್ಮಿತಾ ಕಾರಿಯಪ್ಪ ರೇಷ್ಮೆಯ ಮೂಲದ ಹಲವು ಒಳನೋಟ ಬಿಂಬಿಸುವ ಅನುಭವ ಲೋಕವನ್ನು ತೋರಿದ್ದರು. ಆಸ್ಟ್ರೇಲಿಯಾ ಮ್ಯಾಂಡಿ ರಿಡ್ಲೀ ಸ್ಥಳೀಯ ಕರಕುಶಲಿಗಳ ಸ್ಫೂರ್ತಿಯಿಂದ ಸಾಮಾನ್ಯರನ್ನೂ ರಂಜಿಸುವ ಅಭಿವ್ಯಕ್ತಿಗೆ ಕಾರಣರಾಗಿದ್ದರು. ರೆಸಾರ್ಟ್‌ನ ತೆಂಗಿನ ಮರಗಳ ನಡುವೆ ಬ್ರೆಝಿಲ್ ಹಾಗೂ ಜರ್ಮನಿಗಳಲ್ಲಿ ನಡೆದಾಡುವ ಕಲಾವಿದೆ ಕಾರ್ಲಾ ಗಾಗ್ಲಿಯಾರ್ಡಿ ತೆರೆದ ಎರಡು ಸಿಲಿಂಡರಿನಾಕಾರದ ಇಟ್ಟಿಗೆ ಗೋಡೆಯ ಕಟ್ಟಡ ಸೃಷ್ಟಿಸಿ ಅನುಭವಗಳ ಹಲವು ಸಾಧ್ಯತೆಗಳನ್ನು ಅನ್ವೇಷಿಸುತ್ತಾ **'ಆನ್‌ಟೈಟಿಲ್ಡ್ ಅನ್‌ಟಿಲ್‌ನೌ'** ಎಂಬ ಶೀರ್ಷಿಕೆಯಿಂದ ಈ ಸೃಷ್ಟಿಯನ್ನು ಹೆಸರಿಸಿದ್ದು ಸಹಜವಾಗಿಯೇ ಇದ್ದಿತು. ಸ್ಥಳ-ಅವಕಾಶದ ಹಲವು ಸಾಧ್ಯತೆಗಳು ವೀಕ್ಷಕರು ಅಲ್ಲಿ ನಡೆದಾಡುವಾಗ ಉಂಟಾಗುತ್ತದೆ.

ಬರೋಡೆಯಲ್ಲಿರುವ ಕನ್ನಡಿಗ ಕಲಾವಿದ ವಿಜಯ ಬಾಗೋಡಿಯವರ ಕರಾಳ ಅನುಭವ ನೀಡುವ ಪ್ರತಿಷ್ಠಾಪನಾ ಅಭಿವ್ಯಕ್ತಿ. ದೃಶ್ಯ ಲೋಕದ ರೂಪಾಂಶಗಳಿಗೆ ಮೂರನೆಯ ಆಯಾಮ ನೀಡಿ ಕತ್ತಲೆ ಬೆಳಕಿನ ನಡುವೆ ಹೊಸ ರೀತಿಯಿಂದ ನೋಡುವ ಪ್ರಯತ್ನ ಮಾಡಿದ್ದ ಬಾಬು ಈಶ್ವರ ಪ್ರಸಾದ್ ಅವರುಗಳೇ ಅಲ್ಲದೆ ಅರಮನೆಯ ಹಳೆಯ ವಾಹನವನ್ನು ಸಮಕಾಲೀನವಾಗಿ ನಾಟಕೀಯವಾಗಿ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯನ್ನಾಗಿಸಿದ್ದ ಮೈಸೂರಿನ ದ್ವಾರಕಾನಾಥ್ ಗಮನ ಸೆಳೆದರು. ಶ್ರೀಲಂಕಾದ ಸರಟ್ ಕುಮಾರಸಿರಿ ಕಾವೇರಿ ನೀರಿನ ಉರಿವ ನಾಲಿಗೆಯಂತಹ ಸಮಸ್ಯೆಯನ್ನು ಸೌಂದರ್ಯಾತ್ಮಕ ಇನ್‌ಸ್ಟಾಲೇಷನ್ ಆಗಿಸಿ ಅಭಿವ್ಯಕ್ತಿಯಾಗಿಸಿದ್ದರು.

ಉಳಿದಂತೆ ಕ್ರಿಸ್ಟೋಫ್ ಸ್ಟೋರ್ಜ್, ಚಾಂಗ್‌ಯಾಂಗಚಿಯಾ, ಗಿಸೆಲೆ ಅಮಾನ್‌ಟಿಯಾ, ಜೇಕಬ್‌ಜಾರಿ, ಮಯೂರು ಸುಬೇದಾರ್, ಮೆಹಬೂಬ ಉರ್ ರೆಹಮಾನ್, ಬಿಜು ಜೋಝ್, ರಣಬೀರ್ ಕೆಲ್ಕಾ, ರೀನಾ ಸಾಯಿನಿ, ಎನ್.ಎನ್.ರಿಮ್‌ಜೋನ್, ಶಾಂಭವಿ ಮೊದಲಾದವರು ಅಭಿವ್ಯಕ್ತಿಸಿದ್ದರು. ಕಾರ್ಯಾಗಾರದ ಅಸಾಮಾನ್ಯ ಅಭಿವ್ಯಕ್ತಿಯಂತೆ ಯುನೈಟೆಡ್ ಕಿಂಗ್‌ಡಮ್‌ನ ಆಮಿ

ಪ್ಲಾಂಟ್ 'ಆಮೀಸ್ ನ್ಯೂಸ್' ಪತ್ರಿಕೆ ಸಂಪಾದಿಸಿ ಅಭಿವ್ಯಕ್ತಿಸಿದ್ದು ಕುತೂಹಲ ಉಂಟು ಮಾಡಿತು. ಹೊಸ ಹೊಸ ಅಭಿವ್ಯಕ್ತಿ ಮಾಧ್ಯಮಗಳ ಅನ್ವೇಷಣೆಗೂ ಈ ಕಲಾ ಕಾರ್ಯಗಾರ ಕಾರಣವಾಯಿತು. ದೃಶ್ಯ ಮಾಧ್ಯಮವೆಂದರೆ 'ಇಂಥವೇ' ಎಂಬ ನಿರ್ದಿಷ್ಟ ಮಿತಿಗೆ ಒಳಗಾಗಿ ಕಲಾ ಸೃಷ್ಟಿಯಲ್ಲಿ ತೊಡಗಿರುವವರಿಗೆ, ಕಲಾಕೃತಿಗಳನ್ನು ಅನುಭವಿಸುತ್ತಿರುವವರಿಗೆ ಹೊಸ ಸಾಧ್ಯತೆಗಳತ್ತ ದೃಷ್ಟಿಹರಿಯುವ ಅಗತ್ಯ ಉಂಟಾಯಿತು.

ಮನಸ್ಸು ದೇಹ ಧ್ಯಾನ, ಯೋಗ, ಪ್ರಜ್ಞಾಪ್ರವಾಹ...

1997ರಲ್ಲಿ ಲಲಿತಾ ಶಂಕರ್‌ರವರು ತಮ್ಮ ಅಭಿವ್ಯಕ್ತಿಗಳಲ್ಲಿ ನಮ್ಮ ಸಂಸ್ಕೃತಿಯ ಧ್ಯಾನದಲ್ಲಿ ನಿರತರಾಗಿದ್ದವರು; ಶಿಲ್ಪ ಹಾಗೂ ಇನ್‌ಸ್ಟಾಲೇಷನ್ ಕಲಾಪ್ರಕಾರ (Installation art)ಗಳೆರಡರಲ್ಲೂ ಕಾಣಿಸಿಕೊಂಡರು. 2007ರ ಸಂದರ್ಭದಲ್ಲಿ ಅವರ ಭಾರತೀಯ ಸಂಸ್ಕೃತಿಯ ದರ್ಶನದ ಧ್ಯಾನ ಹೆಚ್ಚು ಹೆಚ್ಚು ಗಾಢವಾಗಿ ಅವರ ಶಿಲ್ಪ ಹಾಗೂ ಇನ್‌ಸ್ಟಾಲೇಷನ್‌ಗಳಲ್ಲಿ ಕಾಣಿಸಿಕೊಂಡಿತು. ಹಿಂದಿನ ಅವರ 'ಪ್ರಾಣ' ಶಿಲ್ಪಗಳ ಸಮೂಹ 'ಸಪ್ತಪದಿ 'ಇತ್ಯಾದಿ ಅಭಿವ್ಯಕ್ತಿಗಳು ಭಾರತೀಯ ಆತ್ಮ-ಪದಾರ್ಥಗಳನ್ನು ಪಶ್ಚಿಮ ಹಾಗೂ ಯೂರೋಪಿನ ಸಮಕಾಲೀನ ಶಿಲ್ಪ ಅಭಿವ್ಯಕ್ತಿ, ಮಾಧ್ಯಮ ಪದಾರ್ಥ(Medium-Material)ಗಳ ನಿರ್ವಹಣೆಯ ಹಾದಿಯನ್ನು ಅನುಸರಿಸಿದ ಪ್ರಭಾವದ ಆತಂಕ (Anxity of Influence)ದಲ್ಲಿಯೇ ದುಡಿಸಿಕೊಂಡಿದ್ದವು. ಪ್ಯಾರೀಸಿನ New Realists 'ಗುಂಪಿನ ಕ್ರಿಸ್ಟೋರವರ Package 1962ಮತ್ತು Wrapped Dressmaker's Dummy on a Roof Rack 1962' ಇನ್‌ಸ್ಟಾಲೇಷನ್ ರೂಪಗಳಿಗೆ ಹೋಲಿಸಬಹುದಾಗಿದ್ದಂತವು. ಲಲಿತಾಶಂಕರ್‌ರವರ ಈ ಅಭಿವ್ಯಕ್ತಿಗಳ ಆತ್ಮ ಭಾರತೀಯವೆಂಬುದೇ ಇಲ್ಲಿ ಹೆಚ್ಚು ಪ್ರಸ್ತುತ.

ಇದೀಗ ಇಡೀ ವಿಶ್ವದಲ್ಲಿ ಮನಸ್ಸು ಆತ್ಮ ಎಚ್ಚರ ಇತ್ಯಾದಿಗಳ ಕುರಿತ ಪ್ರಜ್ಞೆಯ ಪ್ರವಾಹದ ಬಗ್ಗೆ ಹಲವು ಚಿಂತನೆಗಳು ಸಾಂಸ್ಕೃತಿಕ ಸಾಮಾಜಿಕ ರಂಗಗಳಲ್ಲಿ ಆಗುತ್ತಿವೆ. ಭಾರತೀಯ ಯೋಗದ ಪ್ರಾಮುಖ್ಯತೆ ಯಜಮಾನ್ಯತೆ ಇತ್ಯಾದಿಗಳ ಕುರಿತವಾದ ವಿವಾದಗಳು ಅದರ ಅಗತ್ಯವನ್ನು ಗ್ರಹಿಸಿಯೇ ನಡೆದಿವೆ. ಪಶ್ಚಿಮ ಹಾಗೂ ಯೂರೋಪುಗಳಲ್ಲಿ ಈ ಬಗ್ಗೆ ಹೆಚ್ಚು ಬಿಸಿ ಇದೆ. ಲಲಿತಾ ಶಂಕರ್‌ರಂತಹ ಸಂವೇದನಾಶೀಲ ಭಾರತೀಯ ಮಣ್ಣಿನ ವಾಸನೆಯ ಕಲಾವಿದೆ ಜಾಗತಿಕವಾಗಿ ನಮ್ಮ ಧ್ಯಾನ ಯೋಗಗಳ ಆತ್ಮವನ್ನು ಪಶ್ಚಿಮದ 'ಮನಸ್ಸಿನ ಅಧ್ಯಯನ'ಗಳ ಸಹಯೋಗದೊಂದಿಗೆ ದೃಶ್ಯ ಕಲೆಯಾಗಿಸಿ ಅಭಿವ್ಯಕ್ತಿಸಿರುವುದು ಆನಂದದ ಬೆಳವಣಿಗೆ. ಯೋಗದ ಅಧ್ಯಯನದಿಂದ ಮನುಷ್ಯನ ಮನಸ್ಸಿನ ಬೆಳವಣಿಗೆಯಲ್ಲಿ ಏಳುಚಕ್ರಗಳ ಪಾತ್ರವನ್ನು ಅವರು ದೃಶ್ಯಾತ್ಮಕವಾಗಿ ಗ್ರಹಿಸಲು ಪ್ರಯತ್ನಿಸಿರುವ ಇನ್‌ಸ್ಟಾಲೇಷನ್‌ನಲ್ಲಿ (ಅವರು ಅದನ್ನು ಹಾಗೆ ಹೆಸರಿಸಿಲ್ಲ) ವೀಕ್ಷಕರಿಗೆ ವಿಶಿಷ್ಟ ಅನುಭವದ ದರ್ಶನ. ನೈಜತೆಗೆ ನಾವು ಮನಸ್ಸು ದೇಹಗಳ ಎಚ್ಚರದ ಪ್ರಜ್ಞೆಯಿಂದ ಮೃದುವಾಗಿ ಸ್ಪಂದಿಸಿದರೆ, ಪಶ್ಚಿಮ ಹಾಗೂ ಯೂರೋಪಿನ ಚಿಂತನೆಯಲ್ಲಿ ಮನಸ್ಸಿನ ಎಚ್ಚರವನ್ನು ಲೆಕ್ಕಹಾಕಿದಂತೆ ಲೌಕಿಕ ವ್ಯಾಪಾರದ ಹಲವು ಹಂತಗಳಲ್ಲಿ ಗ್ರಹಿಸಲಾಗಿದೆ.

ಈ ಎರಡೂ ದೃಷ್ಟಿಗಳನ್ನು ಅಧ್ಯಯನ ಮಾಡಿರುವ ಲಲಿತಾಶಂಕರ್‌ರವರ ವಿಶಿಷ್ಟ ಫಲವೆಂಬಂತೆ ಮೂಡಿ ಬಂದ ಅಭಿವ್ಯಕ್ತಿ In Search of Consciousness 2007 ಬೆಂಗಳೂರಿನ Sumukhaಗ್ಯಾಲರಿಯಲ್ಲಿ ವೀಕ್ಷಕರ ನಡುವೆ ತೆರೆದುಕೊಂಡಿತ್ತು.[43]

ದೃಶ್ಯಭಾಷೆಯಲ್ಲಿ ಹೊಸತನ

ಕೃಷ್ಣರಾಜ ಚೋನಾಟ್ ನಮ್ಮ ನಡುವೆ ಬುದ್ಧಿ ಭಾವಗಳನ್ನು ಸಮಕಾಲೀನವಾಗಿ ಸಂಯೋಜಿಸಿ ಅಭಿವ್ಯಕ್ತಿಸುತ್ತಿರುವ ಕೆಲವೇ ಕಲಾವಿದರಲ್ಲಿ ಒಬ್ಬರು. 'ಕಲೆ ಸೌಂದರ್ಯದಿಂದ ವಂಚಿತವಾದರೆ ಆಗಲಿ ಬಿಡಿ' ಎಂಬಂಥ ದೃಷ್ಟಿಸೃಷ್ಟಿಗಳಿಗೆ ಕಾರಣರಾಗುತ್ತ ಅವರು ನಡೆದು ಬರುತ್ತಿದ್ದಾರೆ. ಕಲೆ ಏಕೆ? ಎಂಬ ಪ್ರಶ್ನೆಗೆ ನೀಡಬಹುದಾದ ಉತ್ತರಕ್ಕೆ ಪೂರಕವಾಗುವಂತಹ ಸೃಷ್ಟಿಗಳು ಅವರವು. ಪ್ರಕೃತಿ, ದೇಹಗಳು ಪೂರಕವಾಗುವಂತಹ ಸೃಷ್ಟಿಗಳು ಅವರವು. ಪ್ರಕೃತಿ, ದೇಹಗಳ ಜೈವಿಕ ಕೌತುಕಗಳ ಮೂಲದ ಅಭಿವ್ಯಕ್ತಿಗಳು ಅವರವು. ಆದರೆ ಅವುಗಳ ಹಿಂದೆ 'ಸಂಸ್ಕೃತಿ' ಮತ್ತು 'ದೇಹ'ಗಳೆರಡರ ಧ್ಯಾನಮಯ, ಸಮಾನಾಂತರ ಕಾಯ್ದುಕೊಂಡ ಗ್ರಹಿಕೆಗಳೂ ಪ್ರಭಾವ ಬೀರಿವೆ. ಅವರ ಗ್ರಹಿಕೆಗಳು ಅಭಿವ್ಯಕ್ತಿಗೊಳ್ಳುವಾಗ ಕೃತಕತೆ ಹಾಗೂ ನೈಜತೆಗಳ ನಡುವಿನ ಆಟದಲ್ಲಿ ಬದುಕಿನ ಕೆಲವು ಅವಸ್ಥೆ, ಅನುಭವಗಳನ್ನು ನಕಲಿಯಾಗಿ ಕೃತಕ ವಸ್ತುಗಳಲ್ಲಿ ಸದಾ ಉಳಿಸಿಕೊಳ್ಳಬಹುದಾದ ಸಾಧ್ಯತೆ. ಚತುರತೆ ಇವರ ಕೆಲವು ಅಭಿವ್ಯಕ್ತಿಗಳಲ್ಲಿ ಹೆಚ್ಚೋಗಿ 'ಲೋ/ಹೈ', 'ಮಿಲ್ಕ್ ಅಂಡ್ ಸ್ಕಿನ್' ಇತ್ಯಾದಿ ಅಭಿವ್ಯಕ್ತಿಗಳಲ್ಲಿ ಅನುಭವಕ್ಕೆ ಬರುತ್ತವೆ.

'ಲೋ/ಹೈ', 'ಮಿಲ್ಕ್ ಅಂಡ್ ಸ್ಕಿನ್', ಇತ್ಯಾದಿ ಅಭಿವ್ಯಕ್ತಿಗಳು ಇನ್‌ಸ್ಟಾಲೇಷನ್ ಕಲೆಯಾಗಿ ರೂಪುಗೊಂಡು ಬೆಂಗಳೂರಿನ ಸಾಕ್ಷಿ ಆರ್ಟ್ ಗ್ಯಾಲರಿಯಲ್ಲಿ (ನವೆಂಬರ್ 21ರಿಂದ ಡಿಸೆಂಬರ್ 11, 2002) ಪ್ರದರ್ಶಿಸಲ್ಪಟ್ಟವು. ಹೊಸತನ ತುಂಬಿದ ದೃಶ್ಯಭಾಷೆ ಅದು.

ವೀಕ್ಷಕರೂ ಅಭಿವ್ಯಕ್ತಿಯ ಅಂಶವಾದ 'ಖೋಜ್ 2003'

ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ನಡೆದ 'ಖೋಜ್ ೨೦೦೩'ಅಂತಾರಾಷ್ಟ್ರೀಯ ಕಲಾವಿದರ ಪ್ರದರ್ಶನ (ಡಿಸೆಂಬರ್ ೬ರಿಂದ ೨೧, ೨೦೦೩) ಮಹತ್ವದ್ದು. ಇಂದು ಯಾರ ಪ್ರಭಾವ ಯಾರ ಮೇಲೆ? ಎಂದು ಕೇಳುವ ಸಂದರ್ಭ ಇಲ್ಲ. ಇದು ಪರಸ್ಪರವಾಗಿದೆ. ಹೀಗಾಗಿ ಇಂದಿನ ಕಲಾಸೃಷ್ಟಿ ಜಾಗತಿಕ ಸಂವೇದನಾತ್ಮಕ ನೆಲೆಯಲ್ಲಿ ಆಯಾ ಸ್ಥಳೀಯ ಅನುಭವ ಗ್ರಹಿಕೆಗಳ ಸೊಗಡನ್ನು ಅರಗಿಸಿಕೊಂಡಿರುವ ಅನಿವಾರ್ಯತೆಯಿದೆ. ೧೯೮೨ರಲ್ಲಿ ಅಮೆರಿಕೆಯ ಶಿಲ್ಪಿ ಆಂಟೋನಿ ಕಾರೊ ಮತ್ತು ರಾಬರ್ಟ್–ಲೋಡೆರ್‌ರವರಿಂದ ನ್ಯೂಯಾರ್ಕ್ ರಾಜ್ಯದಲ್ಲಿ ಟ್ರೈಯಾಂಗಲ್ ಕಾರ್ಯಾಗಾರ ಪ್ರಾರಂಭವಾಯಿತು. ೧೯೮೫ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆಯಿತು. ಜನಾಂಗ ದ್ವೇಷದ ಅವಧಿಯಲ್ಲಿ ವಿವಿಧ ದೇಶ, ಹಿನ್ನೆಲೆಯ ಕಲಾವಿದರನ್ನು ಒಂದೇ ವೇದಿಕೆಯಡಿಯಲ್ಲಿ ತರುವ ಪ್ರಯತ್ನ ಗಣನೀಯ ಪ್ರಭಾವವನ್ನು ಸಮಕಾಲೀನ, ಸಾಂಸ್ಕೃತಿಕ ರಾಜಕಾರಣದ

ಮೇಲೆ ಬೀರಿದ್ದುಂಟು. ಹೀಗಾಗಿಯೇ 'ಖೋಜ್' (ಅನ್ವೇಷಣೆ, ಹುಡುಕಾಟ) ಯೋಜನೆಯು ಮುಂದಿನ ಹಲವು ಕಲಾ ಕಾರ್ಯಾಗಾರಗಳಿಗೆ ಕಾರಣವಾಯಿತು. ಈ ಯೋಜನೆಯಡಿ ಆಗ ನಮೀಬಿಯಾ, ಮೊಝಾಂಬಿಕ್, ಝಾಂಬಿಯಾ, ಸೆನೆಗಲ್, ಜಮೈಕಾ, ಯು.ಕೆ., ಝಿಂಬಾಬ್ವೆಯ ಕಲಾವಿದರು ಆ ಕಾರ್ಯಾಗಾರಗಳಿಗೆ ಕಾರಣರಾದರು. 'ಖೋಜ್' ಆ ಹಾದಿಗೆ ಸೇರಿಕೊಂಡ ಭಾರತೀಯ ಹೆದ್ದಾರಿ.

ಲಿಂಗ ದೃಷ್ಟಿಯಿಂದ ಸಮಾನತೆಯನ್ನು ಸಾಧಿಸುವ, ಸಮ ಸಂಖ್ಯೆಯ ಕಲಾವಿದ, ಕಲಾವಿದೆಯರನ್ನು ಆಹ್ವಾನಿಸುವ ಈ ಕಾರ್ಯಾಗಾರ ದೇಶ ವಿದೇಶಗಳ ಕಲಾವಿದ, ಕಲಾವಿದೆಯರನ್ನೂ ಅದೇ ದೃಷ್ಟಿಯಿಂದ ಹೊಂದಿರುತ್ತದೆ. ಚಿತ್ರ, ಶಿಲ್ಪ ಕಲಾವಿದರೇ ಅಲ್ಲದೆ, ವಿಡಿಯೋ ಡಿಜಿಟಲ್ ಮತ್ತು ಮಿಶ್ರ ಮಾಧ್ಯಮದ ಕಲಾವಿದರನ್ನೂ ಈ ಕಾರ್ಯಾಗಾರಗಳು ಹೊಂದಿರುತ್ತವೆ. ಈ ಕಲಾವಿದರು ಸಹಬಾಳ್ವೆ, ಚರ್ಚೆಗಳಿಂದ ಪರಸ್ಪರ ಪಡೆದುಕೊಳ್ಳುವ, ಹಂಚುವ ಉದ್ದೇಶ ಹೊಂದಿರುತ್ತಾರೆ. ಕಲಿಯುವ ರೀತಿ ಹಾಗೂ ಕಲಿಕೆಯ ಮೂಲಕ ಕಲಾಸೃಷ್ಟಿಯ ಈಗಾಗಲೇ ಒಪ್ಪಿಕೊಂಡಿರುವ ವ್ಯವಸ್ಥೆಯ ಕ್ರಮಗಳನ್ನೂ ಮೆಟ್ಟಿ ನಿಲ್ಲುವ ಸಹಜ ಆಶಯವೂ ಗಮನಾರ್ಹ. ಈ ಕಾರಣದಿಂದ ಪ್ರತಿ ಸಂಜೆ ಸ್ಲೈಡ್ ಪ್ರದರ್ಶನಗಳು, ಚರ್ಚೆಗಳು ಇರುತ್ತವೆ. ವೆಂಕಟಪ್ಪ ಆರ್ಟ್ ಗ್ಯಾಲರಿಯ ಕಾರ್ಯಾಗಾರ ಹಾಗೂ ಡಿಸೆಂಬರ್ ೨೦, ೨೧ರ ದಿನಗಳಲ್ಲಿ ಸಾರ್ವಜನಿಕವಾಗಿ ತೆರೆದುಕೊಂಡಿದ್ದ ಪ್ರದರ್ಶನ ಅಭಿಮಾನಿಗಳನ್ನು ಸಹಜವಾಗಿಯೇ ತನ್ನತ್ತ ಬಹು ದೊಡ್ಡ ರೀತಿಯಲ್ಲಿ ಸೆಳೆದುಕೊಂಡಿತ್ತು.

ವೆಂಕಟಪ್ಪ ಗ್ಯಾಲರಿಯ ಹುಡುಕಾಟದ ಕಾರ್ಯಾಗಾರದಲ್ಲಿ ಈಗಾಗಲೇ ವಿದೇಶಗಳಿಗೂ ಪರಿಚಿತರಾಗಿರುವ ಕನ್ನಡದ ಕಲಾವಿದ, ಕಲಾವಿದೆಯರಿದ್ದರು. ಈ ಹಿಂದೆ ಉತ್ತರ ಭಾರತದಲ್ಲಿ ಮಾತ್ರ ಬೇರುಬಿಟ್ಟಿದ್ದ ಈ 'ಖೋಜ್' ಕಾರ್ಯಾಗಾರಗಳು ಅಚ್ಚರಿಯೆಂಬಂತೆ ಕಳೆದ ವರ್ಷ ಮೈಸೂರಿನಲ್ಲಿ ಉತ್ತಮವಾಗಿ ವ್ಯವಸ್ಥೆಯಾದ ಕಾರಣ ಈಗ ಬೆಂಗಳೂರಿನಲ್ಲಿಯೂ ಮುಂದುವರೆದದ್ದು ನಮ್ಮ ಯುವ ಕಲಾವಿದ/ಕಲಾವಿದೆಯರ ಅಭಿವ್ಯಕ್ತಿಯ ಅನನ್ಯತೆ, ಖ್ಯಾತಿಗಳಿಗೆ ಉದಾಹರಣೆಯಂತಿವೆ. ಇಂತಹ ದೊಡ್ಡ ರೀತಿಯ ಕಲಾ ಕಾರ್ಯಾಗಾರ 'ಶಿಲ್ಪಿಗಳ ಸಿಂಪೋಸಿಯಂ' ಈ ಹಿಂದೆ ಎರಡು ಸಲ ಗುಲ್ಬರ್ಗಾದಲ್ಲಿ ನಡೆದಿತ್ತೆನ್ನುವುದು ಸಾಮಾನ್ಯ ಸಂಗತಿಯಲ್ಲ. ಪ್ರಸ್ತುತ ಕಾರ್ಯಾಗಾರದಲ್ಲಿ ಕರ್ನಾಟಕದ ಶಿವಪ್ರಸಾದ್, ಶೀಲಾ ಗೌಡ, ರಾಘವೇಂದ್ರರಾವ್, ಸುರೇಶ್ ಜಯರಾಮ್, ಪ್ರಭಾವತಿ, ರಂಜನಿ ಶೆಟ್ಟಾರ್, ಸಿ.ಆರ್. ನಾಣಯ್ಯ ಇದ್ದರು. ಸ್ಕಾಟ್‌ಲ್ಯಾಂಡ್, ಮೆಕ್ಸಿಕೊ, ಜರ್ಮನಿ, ಶ್ರೀಲಂಕಾ, ಫ್ರಾನ್ಸ್, ಥಾಯ್‌ಲ್ಯಾಂಡ್, ಅರ್ಜೆಂಟೀನಿಯಾ, ಇಸ್ರೇಲ್, ಇಂಡೋನೇಷಿಯಾಗಳ ಕಲಾವಿದರ ಜತೆ ನಮ್ಮ ದೇಶದ ಬೈಜುಪಾರ್ಥನ್, ಇಂದರ್ ಟಿಕು, ಜಹಾಂಗೀರ್ ಜಾನಿ. ನಾನ್‌ಕುಷಿಯಾ ಶ್ಯಾಮ್ ಮೊದಲಾದವರು ಪಾಲ್ಗೊಂಡು ಅಭಿವ್ಯಕ್ತಿಸಿದ್ದರು.

ವೆಂಕಟಪ್ಪ ಆರ್ಟ್ ಗ್ಯಾಲರಿಯ ಪರಿಸರವೇ ಅಲ್ಲದೆ ಬೆಂಗಳೂರು ಸ್ಫೂರ್ತಿಯ ನಗರ ಸಂಸ್ಕೃತಿಯ ಕೊಲಾಜ್ ನಂತಹ, ವಿಡಿಯೋ ತಂತ್ರಜ್ಞಾನದ ಅತ್ಯುನ್ನತ ಹಂತದ

ಅಭಿವ್ಯಕ್ತಿಗಳೂ ಮೂಡಿ ಬಂದವು. '೧೯೪೭-೨೦೦೩...' ರಂತಹ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯಲ್ಲಿ ಮತೀಯ ಹಿಂಸೆ. ಸಾವುಗಳು ಮುಂದುವರೆಯುತ್ತಿರುವ ಕರಾಳ ಪ್ರವೃತ್ತಿಯ ರಾಜಕಾರಣವಿದೆ. ಬಹುತೇಕ ಕಲಾವಿದರು ವಿಡಿಯೋ ಹಾಗೂ ಡಿಜಿಟಲ್ ತಂತ್ರಜ್ಞಾನದ ಹೊಳಹುಗಳನ್ನು ಗಣನೀಯ ರೀತಿಯಲ್ಲಿ ತಂದುಕೊಂಡಿದ್ದರು. ಇಲ್ಲೆಲ್ಲಾ ಸಮಕಾಲೀನ ಬುದ್ಧಿವಂತಿಕೆಯ ಪಾರಮ್ಯ, ತಾಂತ್ರಿಕ ಹೆಚ್ಚುಗಾರಿಕೆ ಇದ್ದಿತು. 'ಸ್ವಯಂ'ನ ವೈಭವೀಕರಣ, 'ವರದಕ್ಷಿಣೆ ಬೇಡ', 'ಮದುವೆ ಬೇಕು' ಚಿಂತನೆಯ ಅಭಿವ್ಯಕ್ತಿಗಳೂ ಇದ್ದವು. ಪ್ರಕೃತಿ ಸಂರಕ್ಷಣೆಯ ಕಳಕಳಿ, ಪ್ಲಾಸ್ಟಿಕ್ ಸಂಸ್ಕೃತಿಯನ್ನು ಪ್ರಶ್ನಿಸುವ ದೃಷ್ಟಿಯ ಪ್ರತಿಷ್ಠಾಪನಾ ಕಲೆಯೂ ಇದ್ದಿತು. ಕನಸುಗಳು ಮತ್ತು ಭೂ ದೃಶ್ಯಗಳು 'ಬೇರೆಯವರು ಕಂಡುಕೊಂಡಂತೆ ನಮ್ಮನ್ನು ನಾವೇ ಕಂಡುಕೊಳ್ಳುವುದು' ಇತ್ಯಾದಿ ಗ್ರಹಿಕೆಗಳಲ್ಲಿ ಕ್ಯಾಲೆಂಡರ್ ಕಲೆ, ಬ್ಯಾನರ್ ಕಲೆಗಳನ್ನು ಬಹು ಮುಖ್ಯವಾಗಿ ಬಳಸಿಕೊಳ್ಳಲಾಗಿತ್ತು. ಕಣ್ಣು, ಮನಸ್ಸುಗಳು ಬಹುಮುಖ್ಯ ಅಂಶಗಳಾಗಿ ಇಲ್ಲಿ ಪಾಲ್ಗೊಳ್ಳಬೇಕಿತ್ತು. 'ವಿ ಆಲ್ ಆರ್ ಉಮನ್ಸ್ ಇಸ್ಯೂಸ್' ಇನ್‌ಸ್ಟಾಲೇಷನ್ ಅಭಿವ್ಯಕ್ತಿ, ಕಹಿ, ಕಾಡುವ ನೆನಪೊಂದನ್ನು ಬೀಗ ಹಾಕಿ, ಬೀಗದ ಕೈ ಬಹುದೂರ ಬಿಸುಟು ನೆಮ್ಮದಿ ಕಾಣುವ ಮಾನವೀಯ ಅನುಕಂಪದ ವಿಶಿಷ್ಟ ಹೊಳಹಿನ ಅಭಿವ್ಯಕ್ತಿ. ಭೂಮಿಯ ವಿಶ್ವಾತ್ಮಕ ಕಲ್ಪನೆಯ ವಿಶಿಷ್ಟ ದೃಷ್ಟಿಯ ಗ್ರಹಿಕೆಯ ಅಭಿವ್ಯಕ್ತಿ ಹೀಗೆ ಹತ್ತು ಹಲವು. ಇಲ್ಲೆಲ್ಲಾ ಕಲಾವಿದರು, ಕಲಾವಿದೆಯ ಜತೆ ಅಲ್ಲಿನ ಪರಿಸರವೇ ಅಲ್ಲದೆ ವೀಕ್ಷಕರೂ ಪಾಲ್ಗೊಳ್ಳುವ ಅನಿವಾರ್ಯ ಸಂದರ್ಭವನ್ನೂ ಬಹುತೇಕ ಕಲಾವಿದರು, ಕಲಾವಿದೆಯರು ಸೃಷ್ಟಿಸಿದ್ದರು.

ವಾಸ್ತುಶಿಲ್ಪೀಯ ಅಭಿವ್ಯಕ್ತಿ

ಬದುಕಿನ ರಂಗಭೂಮಿಯಂತಹ ವಾಸ್ತುಶಿಲ್ಪ, ಅದರಲ್ಲೂ ಸಮಕಾಲೀನ ವಾಸ್ತುಶಿಲ್ಪ, ದೆಹಲಿಯ ಪೂಜಾ ಈರಣ್ಣನವರ ಗ್ರಹಿಕೆಗಳಲ್ಲಿ ಕಾಣಿಸಿಕೊಂಡಿರುವ ರೀತಿ ಅನನ್ಯ. ಅವರ 'ಮೆಟಫೋರೀಕಲ್ ಮ್ಯಾಥೆಮೆಟಿಕ್ಸ್' ಶೀರ್ಷಿಕೆಯ ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಚಿತ್ರಕಲಾ ಪರಿಷತ್ತಿನಲ್ಲಿ (ನವೆಂಬರ್17ರಿಂದ 23, 2003) ಪ್ರದರ್ಶಿಸಲ್ಪಟ್ಟಿತು. ದೆಹಲಿಯ ದಿ ಗಿಲ್ಡ್ ಆರ್ಟ್ ಗ್ಯಾಲರಿ ಪ್ರಾಯೋಜಿಸಿದ್ದ ಪ್ರದರ್ಶನವಿದು, ವಾಸ್ತುಶಿಲ್ಪೀಯ ರೂಪಕವು ಇಲ್ಲಿ ಕಂಪ್ಯೂಟರ್ ನೆರವು ಪಡೆದು ಅಭಿವ್ಯಕ್ತಗೊಂಡಿದೆ. ಕ್ಯಾಮರಾ ಕಣ್ಣಿನ ನೆರವಿನಿಂದ ವಾಸ್ತುಶಿಲ್ಪ ವಿವರಗಳು ಡಿಜಿಟಲ್ ತಂತ್ರಜ್ಞಾನದಲ್ಲಿ ಕಲಾವಿದೆಗೆ ಅಗತ್ಯವಾದ ರೀತಿಯಲ್ಲಿ ಕಾಣಿಸಿಕೊಂಡಿವೆ. ವಿಶಿಷ್ಟ ವ್ಯಕ್ತಿತ್ವ ಹೊಂದಿದ ವಾಸ್ತುಶಿಲ್ಪ ಮೂಲದ ಸಂವೇದನೆಯನ್ನು ನೋಡುಗರಲ್ಲಿ ಉಂಟು ಮಾಡಬಲ್ಲ ಈ ಇನ್‌ಸ್ಟಾಲೇಷನ್ ಸೃಷ್ಟಿ ವಿಕೃತಿಯನ್ನೂ ಅರಗಿಸಿಕೊಂಡಿದೆ. ವಾಸ್ತುಶಿಲ್ಪ ವಿವರಗಳ ತುಣುಕುಗಳು ತಮ್ಮಲ್ಲಿ ಅಡಿಗಿಸಿಕೊಂಡಿರುವ ಅಥವಾ ಕಲಾವಿದೆ ಡಿಜಿಟಲ್ ತಂತ್ರಜ್ಞಾನದ ನೆರವಿನಿಂದ ಪಡೆದುಕೊಂಡಿರುವ ರೂಪ-ಬಣ್ಣಗಳ ವೈವಿಧ್ಯತೆಯನ್ನು ಹೊಂದಿಸಿಕೊಂಡಿವೆ. ಸಹಜವಾಗಿಯೇ ದೃಶ್ಯಕುತೂಹಲ ಉಂಟಾಗುತ್ತದೆ.

ಸಮಕಾಲೀನ ಕಲಾ ರಾಜಕಾರಣ ಮತ್ತು ಅಭಿವ್ಯಕ್ತಿ

1992 ರಲ್ಲಿ ಮುಂಬಯಿಯ ಸರ್. ಜೆ.ಜೆ. ಕಲಾ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಲೇ ಅಲ್ಲಿನ ಆಡಳಿತ ಕಾರ್ಯ ವೈಖರಿಯನ್ನು ಟೀಕಿಸಿದ್ದ ಕಾರಣಕ್ಕಾಗಿ ಅಲ್ಲಿಂದ ಹೊರ ಹಾಕಲ್ಪಟ್ಟವರು ಕೃಷ್ಣಮಾಚಾರಿ ಬೋಸ್ ಅಲ್ಲಿಯೇ ಮಾದರಿ ವಿದ್ಯಾರ್ಥಿ ಎನ್ನಿಸಿಕೊಂಡಿದ್ದ ಅವರು ಬೆಳಗಾಗುವುದರಲ್ಲೇ ಬಂಡುಕೋರ ಕಲಾವಿದರ ಸಾಲಿಗೆ ಸೇರಿಬಿಟ್ಟರು! ಅವರ ಇನ್‌ಸ್ಟಾಲೇಷಶನ್ ಅಭಿವ್ಯಕ್ತಿಯ ಪ್ರದರ್ಶನ 'ಡಿಕ್ಯೂರೇಟಿಂಗ್' ಬೆಂಗಳೂರಿನ ಸುಮುಖ ಆರ್ಟ್ ಗ್ಯಾಲರಿಯಲ್ಲಿ (ಆಗಸ್ಟ್2 ರಿಂದ 14, 2003) ನಡೆಯಿತು. ನ್ಯೂಯಾರ್ಕ್, ಲಂಡನ್‌ಗಳಲ್ಲಿ ಅಧ್ಯಯನ ನಡೆಸಿ ಬಂದಿರುವ ಬೋಸ್ ದಶಕದ ಹಿಂದೆಯೇ ಪತ್ರಿಕಾವಲಯದಲ್ಲಿ ಸಾಕಷ್ಟು ಸುದ್ದಿ ಮಾಡಿದವರು.

'ಡಿ- ಕ್ಯೂರೇಟಿಂಗ್' ಹೆಸರಿನಡಿ ಈ ಪ್ರದರ್ಶನವನ್ನು ರೂಪಿಸಿದ್ದಾರೆ. ಭಾರತೀಯ ಸಮಕಾಲೀನ ಕಲಾವಿದರ ಕಲಾಕೃತಿಗಳನ್ನು ಇತರರು ಈವರೆಗೆ ಕ್ಯೂರೇಟ್ ಮಾಡಿದ್ದಾರೆ. ಇವರು ಆ ಕಲಾವಿದರ ಭಾವಚಿತ್ರಗಳನ್ನು ಚಿತ್ರಿಸಿ ವಿಶಿಷ್ಟ ರೀತಿಯಲ್ಲಿ ಒಟ್ಟಾಗಿಸಿ ಇನ್‌ಸ್ಟಾಲೇಷನ್ ಕಲೆಯಂತೆ ಯೋಜಿಸಿ ಇತರರಿಗಿಂತ ವಿಭಿನ್ನವಾಗಿ, ತಾವು ಆಯ್ದ ಕಲಾವಿದರನ್ನೇ ಕ್ಯೂರೇಟ್ ಮಾಡಿದ್ದಾರೆ!

ಇಂದಿನ ಭಾರತೀಯ ದೃಶ್ಯಕಲೆ ಹಾಗೂ ದೃಶ್ಯ ಸಾಕ್ಷರತೆಗೆ ವಿಶಿಷ್ಟ ಕೊಡುಗೆ ನೀಡಿ ಪ್ರಖ್ಯಾತರಾಗಿರುವ ಹಲವಾರು ಕಲಾವಿದರೇ ಅಲ್ಲದೇ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಪೀಳಿಗೆಯ ಕಲಾವಿದರೂ ಬೋಸ್‌ರವರಿಂದ ಚಿತ್ರಿತಗೊಂಡು ಪ್ರದರ್ಶನದಲ್ಲಿ ಇನ್‌ಸ್ಟಾಲ್ ಆಗಿದ್ದಾರೆ. ಸಿನಿಮಾ ಬ್ಯಾನರ್ ಚಿತ್ರಿಸುವವರು ಮಾಡುವಂತೆ ಕೃಷ್ಣಮಾಚಾರಿ ಬೋಸ್ ಸಮಾಂತರಸರಳುಗಳ ಚೌಕಟ್ಟು (ಗ್ರಿಡ್) ಗಳನ್ನು ರೇಖಿಸಿ ತಾವೇ ತೆಗೆದ ಕಲಾವಿದರ ಭಾವ ಛಾಯಾಚಿತ್ರಗಳನ್ನು ನೈಜ ಶೈಲಿಯಲ್ಲಿರುವಂತೆ ಚಿತ್ರಿಸಿದ್ದಾರೆ. ಬ್ಲೇಡ್‌ನಿಂದ ಬಣ್ಣ ಕೆರೆದು ರೇಖೆಗಳನ್ನು ತಂದುಕೊಂಡಿದ್ದಾರೆ. 'ಡಿಜಿಟಲ್ ಪ್ರಿಂಟ್‌ಗಳಲ್ಲ'ದ ರೀತಿಯಲ್ಲಿ ಈ ಮಾಲೆಯ ಕೃತಿಗಳು ಮೂಡಿಬಂದಿವೆ. ಅವರ ಹೆಸರುಗಳನ್ನು ಪ್ರತ್ಯೇಕ ಚೌಕಟ್ಟಿನಲ್ಲಿ ಚಿನ್ನದ ಹಾಳೆಗಳನ್ನು ಲೇಪಿಸಿ ಗ್ರಾಫೈಟ್ ಶಿಲೆಯ ಅಕ್ಷರಗಳಿಂದ ಗಂಭೀರವಾಗಿ ಮೂಡಿಸಲಾಗಿದೆ. ಮ್ಯೂಸಿಯಂ ಒಂದರ ಸಂಗ್ರಹದಲ್ಲಿರುವ ಅನುಭವ ತರುತ್ತದೆ. ಈ ಸಾಲಿನಲ್ಲಿ ಖ್ಯಾತ ಗಾಯ್ ತೊಂಡೆ, ಜೆ.ಸ್ವಾಮಿನಾಥನ್, ಎಸ್.ಎಚ್.ರಝಾ, ಪ್ರಭಾಕರ ಕೋಲ್ಟೆಯವರ ಭಾವಚಿತ್ರಗಳಿವೆ. ಹೆಬ್ಬಾರ್ ಇಲ್ಲ. ಹಡಪದ್ ಬೋಸ್‌ರವರಿಗೆ ಗೊತ್ತಿಲ್ಲವೆ?

ಕಪ್ಪು ಬಿಳುಪು ಬಣ್ಣದ ಭಾವಚಿತ್ರಗಳಲ್ಲಿನ ವಿಶೇಷವೆಂದರೆ ಕೆಂಪು ಬಣ್ಣದ ಅಂಚಿನ ಹೊರಗೆ ಬೆಳ್ಳಿಯ ಬಣ್ಣದ ಮಿರಗುವ ಹೊಳಪಿನ ಜೊತೆಗೆ ಗ್ರಾಫೈಟ್ ಶಿಲೆಯ ಚೌಕಟ್ಟು, ಪುನಃ ಅದೇ ಶಿಲೆಯಲ್ಲಿ ಕಡೆದು ಅಳವಡಿಸಿರುವ ಕಲಾವಿದರ ಹೆಸರುಗಳು ಹಾಗೂ 2003ರ ಇಸವಿ, ಸಾಂಕೇತಿಕವಾಗಿ ಭಾವಚಿತ್ರಗಳಲ್ಲಿ ನಮ್ಮ ರಾಜ್ಯದ ಎಸ್.ಜಿ.ವಾಸುದೇವ್, ಯೂಸೂಫ್ ಅರಕ್ಕಲ್, ಎನ್.ಎಸ್.ಹರ್ಷ, ಶೀಲಾ ಗೌಡ, ನಟರಾಜ ಶರ್ಮಾ, ಬಿ.ವಿ. ಸುರೇಶ್ ಅವರುಗಳಿದ್ದಾರೆ. ಬೋಸ್‌ರವರು ಬೇಸರ ವ್ಯಕ್ತಪಡಿಸುವ ಇಂದಿನ

ಕ್ಯೂರೇಟರ್‌ಗಳ ರಾಜಕಾರಣ, ಪಕ್ಷಪಾತಗಳು ಅವರೇ ಯೋಜಿಸಿರುವ ಈ ಪ್ರದರ್ಶನದ ಭಾವಚಿತ್ರಗಳಲ್ಲೂ ಇವೆ. ನಮ್ಮವರೇ ಇನ್ನೂ ಹಲವರು ಈ ಪ್ರದರ್ಶನದಲ್ಲಿರಬಹುದಿತ್ತು.

ಹಾಗೆಯೇ ತಮಿಳುನಾಡಿಗೆ ಹೋಗದಿರುವ ಈ ಪ್ರದರ್ಶನ ಅಲ್ಲಿನ ಯಾವೊಬ್ಬ ಕಲಾವಿದನನ್ನೂ ಒಳಗೊಂಡಿಲ್ಲ. ಮೌಖಿಕ ಪ್ರತಿಭಟನೆ ಅಲ್ಲಿ ನಡೆಯಿತು.

ಗ್ಯಾಲರಿ, ಪ್ರಾಯೋಜಕ, ಕೊಳ್ಳುವವರು ಹಾಗೂ ವಿಮರ್ಶಕರ ನಡುವೆ ಕಳೆದುಹೋಗುವ ಕಲಾವಿದರ ಕೃತಕ ಗಾಬರಿಯೂ ಸ್ವಯಂ ಪ್ರತಿಷ್ಠೆಯೂ ಪ್ರಸ್ತುತ ಪ್ರದರ್ಶನದಲ್ಲಿ ಅನುಭವವಾಗುತ್ತದೆ. ಅಲ್ಲದೆ ದೃಶ್ಯ ಕಲೆಯ ಅಪೂರ್ಣ ವರ್ತಮಾನದ ದಾಖಲೆಯಾಗಿ ಇತಿಹಾಸ ರೂಪಿಸುವ ಮುನ್ನುಡಿಯಾಗಿ ಈ ಪ್ರದರ್ಶನ ಮುಖ್ಯವೆನಿಸುತ್ತದೆ.

ದಿಗ್ಗಜರ ನಡುವೆ ತಮ್ಮ ಭಾವ ಚಿತ್ರವನ್ನೂ ಇಟ್ಟುನೋಡಿಕೊಂಡಿರುವ ಕೃಷ್ಣಮಾಚಾರಿ ಬೋಸ್ 'ಇತಿಹಾಸದ ವಿಸ್ಮೃತಿ', ಕಲಾ ಪ್ರದರ್ಶನಗಳನ್ನು ಕ್ಯೂರೇಟ್ ಮಾಡುವವರ ರಾಜಕಾರಣಗಳ ಬಗ್ಗೆಯೂ ಮಾತನಾಡುತ್ತಾರೆ. ಕಲಾ ವಲಯದ ಎಲ್ಲಾ ಆಗುಹೋಗುಗಳನ್ನು 'ನೆರೆ ಮನೆಯವನಂತೆ ಗಮನಿಸುವ' ಬೋಸ್ 'ಸಮಕಾಲೀನ ಕಲೆಯ ಕಾವಲುಗಾರ' ಎಂದು ಹೇಳಿಕೊಳ್ಳುತ್ತಾರೆ. ತಮ್ಮದೇ ಆದ ರೀತಿಯಲ್ಲಿ ಇತರ ಕ್ಯೂರೇಟರ್‌ಗಳ ಪ್ರಾಮಾಣಿಕತೆಯನ್ನು ಪ್ರಶ್ನಿಸುತ್ತಲೇ ತಮಗೆ ಸಮಾಧಾನವಾಗುವಂತೆ ಚರಿತ್ರೆಯನ್ನು ಕಂಡುಕೊಳ್ಳುತ್ತಾರೆ.

ಏನೇ ಇರಲಿ, ಅವರ ದೃಷ್ಟಿಯ ಈ ದೊಡ್ಡ ಪ್ರಕಟಣೆ, ವಿಶಿಷ್ಟ ರೀತಿಯ ಪ್ರದರ್ಶನ ವ್ಯವಸ್ಥೆ ತನ್ನದೇ ಆದ ರೀತಿಯಿಂದಾಗಿ ಗಣನೀಯ. ಇದು ಅವರ ಕಲಾಪ್ರದರ್ಶನವಾದರೂ ಅವರ ಕ್ಯೂರೇಟಿಂಗ್ ಬುದ್ಧಿವಂತಿಕೆಯೂ ಎದ್ದು ಕಾಣುತ್ತದೆ. ಈ ಎಲ್ಲದರ ನಡುವೆ ನಡೆದಾಡುವ ವೀಕ್ಷಕರ ಅನುಭವ ವಿವಾದಾಸ್ಪದವಾಗಿತ್ತು.

ಮಹತ್ವಾಕಾಂಕ್ಷೆಯ ಅಭಿವ್ಯಕ್ತಿ

ನೈಜತೆಗೆ ಹತ್ತಿರವಾದ ಆದರೆ ಹಾಗಿಲ್ಲದ, ಒರಟುತನವನ್ನು ಮೇಲೆಳೆದುಕೊಂಡು ಅಸಾಮಾನ್ಯವಾಗಿ ನಮ್ಮೊಂದಿಗೆ ಮೌನಗೀತೆಗಳನ್ನು ಗುನುಗುವ ಶಿಲ್ಪ, ಇನ್‌ಸ್ಟಾಲೇಷನ್‌ಗಳು ಬೆಂಗಳೂರಿನ ಸುಮುಖ ಗ್ಯಾಲರಿಯಲ್ಲಿ (ಆಗಸ್ಟ್ 9 ರಿಂದ 21, 2004) ಪ್ರದರ್ಶಿಸಲ್ಪಟ್ಟವು. ರವಿ ಷಾರವರ 'Wood 'n' Blues' ಶೀರ್ಷಿಕೆಯ ಶಿಲ್ಪಗಳು ಇನ್‌ಸ್ಟಾಲೇಷನ್ ಕಲೆಯನ್ನು ಗ್ಯಾಲರಿಯ ಒಳಾಂಗಣಕ್ಕೆ ಗಣನೀಯ ರೀತಿಯಲ್ಲಿ ಹೊಂದಿಸಿದ್ದವು.

ಉತ್ಸಾಹದ ಚಿಲುಮೆಯಂತಹ ಈ ಯುವಶಿಲ್ಪ 1987ರ ಸಂದರ್ಭದಲ್ಲಿ ಪುಟ್ಟ ಬಾಲಕನಾಗಿ ತಾಯಿ ಕಲಾವಿಮರ್ಶಕಿ ಮಾರ್ಥರವರೊಂದಿಗೆ ರಾಜ್ಯ ಯುವಕ ಕೇಂದ್ರದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹಾಜರಾಗುತ್ತಿದ್ದುದು ನೆನಪಾಗುತ್ತಿದೆ. ಈ ನಡುವೆ ಬದುಕಿನ ಹಲವು ಮುಖಗಳನ್ನು ನೋಡಿ ಅನುಭವಿಸಿರುವ ರವಿಷಾ ಸುತ್ತಲಿನ ಜನರಿಗೆ ಸದಾ

ಹತ್ತಿರವಾಗಲು ಪ್ರಯತ್ನಿಸುತ್ತಿರುವವರು, ಹೀಗಾಗಿಯೇ ಹಲವರ ಹೊರ ರೂಪವೇ ಅಲ್ಲದೆ ಒಳನೋಟಗಳೂ ಚಿತ್ರ, ಶಿಲ್ಪಗಳಲ್ಲಿ ಈ ಹಿಂದಿನಿಂದ ಕಾಣಿಸಿಕೊಳ್ಳಲಾರಂಭಿಸಿವೆ. ತಾವು ಅನುಭವಿಸಿರಬಹುದಾದ ನೋವಿನ ಹಲವು ಪದರಗಳನ್ನು ಇತರರಲ್ಲೂ ಕಂಡಿದ್ದಾರೆ. ಜತೆಗೆ ಅವರೆಲ್ಲರ ಇನ್ನಿತರ ವಿಶಿಷ್ಟ ಮುಖಗಳನ್ನೂ, ಮೈವಳಿಕೆಗಳನ್ನೂ ನಮ್ಮ ಮುಂದಿರಿಸಿದ್ದಾರೆ.

ಉಳಿ ಹಾಗೂ ಚಮ್ಮಟಿಗೆಗಳಿಂದ ಮರದಲ್ಲಿ, ಕೆಲವೊಮ್ಮೆ ಕಲ್ಲಿನಲ್ಲಿ ಮೂಡಿಬಂದಿರುವ ಮಾನವರೂಪಗಳ ಶಿಲ್ಪಗಳು ರವಿಯ ಅವರ ಪರಿಚಿತ ವಲಯದ ವ್ಯಕ್ತಿತ್ವಗಳನ್ನು ಘನೀಭವಿಸಿರುವಂತೆ ಮೂಡಿಬಂದಿವೆ; ಗ್ಯಾಲರಿಯೊಳಗಿನ ವಿಶಾಲ ಅಂಕಣದ ಹಲವು ಸ್ಥಳಗಳನ್ನು ಇನ್‌ಸ್ಟಲೇಷನ್ ಕಲೆಯ ಗಂಭೀರ ಉದಾಹರಣೆಗಳಂತೆ ಆವರಿಸಿಕೊಂಡಿವೆ. ಗ್ಯಾಲರಿ ಗೋಡೆಗಳಲ್ಲಿರುವ ಮಾನವ ರೂಪಗಳ ಅಧ್ಯಯನದಂತಹ ಸ್ಕೆಚ್, ರೇಖಾಚಿತ್ರ, ಭಾವಚಿತ್ರ, ಬೆತ್ತಲೆ ಚಿತ್ರಗಳಿಗೂ ಶಿಲ್ಪಗಳಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಗ್ಯಾಲರಿಯೊಳಗಿನ ಇನ್‌ಸ್ಟಾಲೇಷನ್ ಕಲೆಯನ್ನು ನೋಡುತ್ತ ಅನುಭವಿಸಲಾರಂಭಿಸುತ್ತಿದ್ದ ಹಾಗೆಯೇ ಈ ಚಿತ್ರಗಳೂ ಇಡೀ ಪ್ರದರ್ಶನದೊಂದಿಗೆ ಹೊಂದಿಕೊಂಡು ಬಿಡುತ್ತವೆ.

ಈ ಇನ್‌ಸ್ಟಾಲೇಷನ್ ಕಲೆಯಲ್ಲಿ ಕಾಣಿಸಿಕೊಂಡಿರುವ ಮೂಲ ವ್ಯಕ್ತಿಗಳೆಲ್ಲಾ ಕೇವಲ ಮಾಡೆಲ್‌ಗಳಾಗಿ ಕುಳಿತವರಲ್ಲ. ಹೆಚ್ಚು ಪರಿಚಿತರಾಗಿರುವವರೇ ಆಗಿರುವುದರಿಂದ ಅವರ ಹಲವು ಒಳನೋಟಗಳನ್ನು ಶಿಲ್ಪಗಳಲ್ಲಿ ಹೊರಹೊಮ್ಮಿಸುವ ಸಾಮರ್ಥ್ಯವನ್ನೂ ಈ ಶಿಲ್ಪಿಯಲ್ಲಿ ಕಾಣುತ್ತೇವೆ.

ಶಿಲೆಗಿಂತಲೂ ಒಣಮರವನ್ನು ಹೆಚ್ಚಿನ ಪ್ರೀತಿಯಿಂದ ಬಳಸಿಕೊಂಡಿರುವ ಅನುಭವವಾಗುತ್ತದೆ. ಪದಾರ್ಥದ ಒರಟುತನವನ್ನು ಗಮನಾರ್ಹ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ. ಉಳಿಯಿಂದ ಮೇಲ್ಮೈಯನ್ನು ಕೆತ್ತಿಪಡೆದ ನಿಮ್ನ, ಉನ್ನತ ಮೈವಳಿಕೆ ನೆರಳು ಬೆಳಕಿನ ಆಟದಲ್ಲಿ ಶಿಲ್ಪದ ಭಾವ ತೀವ್ರತೆಯನ್ನು ಅಭಿವ್ಯಕ್ತಿಸಲಾಗಿರುವ ರೀತಿಯೂ ಶಿಲ್ಪಿಯ ಕುಶಲತೆಯನ್ನು ಮತ್ತೆ ಮತ್ತೆ ನೆನಪಿಸುವಂತಿದೆ. ಮರದ ಕೊರಡು ಕೆತ್ತನೆಯ ಪ್ರಕ್ರಿಯೆಯ ಸಂದರ್ಭದಲ್ಲಿ ಶಿಲ್ಪಿಯ ಭಾವತೀವ್ರತೆಗೆ ಸ್ಪಂದಿಸಿ ಬಾಯ್ದೆರೆದಂತೆ ಬಿಟ್ಟಿರುವ ಬಿರುಕುಗಳು ಶಿಲ್ಪದ ಭಾವನೆಗಳಿಗೆ ಪೂರಕವಾಗಿದೆ! ಶಿಲ್ಪಿಗೆ ಎಲ್ಲಿ ಅಗತ್ಯವೋ ಅಲ್ಲಿಯೇ ಬಿರುಕು ಕಾಣಿಸಿಕೊಂಡಿರುವಂತಹ ಕಾಕತಾಳೀಯ ಸಂದರ್ಭಗಳು ಸಾಕಷ್ಟಿವೆ. ಹಸಿಯಾಗಿದ್ದ ಮರತಿಂದ ಏಟುಗಳ ನಡುವೆಯೇ ಒಣಗಿದಂತೆಲ್ಲಾ ತೇವಾಂಶ ಕಳೆದುಕೊಂಡು ಬಾಯ್ದೆರೆದಿರಬೇಕು! ರೂಪಗಳ ಮೈ ಮತ್ತು ಮನಗಳ ಸುಳಿಯ ಆಳವನ್ನೂ ತೋರಿಬಿಡುತ್ತೇವೆ ಎಂಬುವಂತಿವೆ. 'Lalone', 'Methinks.....' ಶಿಲ್ಪಗಳು ಈ ರೀತಿಯ ಅಪರೂಪದ ಸೂಕ್ತ ಸ್ಥಳಗಳ (?!) ಬಿರುಕುಗಳಿಂದಾಗಿ ಪ್ರಭಾವಶಾಲಿಯಾಗಿವೆ. ಹಳೆಯ ಕಾಲದ ಸ್ಟುಡಿಯೋ ದೃಶ್ಯದಂತೆ ತೆರೆಯೂ ಇರುವ ಮೂಲೆಯೊಂದರಲ್ಲಿ ಚಡ್ಡಿಯೊಂದಿಗೆ ಕುಳಿತ ವ್ಯಕ್ತಿಯ ಭಾವ, ಭಂಗಿಗಳು ಬೆಳಕನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡಿರುವ

ದೃಶ್ಯನಿರ್ಮಿತಿಯಿಂದಾಗಿ ಆಕರ್ಷಿಸಲ್ಪಡುತ್ತವೆ. ಮೂಲೆಯೊಂದರಲ್ಲಿ ಇರುವ ಗಿಡದ ಮರೆಯಿಂದ ಈಗ ತಾನೇ ಹೊರಬಂದು ನಿಂತಿರುವ, 'Lalone', ಬೆಂಕಿಯಿಂದ ಎದ್ದುಬಂದು ಕಾಲು, ತಲೆಗಳು ಸುಟ್ಟು ಕಪ್ಪು ಕಪ್ಪಾದ 'Burning Babu' ಹಾಗೂ 'Look Shivu', 'Chikki of the mango tree'ಶಿಲ್ಪಗಳು ಈ ಅವಕಾಶ (space) ಮತ್ತು ಸಂದರ್ಭ ಸೃಷ್ಟಿಯ ಕಾರಣಕ್ಕಾಗಿ ನಮ್ಮೊಂದಿಗೆ ಹೆಚ್ಚು ಹೆಚ್ಚು ಸಂವಾದಕ್ಕೆ ತೊಡಗಿದಂತೆ ಭಾಸವಾಗುತ್ತದೆ. ಬೆತ್ತಲೆ ಹೆಣ್ಣುಗಳು ಮರದಿಂದಮೂಡಿ ನೆಲದ ಹಾಸಿನ ಮೇಲೆ, ಅಂಗಾತ 'Maggie woke up', 'Rudinuded' ಶೀರ್ಷಿಕೆಗಳಲ್ಲಿ ಒರಗಿವೆ. ಮಾಡೆಲ್‌ಗಳಿಲ್ಲದೆ ಬಹುತೇಕ ಎಲ್ಲ ಶಿಲ್ಪಿಗಳಲ್ಲೂ ಸಾಧ್ಯವಾಗುವಂತಹ ಕಲ್ಪನಾ ಸೃಷ್ಟಿಯ 'torment me', 'Me no-think' ಶಿಲ್ಪಗಳೂ ಮೂಡಿಬಂದಿವೆ. ದೃಶ್ಯಕಲಾ ಇತಿಹಾಸದ ಪುಟಗಳು ನೆನಪಾದರೂ ಇವು ಅವೆಲ್ಲವುಗಳಿಗಿಂತ ಭಿನ್ನತೆಯನ್ನು ಹೊಂದಿವೆಯೆಂದು ತೋರುವಂತೆ ಶೀರ್ಷಿಕೆಗಳು ಇವೆ. ಅಮೆರಿಕದ ಕಪ್ಪು ಜನರ ಸಂಗೀತದ ಒರಟುತನವನ್ನು, ಭಾರತೀಯ ಬದುಕಿನ ಭಾವತೀವ್ರತೆಯನ್ನು ಹೊಂದಿರುವ ಈ ಪ್ರದರ್ಶನದಲ್ಲಿ ದೈವಕ್ಕೆ ತನ್ನನ್ನು ಇಡಿಯಾಗಿ ಅರ್ಪಿಸಿಕೊಂಡಿರುವ, ಒಪ್ಪಿಸಿಕೊಂಡಿರುವ ಅನುಭವ ನೀಡುವಂತಹ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯೊಂದು ಕತ್ತಲೆಯ ನಡುವೆ ಎದ್ದು ಕಾಣುವಂತೆ ಮೂಡಿಸಲ್ಪಟ್ಟಿದೆ. ಪರಂಪರೆ ಹಾಗೂ ಸಮಕಾಲೀನತೆಗಳ ಸಹಪಯಣದಂತಹ ಪ್ರದರ್ಶನ ಅದು; ಶಿಲ್ಪಿಯ ಮಹತ್ವಾಕಾಂಕ್ಷೆಯ ದರ್ಶನವೂ ಇದ್ದಿತು.

ನಗರೀಕರಣದ ಕಪ್ಪು ಕಲೆ

ಸಮಕಾಲೀನ ನೆಲೆಯ ಅಭಿವ್ಯಕ್ತಿ ಅನ್ವೇಷಿಸಿಕೊಳ್ಳುವ ಮಾಧ್ಯಮಗಳು ಹಲವು. ಮಿಶ್ರ ಮಾಧ್ಯಮಗಳು ಇಂದಿನ ಸಂವೇದನೆಗೆ ಅತ್ಯಂತ ಸೂಕ್ತವಾಗಿ ಹೊಂದಿಕೊಳ್ಳುತ್ತವೆ. ಈ ಮಾತುಗಳಿಗೆ ಉದಾಹರಣೆಯೆಂಬಂತೆ ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 1998ರಲ್ಲಿ ವ್ಯವಸ್ಥೆಯಾಗಿದ್ದ ಚಿತ್ರೋವಾನು ಮಝುಮ್‌ದಾರ್ ರವರ, ಸುಮುಖ ಗ್ಯಾಲರಿ ಪ್ರಾಯೋಜಿಸಿದ್ದ ಚಿತ್ರ ಮತ್ತು Installationsಗಳ ಪ್ರದರ್ಶನ ಮೂಡಿಬಂದಿತ್ತು.

ಬಹುತೇಕ ರೋಮ್ಯಾಂಟಿಕ್ ಸಂವೇದನೆಗೆ ಹೊಂದಿಕೊಂಡಿರುವ ಬಂಗಾಳದ ನೆಲೆಯಿಂದ Absaract Expressionismಗೆ ಜಿಗಿಯುವ ಸಾಧನೆ ಅಸಾಮಾನ್ಯ. ಈ ನಿಟ್ಟಿನಲ್ಲಿ ಮಝುಮ್‌ದಾರ್ ತಮ್ಮ ಚಿತ್ರ, ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳೆರಡರಲ್ಲೂ ವಿಶಿಷ್ಟ ಹಾದಿ ತುಳಿದಿದ್ದಾರೆ. ಈ ವೈಶಿಷ್ಟ್ಯ ಪಶ್ಚಿಮದ ಕಲೆಯ ಪರಿಚಯ ಅನುಭವವಿರುವವರಿಗೆ ಹೊಸದಲ್ಲ. ಆದರೆ ನಮ್ಮ ಸಂದರ್ಭ, ಸಂವೇದನೆಗಳ ಹಿನ್ನಲೆಯಲ್ಲಿ ಈ ರೂಪ, ಕಲ್ಪನೆ, ಅಭಿವ್ಯಕ್ತಿಗಳು ಕಲಾವಿದರ ಅಸಮಾನ್ಯ ಗ್ರಹಿಕೆಗಳ ರೂಪಗಳಾಗಿವೆ.

ದೃಶ್ಯ ಭಾಷೆಯ ಹೊಸರೂಪಗಳಂಥ ಈ ಕೃತಿಗಳು ನಗರೀಕರಣದ ನಡುವಿನ ಸಂಕಟಗಳನ್ನು ಧ್ವನಿಸುತ್ತವೆ. ಇಂಥದೇ ಸಂಕೀರ್ಣ ನಿಲುವಿನ ಅಭಿವ್ಯಕ್ತಿಗಾಗಿ ವೀವಾನ್

ಸುಂದರಂ, ಎಂಜಿನ್ ಆಯಿಲ್‌ನ್ನು ಉಸಿರುಗಟ್ಟಿಸುವಂತೆ ದುಡಿಸಿಕೊಂಡದ್ದುಂಟು. ಮಝುಂದಾರ್ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳೇ ಅಲ್ಲದೆ ವರ್ಣ ಚಿತ್ರಗಳಲ್ಲೂ ಕಪ್ಪು ಬಣ್ಣಕ್ಕೆ ಪರ್ಯಾಯವಾಗಿ ಟಾರನ್ನು ಹರಿಸಿ, ಘನೀಭವಿಸಿ ದುಡಿಸಿಕೊಂಡಿದ್ದರು.

ಚಿತ್ರ ಹಾಗೂ ಇನ್‌ಸ್ಟಾಲೇಷನ್ ಕಲೆಗಳೆರಡರಲ್ಲೂ ಮಝುಂದಾರ್ ಟಾರನ್ನು ಹಾಗೂ ಛಾಯಾಚಿತ್ರಗಳು ಹಾಗೂ ಅವುಗಳ ಹರಿದ ತುಣುಕುಗಳು, ಅವುಗಳೊಳಗಿನ ರೊಮ್ಯಾಂಟಿಕ್ ರೂಪ, ಕಲ್ಪನೆಗಳು ಹಾಗೂ ಕೆಂಪು ತೈಲ ವರ್ಣ ಇತ್ಯಾದಿಗಳನ್ನು ಅವರ ದೃಷ್ಟಿ ಸೃಷ್ಟಿ ನಿರ್ವಹಣೆಗಳನ್ನು ನೆನಪಿಸುವಂತೆ ದುಡಿಸಿಕೊಂಡಿದ್ದಾರೆ. ಆದರೆ ಕೆಲವು ಕೃತಿಗಳ ಆಶಯ ಸ್ವಲ್ಪ ವಿಭಿನ್ನ. ಹಾಗೆ ನೋಡಿದರೆ ಇಡೀ ಪ್ರದರ್ಶನ ವಿಭಿನ್ನ ನೆಲೆ ಸ್ತರಗಳ ಅನುಭವ ಗ್ರಹಿಕೆಗಳಿಂದಾಗಿದೆ. ಕೊಲ್ಕತ್ತೆ ತನ್ನ ಒಡಲಿನಲ್ಲಿ ಅರಗಿಸಿಕೊಂಡಿರುವ ವಸಾಹತು ಶಾಹಿ ಸಂಸ್ಕೃತಿಯ (ಹಲವು ಕಲಾಕೃತಿಗಳ ನಡುವೆ ಕೊಲಾಜಾಗಿರುವ ಗ್ರೀಕ್ ರೋಮನ್ ಹಾಗೂ ವಿಕ್ಟೋರಿಯನ್ ಶಿಲ್ಪ, ಕಲಾಕೃತಿಗಳ ಚೌಕಟ್ಟು ಇತ್ಯಾದಿಗಳಿವೆ.) ಸೆಳಕುಗಳ ಜತೆಜತೆಗೇ ಪರಿಸರ ವಿನಾಶ, ಹೆಣ್ಣಿನ ಅಸಮಾನತೆ, ಅವಳ ವಿರುದ್ಧದ ದೌರ್ಜನ್ಯಗಳೂ ಧ್ವನಿಸುವ ಹೊಳಹುಗಳಿವೆ. ನಾಗರೀಕತೆಯ ವೈಭವದ ನಡುವೆ ಪರಿಸರವೇ ಸುಟ್ಟು ಕರಕಲಾದ ಅನುಭವ ನೀಡುವ, ನೆಲದ ಮೇಲೆ ಹಾಗೂ ಗೋಡೆಗೆ ಆತು, ಒರಗಿದ ಟಾರು ಲೇಪಿಸಿಕೊಂಡು ಘನೀಭವಿಸಿದ ಆಯತಾಕಾರದ ಘನರೂಪಗಳು ಇವೆ. ಕಪ್ಪು ಕಮಟು ವಾಸನೆಯ ವಿಕೃತ ಬದುಕು ಸಂದರ್ಭ, ಸಂಕ್ಷೋಭೆಗಳ ಅನುಭವದ ನಡುವೆ ಅತ್ಯಂತ ಹಿತವಾಗಿ, ನಿಂತ ನೀರಿಗೆ ಬೀಳುವ ಹನಿಯೊಂದರ ಧ್ವನಿಯ ನಿಲ್ಲದ ಕೇಳಿಸುವಿಕೆ ರೊಮ್ಯಾಂಟಿಕ್ ಅನುಭವವನ್ನೇ ನೀಡುತ್ತದೆನ್ನುವುದು ಪ್ರದರ್ಶನದ ಗಡಿಬಿಡಿಗೆ ಉದಾಹರಣೆಯಂತಿದೆ.

ಆದರೆ ಬೃಹತ್ ರೂಪಗಳ ಹಲವು ಇನ್‌ಸ್ಟಾಲೇಷನ್‌ಗಳು ಚಿತ್ರಕಲಾ ಪರಿಷತ್ತಿನ ನೆಲ ಹಾಗೂ ಗೋಡೆಗಳನ್ನು ಗಮನಿಸುವಂಥ ರೀತಿಯಲ್ಲಿ ಆವರಿಸಿಕೊಂಡಿವೆ. ಇದೊಂದು ಅಪರೂಪದ ಪ್ರದರ್ಶನ.

ಗುಜರಿಯ ನಡುವೆ ಮಹಾ ಬಜಾರು!

ಸುತ್ತಲಿನ ಎಲ್ಲವನ್ನೂ ಅವುಗಳ ನಡುವೆ ತನ್ನನ್ನೂ ಗುರುತಿಸಿಕೊಳ್ಳುತ್ತ ವೈಭವೀಕರಿಸುತ್ತ ಹೋಗವ ಇಂದಿನ ಯುವ ಪೀಳಿಗೆಯ ಕಲಾವಿದರ ಮುಂದೆ ಅವರಿಗೆ ಮಾದರಿಗಳಂತಿರುವ ಕೆಲವೇ ಕಲಾವಿದರಲ್ಲಿ ವೀವಾನ್ ಸುಂದರಂ ಒಬ್ಬರು. ಸ್ಥಳೀಯ ಸಂಸ್ಕೃತಿಯನ್ನು ಉಸಿರಾಡುತ್ತ ಪಶ್ಚಿಮವನ್ನು ಅರಗಿಸಿಕೊಂಡು ಅಭಿವ್ಯಕ್ತಿಸುವ ವೀವಾನ್ ಸುಂದರಂ, ಇಂದಿನ ಭೌಗೋಳೀಕರಣಗೊಂಡ ಕಲೆಗೆ ಉತ್ತಮ ಉದಾಹರಹರಣೆಯಾಗಿಯೂ ನಮ್ಮ ಮುಂದಿದ್ದಾರೆ. ಈ ಕಾರಣದಿಂದಲೇ ಇವರ ಕಲೆ ಅದು ಯಾವುದೇ ಮಾಧ್ಯಮದ್ದಾಗಲಿ ಯೂನಿವರ್ಸಲ್ ಆದ ಅಂಶವನ್ನು ಒಳಗೊಂಡಿರುವುದನ್ನು ನಾವು ಕಾಣಬಹುದು. ವೈಯಕ್ತಿಕ ಅನುಭವಗಳನ್ನು ಸಾರ್ವತ್ರೀಕರಿಸುವ, ಸುತ್ತಲಿನ ವಸ್ತುಗಳಿಂದಲೇ ಅಭಿವ್ಯಕ್ತಿಸುವ ವೀವಾನ್ ಸುಂದರಂ

ಕಮಾಡಿಟಿಯಾಗಿರುವ ಕಲೆಯನ್ನು ಮಾರುಕಟ್ಟೆಗಳ ಕಸದಂತ ಗುಜರಿಯ ವಸ್ತುಗಳನ್ನು ಮೇಲಿನಿಂದ ನಿಂತು ನೋಡಿದಂತೆ ಛಾಯಾಚಿತ್ರ ತೆಗೆದು ಲೋಹದ ಚೌಕಟ್ಟು ಹೊಂದಿಸಿ ಇನ್‌ಸ್ಟಾಲ್ ಮಾಡಿದ ಅಭಿವ್ಯಕ್ತಿಗಳು 1997ರಲ್ಲಿ ಸಾಕ್ಷಿ ಗ್ಯಾಲರಿಯಲ್ಲಿ ಪ್ರದರ್ಶಿತವಾದವು. 1997ರಲ್ಲಿ ಜೋಹನ್ಸ್ ಬರ್ಗ್‌ನ ಎರಡನೆಯ ಬೈನಾಲೆಯಲ್ಲಿ ಪ್ರದರ್ಶನಗೊಂಡ ಈ ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಮುಂಬಯಿ, ಆಮ್‌ಸ್ಟರ್‌ಡಮ್ ನವದೆಹಲಿಗಳ ನಂತರ ಬೆಂಗಳೂರಿಗೆ ಬಂದಿತ್ತು.

ಹಿಂದೆ ಛಾಯಾಚಿತ್ರಗಳನ್ನು ಆಕರವಾಗಿ ಹಾಗೂ ಪ್ರಸ್ತುತ ಅಭಿವ್ಯಕ್ತಿಯ ಮಾಧ್ಯಮವಾಗಿ ಹೀಗೆ ಎರಡೂ ಸಾಧ್ಯತೆಗಳಲ್ಲಿ ದುಡಿಸಿಕೊಂಡಿರುವ ವೀವಾನ್ ಭಾರತೀಯ ಮಾರುಕಟ್ಟೆಯ ಮಹಾನ್ ದೃಶ್ಯವೈಭವವನ್ನು ಅದನ್ನು ಮೂಲತಃ ಸೃಷ್ಟಿಸಿದ ವ್ಯಕ್ತಿಗಳನ್ನು ನಗಣ್ಯವಾಗಿಸಿ ತಮಗೆ ಅಗತ್ಯವಿರುವಂತೆ ಗುಜರಿಯ ನವದೆಹಲಿಯ ಕೆಂಪುಕೋಟೆಯ ಭಾನುವಾರದ ಮಾರುಕಟ್ಟೆ ಸಾಮಾನುಗಳನ್ನು ಕ್ಲಿಕ್ಕಿಸಿ ದಕ್ಕಿಸಿಕೊಂಡು ಪೋಸ್ಟ್ ಮಾಡರ್ನ್‌ತತ್ವಕ್ಕೆ ಹತ್ತಿರವಾಗಿ ತಮ್ಮದಾಗಿಸಿಕೊಂಡಿದ್ದಾರೆ. ಇದು ಯಾವುದೇ ದೇಶದ ಗುಜರಿಯ ನೋಟದ ತುಣುಕುಗಳ ಬಿಂಬಗಳಂತೆ ಮೇಲ್ನೋಟಕ್ಕೆ ಕಂಡರೂ ಆತ್ಮ ಹೊಕ್ಕಂಥ ಭಾರತೀಯ ಹೊಳಹುಗಳು ಎದ್ದು ಕಾಣುತ್ತವೆ.

ಪ್ರತಿ ಚಿತ್ರವನ್ನೂ ಹಲವಾರು ಪ್ರಿಂಟ್ ಮಾಡಿ ಕೆಂಪು ಬಣ್ಣದ ಲೋಹದ ಚೌಕಟ್ಟಿನ ವೃತ್ತಾಕಾರದಲ್ಲಿ ನೆಲದ ಅವಕಾಶದಲ್ಲಿ ರಾಶಿ ಹಾಕಿದ ಪ್ರತಿಷ್ಠಾಪನೆಯ ಬದಿ ನಿಂತು ಮೇಲಿನಿಂದ ಕೆಳಗೆ ನೋಡಿದರೆ cash and carryಸೂಚನಾ ಫಲಕ ನಾವು ಮತ್ತೊಂದು ಆದುನಿಕ ಮಾರುಕಟ್ಟೆ ಅಂಗಡಿಯೊಂದರಲ್ಲಿರುವ ಅನುಭವ ಮೂಡಿಸುತ್ತದೆ. ಚಪ್ಪಲಿ ಬೂಟ್ ಬ್ರಷ್, ಪೆನ್ನು, ಚೆಂಡು, ಕ್ರಿಕೆಟ್ ಚೆಂಡು, ಟ್ರಾನ್ಸಿಸ್ಟರ್, ಪುಸ್ತಕ, ಕ್ಯಾಸೆಟ್, ಗೊಂಬೆಗಳು ಹೀಗೆ ಎಲ್ಲವೂ ಇರುವ ದೇಶೀ ವಿದೇಶೀ ವಸ್ತುಗಳು ಈ ಛಾಯಾಚಿತ್ರಗಳಲ್ಲಿ ಕಾಣಿಸಿಕೊಂಡಿವೆ. ಕೆಲವು ಚಿತ್ರಗಳು ವಿಶಿಷ್ಟವಾಗಿ, ಕೆಲವು ಸಾಮಾನ್ಯವಾಗಿ ಸಂಯೋಜಿಸಿ ಕ್ಲಿಕ್ಕಿಸಲ್ಪಟ್ಟಿವೆ.

ಭಾರತೀಯ ಬಜಾರಿನ ಮಾಯಾಲೋಕದ ಬೃಹತ್ ಛಾಯಾಚಿತ್ರವೊಂದನ್ನು ಗೋಡೆಯ ಅವಕಾಶದಲ್ಲಿ ಪ್ರದರ್ಶಿಸಿದ್ದರು. ನಮ್ಮ ಆರ್ಥಿಕ ಪದ್ಧತಿಯ ದ್ವಂಧ್ವಮಯ ಮುಖವನ್ನು ಪರಿಚಯಿಸುವಂಥ ನಮ್ಮ ಗುಜರಿ ಸಂಸ್ಕೃತಿಗೆ ಕಾರಣವಾದ ಸೂಕ್ಷ್ಮ ಅಂಶಗಳನ್ನು ಸ್ಕ್ರೀನ್ ಪ್ರಿಂಟ್ ಮಾಡಿಸಿ ನೇತುಹಾಕಲಾಗಿತ್ತು, ಛಾಯಾಚಿತ್ರಗಳ ಸಂಪುಟಗಳನ್ನೂ ನೋಡುವಂತೆ ಇಡಲಾಗಿತ್ತು.

ಇವುಗಳ ನಡುವೆ ನಡೆದಾಡುವಾಗ ನಾವು ಗುಜರಿಯ ನಡವೆಯೇ ಇರುವ ಅನುಭವವಾಗುತ್ತದೆ. ಈ ಅನುಭವವನ್ನು ಗ್ಯಾಲರಿಯೊಳಕ್ಕೆ ತರುವಲ್ಲಿ ಅದನ್ನು ತಮ್ಮದೇ ಆದ ರೀತಿಯಲ್ಲಿ ಕಲೆಯಾಗಿಸುವಲ್ಲಿ ಸೌಂದರ್ಯಾತ್ಮಕ ಅಂಶವನ್ನೂ ಉಳಿಸಿಕೊಂಡು ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳಾಗಿಸಿರುವ ವೀವಾನ್ 13-12-1999ರಂದು ಮಿಥಿಕ್ ಸೊಸೈಟಿಯ ತಮ್ಮ ವರ್ಣ ಪಾರದರ್ಶಿಗಳ ಪ್ರದರ್ಶನ ಹಾಗೂ ವಿವರಣೆ ನೀಡಿದ

ಸಂದರ್ಭದಲ್ಲಿ ಪಶ್ಚಿಮದ ಮಿನಿಮಲಿಸ್ಟರ ನೆನಪು ಕಾಡಿದ ಪರಿಯನ್ನು ನೆನಪುಮಾಡಿಕೊಂಡರು.

ಕಾಂಚನ್ ಚಂದರ್ ಹಾಗೂ ಹೆಲನ್ ಗ್ರೈಯಿರ್‌ರವರ ಕರೋಲ್ ಬಾಗ್‌ನಿಂದ ಟಾಸ್‌ಕಾಟ್‌ವರೆಗೆ ಇನ್‌ಸ್ಟಾಲೇಷನ್ ಕಲೆ

ಕಲಾಕೃತಿಗಳಲ್ಲಿ ಮಾತೃತ್ವದ ಅಭಿವ್ಯಕ್ತಿ

ಕರೋಲ್ ಬಾಗ್‌ನಿಂದ ಟಾಸ್ ಕಾಟ್ ವರೆಗೆ

ವಿಭಿನ್ನ ದೇಶಗಳ ಇಬ್ಬರು ಕಲಾವಿದೆಯರು, ಸಾಂಸ್ಕೃತಿಕ ವೈರುಧ್ಯಗಳ ನಡುವೆಯೂ ಒಟ್ಟಾಗಿ ಸೇರಿ ಅಭಿವ್ಯಕ್ತಿಸಲು ಸಾಧ್ಯವೇ? ಹಾಗಾದಲ್ಲಿ ಆ ಅಭಿವ್ಯಕ್ತಿಯ ವಿಶಿಷ್ಟತೆ ಹೇಗಿರಬಹುದು? ಎಂಬ ಪ್ರಶ್ನೆಗಳಿಗೆ ಉತ್ತರ ಹೀಗೆ ಒಟ್ಟಾದ ಕಲಾವಿದೆಯರ ಗ್ರಹಿಕೆಗಳ ತೀವ್ರತೆಯ ಮೂಲವನ್ನು ಅವಲಂಬಿಸಿರುತ್ತದೆ. ಇಂದು ಕಲೆಯ ಪ್ರಾಯೋಜಕತ್ವಕ್ಕೆ ಹೆಚ್ಚಿನ ಸಾಧ್ಯತೆಗಳು ಇರುವುದರಿಂದ ಹಲವರು ಒಟ್ಟಾಗಿ ತಮ್ಮ ಕಲೆಯ ಅಭಿವ್ಯಕ್ತಿಯ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕೊಲಾಬರೇಷನ್ ಹೆಸರಿನಡಿ ಒಟ್ಟಾಗಿ ಇನ್‌ಸ್ಟಾಲೇಷನ್ ಕಲೆಯ ಪ್ರಕಾರವನ್ನು ದುಡಿಸಿಕೊಂಡು ಆಸ್ಟ್ರೇಲಿಯಾದ ಹೆಲನ್‌ಗ್ರೈಯಿರ್ ಹಾಗೂ ನವದೆಹಲಿಯ ಕರೋಲ್ ಬಾಗ್‌ನ ಕಾಂಚನ್ ಚಂದರ್ ಅಭಿವ್ಯಕ್ತಿಸಿದ ರೂಪಗಳು ಆಸ್ಟ್ರೇಲಿಯಾದಲ್ಲಿ ರೂಪುಗೊಂಡವು.

ಸಂಪರ್ಕದ ಆಧುನಿಕ ತಂತ್ರಜ್ಞಾನ ಹಾಗೂ ಇ - ಮೇಲ್‌ಗಳ ಫಲದ ಕಾರಣವಾಗಿ ಪ್ರಾರಂಭಗೊಂಡ ಈ ಅಭಿವ್ಯಕ್ತಿಯ ಬೀಜಗಳು ನಂತರ ಆಸ್ಟ್ರೇಲಿಯಾದ ಕ್ಯಾನ್‌ಬೆರ್ರಾದಲ್ಲಿನ ಬ್ರೈಡ್‌ಉಡ್ ರೆಸಿಡೆನ್ಸಿಯಲ್ಲಿ -----(ಮೇ 2001) ಮೂಡಿ ಬಂದಿತು. ಈ ಮುನ್ನ ನವದೆಹಲಿ ಚಂಡೀಘಡ, ಆಸ್ಟ್ರೇಲಿಯಾಗಳಲ್ಲಿ ಪ್ರದರ್ಶಿತಗೊಂಡ ನಂತರ (ಜೂನ್‌ನಿಂದ ಜುಲೈ 2002)ಬೆಂಗಳೂರಿನ ಗ್ಯಾಲರಿ ಸುಮುಖದಲ್ಲಿ ಪ್ರದರ್ಶಿತಗೊಂಡಿತ್ತು.

ಮೂಲ ಸಂಸ್ಕೃತಿಗಳು ಬೇರೆ ಬೇರೆಯಾದರೂ ಹಲವು ತಿಂಗಳುಗಳ ಕಾಲ ಒಟ್ಟಾಗಿದ್ದು, ಪರಸ್ಪರ ಮುಖಾಮುಖಿ, ಇತ್ಯಾದಿಗಳ ಮೂಲಕ ಒಂದು ರೀತಿಯಲ್ಲಿ ಹೊಂದಿಕೊಳ್ಳುವ ರಾಜಕಾರಣ ಇಂಥ ಅಭಿವ್ಯಕ್ತಿಗಳ ಹಿಂದೆ ಕೆಲಸ ಮಾಡುತ್ತದೆ. ಆದರೂ ದೇಶ ಸಂಸ್ಕೃತಿಗಳು ಯಾವುದಾದರೂ ಮಾನವನ ಮೂಲ ಪ್ರವೃತ್ತಿಗಳು ಒಂದೇ ಎಂಬುದು ಸಹ ಇಲ್ಲಿ ಇಂಥ ಅಭಿವ್ಯಕ್ತಿಗಳ ಹಿನ್ನಲೆಯಲ್ಲಿ ಪ್ರಭಾವ ಬೀರಿವೆ.

ಹೀಗಾಗಿಯೇ ಸುಮುಖ ಗ್ಯಾಲರಿಯ ಇಬ್ಬರು ಕಲಾವಿದೆಯರ ಅಭಿವ್ಯಕ್ತಿ ಹಾಗೂ ನಿರ್ವಹಣೆಗಳು ಹೆಣ್ಣಿನ ಸೌಂದರ್ಯ ಹಾಗೂ ಸೃಷ್ಟಿಶೀಲ ಸತ್ವಗಳನ್ನು ಅರಗಿಸಿಕೊಂಡು ಮೂಡಿಬಂದಿವೆ. ಭಾರತೀಯ, ಪಾಶ್ಚಿಮಾತ್ಯ ಸಂಗೀತಗಳೆರಡನ್ನೂ ಕೇಳುತ್ತಾ ಮೂಡಿಸಿದ ಈ ಕೃತಿಗಳಲ್ಲಿ ಏಕತೆಯಿದೆ. ಆದರೆ ಹೆಣ್ಣು ಸೃಷ್ಟಿಸಿದ ಕೃತಿಗಳಿವು ಎಂಬುದನ್ನು ಗಟ್ಟಿಯಾಗಿ ಹೇಳುವ ಉದ್ದೇಶದಂತೆ ಚಿತ್ರ ಮತ್ತು ರೂಪಾತ್ಮಕ ನಿರ್ವಹಣೆಗೆ ಆಸ್ಟ್ರೇಲಿಯಾದ ಕಲಾವಿದೆ

ತನ್ನ ತಾಯಿಯ ದಾರದ ಹೆಣಿಗೆಯ ತೆರೆಗಳು, ಮುದ್ರಿತ ಟಿಸ್ಯೂ ಕಾಗದಗಳನ್ನು ಬಳಸಿದ್ದಾರೆ. ದೆಹಲಿಯ ಕಾಂಚನ್ ಚಂದರ್ ಹಣೆಗೆ ಇಡುವ ಹಲವು ಬಣ್ಣಗಳ ಬಿಂದಿಗಳು, ಬಣ್ಣದ ಸೀರೆಗಳು, ಮರದ ಮುದ್ರಣ ಬ್ಲಾಕ್‌ಗಳು ಹೊಳೆವ ಅಲಂಕಾರದ ಹಲವು ವಸ್ತುಗಳನ್ನು ಸೇರಿಸಿದ್ದಾರೆ. ಆಸ್ಟ್ರೇಲಿಯಾದ ಭೂಪಟ ಹೆಲೆನ್ ಗೈಯಿರ್‌ರವರ ವಾಸ್ತುಶಿಲ್ಪದ ಗ್ರಿಡ್ ಹಾಗೂ ಕಾಂಚನ್ ಚಂದರ್‌ರ ಹೆಣ್ಣಿನ ಎದೆಮಟ್ಟದ ಟಾರ್ಸೋ ಮುಂಡದ ಭಾಗ ಇಲ್ಲಿ ಒಟ್ಟಾಗಿ ವಿಭಿನ್ನ ದೃಶ್ಯ ಲೋಕವನ್ನು ಸೃಷ್ಟಿಸಿವೆ. ಆದರೂ ಈ ದೃಶ್ಯಾತ್ಮಕ ಕಲ್ಪನಾಜುಗಲ್ ಬಂದಿ ನಮ್ಮನ್ನು ತೀವ್ರವಾಗಿ ಸ್ಪಂದಿಸುವುದಿಲ್ಲ. ಇಬ್ಬರೂ ಪ್ರತ್ಯೇಕವಾಗಿ ಸೃಷ್ಟಿಸಿರುವ ಕೃತಿಗಳಲ್ಲಿಯೇ ಮಿಂಚುತ್ತಾರೆ.

ದೃಶ್ಯ ಸಂಸ್ಕೃತಿಗೆ ಶಬ್ದ ಮಾಧ್ಯಮ

ಶಬ್ದದ ಹಲವು ಪದರಗಳ ಅನ್ವೇಷಣೆಯ ರೀತಿಯ ಪ್ರಯಾಣ ಇದು. ಶಾಬ್ದಿಕ ಮಾಧ್ಯಮದಿಂದ ದೃಶ್ಯವನ್ನು ಕಟ್ಟಿಕೊಡುವ ಮತ್ತು ಆಲಿಸುವವನ ಅನುಭವ ಗ್ರಹಿಕೆಯ ಸಾಮರ್ಥ್ಯವನ್ನೂ ಒರೆಗೆ ಹಚ್ಚುವ ಅಥವಾ ಅವನನ್ನು ತನ್ನಲ್ಲಿ ಸಮೀಕರಿಸಿಕೊಳ್ಳುವ ಒಂದು ವಿಶಿಷ್ಟ ಶಬ್ದವೈಭವದ ಇನ್‌ಸ್ಟಾಲೇಷನ್ ಸೃಷ್ಟಿಪ್ರಕ್ರಿಯೆ ಇದು.

ಧ್ವನಿಯನ್ನು ಅಭಿವ್ಯಕ್ತಿಗೆ ಗ್ರಹಿಸಿದ ಅಸಮಾನ್ಯ ಕಲಾ ಕೇಳುವಿಕೆ sound Installation ಬೆಂಗಳೂರಿನ Gallery Skeನಲ್ಲಿ (ಜನವರಿ 17ರಿಂದ ಫೆಬ್ರುವರಿ28, 2004) ವ್ಯವಸ್ಥೆಯಾಗಿತ್ತು. ಹಲವು ಪದರಗಳ ಶಬ್ದ ದೃಶ್ಯ ಕಲ್ಪನೆಯ ಈ ಪ್ರದರ್ಶನದಲ್ಲಿ ಧ್ವನಿಗಳನ್ನು ಕೇಳುವುದರ ಮೂಲಕ ರೆಕಾರ್ಡ್ ಮಾಡಿರುವ ಶಬ್ದ ಸಂಗೀತದ ಪ್ರದರ್ಶನಗಳ ಸಾಂಸ್ಕೃತಿಕ ಸಂದರ್ಭವನ್ನು ಕೇಳುಗರು ಅನುಭವಿಸಬಹುದಾಗಿತ್ತು. ನವೀನ್ ಥಾಮಸ್‌ರವರ ಈ ಅಪೂರ್ವ ಇನ್‌ಸ್ಟಾಲೇಷನ್ ಅಭಿವ್ಯಕ್ತಿ 'ಇನ್‌ಟ್ರಾನ್‌ಸಿಟ್ ರೈಲ್‌ಸ್ಕೇಪ್ಸ್' ಶೀರ್ಷಿಕೆಯ ಅಡಿ ತೆರೆದುಕೊಂಡಿದ್ದಿತು. ರೈಲು ಎಂದ ಕೂಡಲೆ ಮುಂಬಯಿ ಮಹಾನಗರದ ರೈಲಿನ ಅನುಭವ ಎಲ್ಲರಿಗೂ, ಹಾಗೆಯೇ ಕೊಲ್ಕತ್ತೆಯ ಶಾಂತಿನಿಕೇತನ್ ಎಕ್ಸ್‌ಪ್ರೆಸ್, ಚೆನ್ನೈನ ರೈಲು ನಿಲ್ದಾಣ ಅಲ್ಲದೆ ಬೆಂಗಳೂರಿನ ದಂಡು ಪ್ರದೇಶದ ಈಸ್ಟ್ ರೈಲು ನಿಲ್ದಾಣಗಳ ಹಲವೂ ಮುಖಗಳೂ ಪ್ರದರ್ಶನದಲ್ಲಿ ಕೇಳಿ ಕಾಲ್ಪನಿಕ ದೃಶ್ಯಲೋಕ ಸೃಷ್ಟಿಸಿ ಅನುಭವಿಸಬಹುದಾಗಿತ್ತು.

ರಾಜಧಾನಿ ದೆಹಲಿಯ ನಿಝಾಮುದ್ದೀನ್ ರೈಲು ನಿಲ್ದಾಣದ ಒಳ ನೋಟಗಳ ಶಬ್ದ ಚಿತ್ರಗಳೂ ಇದ್ದವು. ಬರಿ ಮಾತನ್ನೆ ಅಭಿವ್ಯಕ್ತಿಗೆ 1973ರಲ್ಲಿ ಬಳಸಿಕೊಳ್ಳಲಾಯಿತಾದರೂ ಅದು ಮಾತಿನ ಪತ್ರಿಕೆಯ ಉದ್ದೇಶ ಹೊಂದಿತ್ತು. 1988ರಲ್ಲಿ ಲಂಡನ್ನಿನ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯೊಂದಿಗೆ ಬೀದಿಬದಿ ಮಾರುಕಟ್ಟೆ ರೈಲ್ವೇ ಆರ್ಚ್ ಇತ್ಯಾದಿ ಸ್ಥಳಗಳಲ್ಲಿ ಧ್ವನಿಮುದ್ರಿಸಿಕೊಂಡ ಆಡಿಯೋವನ್ನು ಬಳಸಲಾಗಿತ್ತು. ಪ್ರಸ್ತುತ ಪ್ರದರ್ಶನದ ನವೀನ್ ಥಾಮಸ್ ಮೂಲತಃ ಹೀಗೆಯೇ ಗ್ಯಾಲರಿಯ ದೃಶ್ಯಗಳಿಗೆ

ಪೂರಕವಾಗಿ ಶಬ್ದ ಗ್ರಹಿಕೆಗಳನ್ನು 2003ರಲ್ಲಿ ನವದೆಹಲಿಯಲ್ಲಿ ಆಯೋಜಿಸಿದ್ದರು. ಆದರೆ ಈ ಪ್ರದರ್ಶನದಲ್ಲಿ ಶಬ್ದವನ್ನೇ ಪೂರ್ಣ ಪ್ರಮಾಣದಲ್ಲಿ ಅಭಿವ್ಯಕ್ತಿಗೆ ಬಳಸಿಕೊಂಡಿದ್ದಾರೆ. ಶಬ್ದದ ಹಲವು ಪದರಗಳ ದೃಶ್ಯಾಂತರ ಅನ್ವೇಷಣೆಯ ರೀತಿಯ ಪ್ರಯಾಣ ಇದು. ಶಾಬ್ದಿಕ ಮಾಧ್ಯಮದಿಂದ ದೃಶ್ಯವನ್ನು ಕಟ್ಟಿಕೊಡುವ ಮತ್ತು ಆಲಿಸುವವನ ಅನುಭವ ಗ್ರಹಿಕೆಯ ಸಾಮರ್ಥ್ಯವನ್ನೂ ಒರೆಗೆ ಹಚ್ಚುವ ಅಥವಾ ಅವನು ತನ್ನನ್ನೂ ಸಮೀಕರಿಸಿಕೊಳ್ಳುವ ಒಂದು ವಿಶಿಷ್ಟ ಸಷ್ಟಿಪ್ರಕ್ರಿಯೆ ಇದು.

ಪದಗಳ ಶಬ್ದಗಳು ಮತ್ತು ಸಂಗೀತವೇ ಅಲ್ಲದೆ ದೃಶ್ಯಕಲ್ಪನೆಯ ಅವಕಾಶದ ಸಹಜ ಶಬ್ದಗಳ ಪರಿಣಾಮವನ್ನು ತಂದುಕೊಂಡು ಈ ಎಲ್ಲ ರೈಲು ನಿಲ್ದಾಣಗಳ ಅನುಭವ ತಂದುಕೊಡುತ್ತಾರೆ. ಪದ ಮತ್ತು ಸಂಗೀತಗಳ ಶಬ್ದವನ್ನು ಸೌಂದರ್ಯಾತ್ಮಕವಾಗಿ ಬಳಸಲು ಪ್ರಯತ್ನಿಸಿದ್ದ ಉದ್ದೇಶ ಅನನ್ಯ. ಪ್ರದರ್ಶನಕ್ಕೆ ಭೇಟಿ ನೀಡಿದ ಬಹುತೇಕ ಕೇಳುಗರು ಪ್ರಾರಂಭದಲ್ಲಿ ಅರ್ಥ, ಸಂಗೀತಗಳಿಗೆ ಗಮನ ನೀಡಿದರೂ ಕೇಳುತ್ತಾ ಹೋದಂತೆ ಇನ್‌ಸ್ಟಾಲೇಷನ್ ಕಲೆಯ ಸಹಜ ಸಾಮರ್ಥ್ಯದಂತೆ ಇಡೀ ಪ್ರಯಾಣದಲ್ಲಿ ಒಂದಾಗಿ ಹೋಗುವ ದೃಶ್ಯಾಂತರ ಅನುಭವ ಹೊಂದಿದರು. ಆಯಾ ರೈಲು ನಿಲ್ದಾಣಗಳ ಪ್ರಯಾಣದಲ್ಲಿ ಅಲ್ಲಿನ ಭಾಷೆ, ರೈಲು ನಿಲ್ದಾಣಗಳಲ್ಲಿ ಕೇಳಿ ಬರುವ ಸಂಗೀತ, ಸಾಮಾನ್ಯರ ಸಾಂಸ್ಕೃತಿಕ ಪರಿಸರ ಅನುಭವಕ್ಕೆ ಬರುತ್ತವೆ. ಮುಂಬಯಿಯ ರೈಲಿನ ಸಂಗೀತಗಾರರ ದೃಷ್ಟಿಯು ಸಾಂಸ್ಕೃತಿಕ ರಾಜಕಾರಣದ ಒಳನೋಟಗಳನ್ನು ನೀಡುವಂತೆಯೇ ಸ್ಥಳೀಯ ಧಾರ್ಮಿಕ ನಂಬಿಕೆಗಳ ಮುಖವನ್ನೂ ಬಿಂಬಿಸುತ್ತದೆ. 'ಭಾರತೀಯ ಕಲೆಯನ್ನು ಭಾರತದಲ್ಲೇ ಮಾರುತ್ತಿದ್ದೇವೆ' ಎಂದೂ ಜಾಗತೀಕರಣದ ವಾಸನೆಯ ರುಚಿ ನೋಡಿದಂತೆ ಹಾಡುಗಾರ ಗೊಣಗುತ್ತಾನೆ. ಎಲ್ಲಮ್ಮ ತಾಯಿಯ ಭಜನೆಯೂ ಕೇಳಿಬರುತ್ತದೆ! ಬೆಂಗಳೂರು ಈಸ್ಟ್ ರೈಲು ನಿಲ್ದಾಣದ ಅನುಭವ ಇಂದಿನ ಬೆಂಗಳೂರಿನ ತಮಿಳು ಇಂಗ್ಲೀಷ್ ಸಂಸ್ಕೃತಿಗೆ ಕನ್ನಡಿ ಹಿಡಿದಂತಿದೆ. ಎಫ್.ಎಂ.ತಂಗ್ಲೀಷ್, ಕಂಗ್ಲೀಷ್‌ಗಳೂ ನೆನಪಾಗುತ್ತವೆ.

ಕಾಗದ / Paper trails

ಮಣ್ಣಿನ ವಾಸನೆಗೆ ಹತ್ತಿರವಾದ ಸಿಮೆಂಟ್ ಕಾಡಿನ ವಾಸಿಗಳು

ಪರಿಸರದ ವಿರುದ್ಧದ ಕೈಗಾರಿಕಾ ಅಪರಾಧಗಳು ಮಿತಿಮೀರಿ ಹೆಚ್ಚುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಪ್ರಕೃತಿಯ ಜೀವಧ್ವನಿಯನ್ನು ಉಳಿಸಿಕೊಳ್ಳುವ ಕಾತರವು ಹೆಚ್ಚುತ್ತಿರುವುದು ಆಶಾದಾಯಕ. ನಮ್ಮ ಸುತ್ತಲಿನ ನೆಲ-ನೀರು-ಗಾಳಿ ಆಕಾಶಗಳ ನಡುವೆ ಸುಂದರವಾಗಿ ಬದುಕುವ ಆಶಯ, ಬದುಕನ್ನು ಸುಂದರಗೊಳಿಸುವ ಆಕಾಂಕ್ಷೆ ಹಲವರದು. ಭೌಗೋಳಿಕರಣಗೊಂಡ ಇಂದಿನ ಹಲವು ಸಾಮಾಜಿಕ, ಪರಿಸರ ಚಳುವಳಿಗಳ ಹಿಂದಿನ ರಾಜಕಾರಣದ ಇಂಥ ಗ್ರಹಿಕೆಗಳು ಈ ಶತಮಾನದ ಅಂಚಿನಲ್ಲಿ ಕಾಡುತ್ತಿರುವುದು 'ಆಧುನಿಕತೆಗೆ ಬರೀ ಪದಗಳಿವೆ, ಪದಾರ್ಥಗಳಿಲ್ಲ'(ಡಿ. ಆರ್. ನಾಗರಾಜ್) ಎಂಬಂತಿದೆ. ಆದರೂ ಪದಗಳಿಗೆ ಅರ್ಥಗಳು-ಅರ್ಥಗಳಿಗೆ ಪದಗಳು ಅನಿವಾರ್ಯ. ಹಾಗೆಯೇ

ಅಭಿವ್ಯಕ್ತಿಗೆ ದುಡಿಸಿಕೊಳ್ಳಲ್ಪಡುವ ಮಾಧ್ಯಮ ಮತ್ತು ಕಲೆಯ ಸಹಸಂಬಂಧ, ಪಂಚಭೂತಗಳ ನಡುವೆ ಆಸ್ತಿತ್ವ ಕಂಡು ಕೊಂಡಿರುವ ಮಾನವನ ಎಲ್ಲ ಪ್ರಕ್ರಿಯೆಗಳು ಅದನ್ನು ಅತಿಕ್ರಮಿಸದೆ ಬದುಕಲು, ನಡೆಸಿರುವ ಚಾರಿತ್ರಿಕ ಹೋರಾಟ. ಇಂದು ಕಲಾವಿದರೂ ಮಣ್ಣಿಗೆ ಹತ್ತಿರವಾದ ಮಾಧ್ಯಮಗಳನ್ನು ಹುಡುಕಿಕೊಳ್ಳುತ್ತಿರುವುದು, ಹಾಗೆ ನೋಡಿದರೆ ವಸಾಹತುಶಾಹಿ ಆಘಾತದ ವಿಸ್ಮೃತಿಯಿಂದ ಹೊರಬಂದು ಅರಸುತ್ತಿರುವುದು ಗಮನಾರ್ಹ.

ಹಾಗೆ ನೋಡಿದರೆ ಪಶ್ಚಿಮದೊಂದಿಗೆ ಮುಖಾಮುಖಿಯಾಗುತ್ತ ಪಶ್ಚಿಮವನ್ನು ತನ್ನಲ್ಲಿ ಅರಗಿಸಿಕೊಳ್ಳಲು ಯತ್ನಿಸಿದ ಪೂರ್ವದ ಸಾಂಸ್ಕೃತಿಕ ಪರಂಪರೆ ಮೂಲತಃ ಮಣ್ಣಿಗೆ ಹತ್ತಿರವಾದ ಮಣ್ಣಿನ ಬಣ್ಣ ಮಾಧ್ಯಮಗಳನ್ನೇ ಅಭಿವ್ಯಕ್ತಿಗೆ ದುಡಿಸಿಕೊಳ್ಳುತಿತ್ತು. ಕಾಗದ ಕಲಾವಿದರ ಅಭಿವ್ಯಕ್ತಿಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿತ್ತು. ಇಂದು ಮಾರಾಟದ ಸರಕಾಗಿ ಕಲೆ ಪರಿವರ್ತಿತವಾಗಿರುವ, ಪಶ್ಚಿಮ ಹಾಗೂ ಯೂರೋಪಿನ ಮೂಲದ ಕಲೆಯ ಮಾಧ್ಯಮಗಳು ಅತ್ಯಂತ ವೈಭವೀಕೃತಗೊಂಡು ಬಳಸಲ್ಪಡುತ್ತಿರುವುದರ ನಡುವೆ ಅಪರೂಪಕ್ಕೆ ವಿಸ್ಮೃತಿಗೊಂಡ ಕಲಾವಿದರ 'ಕಾಗದ' ಪ್ರೀತಿ ಸಾಕಷ್ಟು ಶಕ್ತಿಯುತವಾಗಿದೆ. ಯೂಸೂಫ್ ಅರಕ್ಕಲ್ (Homage to media series)ಅಂಟೋನಿಯೋ-ಎ- ಎಕಾಸ್ಟಾ, ಸಿ.ಎಫ್.ಜಾನ್ ರಾಘುವೇಂದ್ರ ರಾವ್ ಸುರೇಖ ಕಾಗದದ ವಿವಿಧ ನೆಲೆಯ ಅವಕಾಶವನ್ನು ಸಮಕಾಲೀನ ಗ್ರಹಿಕೆಯ ಸಂವೇದನೆಗೆ ದುಡಿಸಿಕೊಂಡಿದ್ದರೆ, ತಮ್ಮ ವಿಶಿಷ್ಟ ಸ್ತ್ರೀ ಸಂವೇದನೆಗೆ ಅರ್ಚನಾ ಹಂಡೆ ಕಾಗದವನ್ನು ನಮ್ಮ ಸಂದರ್ಭದ ಇತರರಿಗಿಂತ ವಿಭಿನ್ನವಾಗಿ ಸಿದ್ಧಪಡಿಸಿ ದುಡಿಸಿಕೊಂಡಿದ್ದಾರೆ. Orientalismನ ಸಾವಿರಾರು ವರ್ಷಗಳ ನಮ್ಮ ಇತಿಹಾಸದ ಜಗ್ಗುವಿಕೆಯೂ ಸಾಕಷ್ಟು ಪ್ರಭಾವ ಬೀರಿದೆ.


ಸಿಮೆಂಟ್ ಕಾಡಿನಂತಾಗುತ್ತಿರುವ ಬೆಂಗಳೂರಿನ ಹೊರಗೆ ಇನ್ನೂ ಸೈಟುಗಳಾಗದ ನೆಲದ, ಆದರೆ ಈ ಹಿಂದೆ ಹೇಳಿರುವ ಪರಿಸರದ ವಿರುದ್ಧದ ಜಾಗತೀಕರಣದ ರಾಜಕಾರಣದ ಕೈಗಾರಿಕಾ ಹಾಗೂ ನಗರೀಕರಣದ crimeಗಳ ಫಲವಾಗಿ ವಿರೂಪಗೊಂಡ ಪ್ರಕೃತಿ-ಕಲುಷಿತಗೊಂಡ ಪರಿಸರದ ನಡುವೆ, ಹಣ್ಣು-ಕಾಯಿ ಬಿಡುವ ವೃಕ್ಷಗಳ, ಇನ್ನೂ ಕಲುಷಿತಗೊಳ್ಳದ ಮಣ್ಣಿನ 'ವಿಸ್ತಾರ್' ತೋಟದ, ಭಾರತೀಯ ಪರಂಪರೆ ಮತ್ತು ಸಮಕಾಲೀನತೆಗಳನ್ನು ಸಮೀಕರಿಸಿಕೊಂಡ ವಾಸ್ತುಶಿಲ್ಪಗಳ ನಡುವೆ ನಡೆದ Closely bound like word and meaning are paper and art ಆಶಯದ, ಕಾಗದವನ್ನು ತಮ್ಮ ಅಭಿವ್ಯಕ್ತಿಗಾಗಿ ಯೂಸೂಫ್ ಅರಕ್ಕಲ್, ಅಂಟೋನಿಯೋ-ಎ-ಕಾಸ್ಟಾ, ರಾಘುವೇಂದ್ರ ರಾವ್, ಅಝೀಝ್, ಅದಿಥಿಡೇ, ಜಿನ್ನಿ ಪಿಂಟೋ, ಆಯೆಶಾ ಅಬ್ರಹಾಂ ಹಾಗೂ ಸಿ. ಎಫ್. ಜಾನ್ ತಾವೇ ಸಿದ್ಧಪಡಿಸಿ ದುಡಿಸಿಕೊಂಡ ಕಾಗದ, ಕಾರ್ಯಾಗಾರ ಹಲವು ದೃಷ್ಟಿಗಳಿಂದ ವಿಶೇಷವೆನಿಸುತ್ತದೆ. ಆಕ್ರಲಿಕ್, ತೈಲಬಣ್ಣಗಳನ್ನು ಕ್ಯಾನವಾಸ್ ಅವಕಾಶದಲ್ಲಿ ತಮ್ಮದೇ ಆದ ರೀತಿಗಳಲ್ಲಿ ಬಳಸುವ ಈ ಕಲಾವಿದರು ಸಿಂಥೆಟಿಕ್ ಬಣ್ಣಗಳನ್ನೇ ಮುಟ್ಟದೆ ಜೈವಿಕ ಪರಿಕರಗಳಿಂದಾದ ವಸ್ತುಗಳಿಂದಲೇ ಅಭಿವ್ಯಕ್ತಿಸಿದ ರೀತಿ ಕುತೂಹಲವನ್ನು

ಮೂಡಿಸಿದ್ದು ಒಂದು; ಸುತ್ತಲಿನ ಮಣ್ಣಿನವಾಸನೆಯನ್ನು ಗ್ರಹಿಸಿ, ಮರಗಿಡ-ನೆಲದ ನಡುವೆ ನಡೆದಾಡುವ ಸಮಯದಲ್ಲಿ ಆಕರ್ಷಿಸಿದ ಹೂ, ಕೊಂಬೆ, ರೆಂಬೆ, ಒಣ ಎಲೆ, ಗರಿ, ಹುಲ್ಲು, ಬೀಜ, ನಾರು ಇತ್ಯಾದಿಗಳನ್ನು ಸಂಗ್ರಹಿಸಿ ದುಡಿಸಿಕೊಂಡದ್ದು ಮತ್ತೊಂದು.

ನಗರೀಕರಣದ ಕಸಗಳಲ್ಲಿ ಒಂದಾದ ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ಕಾಗದವನ್ನು ಸಂಗ್ರಹಿಸಿ, ಕಸವಾಗುವ ಹಲವಾರು ಜೈವಿಕ ವಸ್ತುಗಳನ್ನು ಆರಿಸಿ ಪರಿಸರವನ್ನು ಪವಿತ್ರಗೊಳಿಸುವಂತೆ ಅವುಗಳನ್ನು ಈ ಕಲಾವಿದರ ಅಭಿವ್ಯಕ್ತಿಗೆ ಪರಿಕರಗಳಾಗುವಂತೆ ಮಾಡಲಾದದ್ದು ಅಸಾಮಾನ್ಯ ಸಂಗತಿ. ಸಿದ್ಧಪಡಿಸಿದ ದುಬಾರಿ ಕ್ಯಾನ್ ವಾಸ್‌ಗಳ ಅವಕಾಶದಲ್ಲಿ ಚಿತ್ರಿಸುವ ಕಾರ್ಯಾಗಾರದ ಹಲವು ಕಲಾವಿದರು ಇಲ್ಲಿ ಬೆಲೆಯೇ ಇಲ್ಲದ ಕಸವಾಗುವ ವಸ್ತುಗಳನ್ನು ಕಾಗದವಾಗಿಸಿ, ಆ ವಸ್ತುಗಳ ವಿವಿಧ ಬಣ್ಣಗಳನ್ನೆ ಅರಗಿಸಿಕೊಂಡಂತೆ ಕಂಡರು. ಹೀಗಾಗಿ ಸಿದ್ಧಪಡಿಸಿಕೊಂಡ ಕಾಗದದ ಹಲವು ವೈವಿಧ್ಯಮಯ ಆಯಾಮಗಳಲ್ಲಿ ಉಬ್ಬುಶಿಲ್ಪ, ಇನ್‌ಸ್ಟಾಲೇಷನ್ ಕಲೆಗಳಂಥ ಮಿಶ್ರಮಾಧ್ಯಮದ

ಎನ್. ಪುಷ್ಪಮಾಲಾರವರು ಕ್ಯೂರೇಟ್ ಮಾಡಿದ್ದ 'ಸ್ಥಳಪುರಾಣಗಳು' ಇನ್‌ಸ್ಟಾಲೇಷನ್ ಪ್ರದರ್ಶನದಲ್ಲಿ ಜಿ.ಎಚ್. ಶ್ರೀನಿವಾಸ್ ಪ್ರಸಾದ್ ರವರ ಅಭಿವ್ಯಕ್ತಿಯ ಒಂದು ನೋಟ.
ಸ್ಥಳ: ಬೆಂಗಳೂರಿನ ಬಸವನಗುಡಿಯ ಸಮುದಾಯ ನಾಟಕ ತಂಡದ ಶಿಥಿಲ ಕಟ್ಟಡ. 1999.

ಚಿತ್ರ - 100



ಅಭಿವ್ಯಕ್ತಿಗಳಂಥ ಸೃಷ್ಟಿಗಳಿಗೆ ಕಾರಣರಾದರು. ಅಭಿವ್ಯಕ್ತಿಸುವ ಪ್ರಕ್ರಿಯೆಯಲ್ಲಿ ಸುತ್ತಲಿನ ಪರಿಸರ ಪ್ರಭಾವಿಸಿದಂತೆ ಕಲಾಸೃಷ್ಟಿ ಮೂಡಿ ಬಂದಿತು. ಕಾರ್ಯಾಗಾರದಲ್ಲಿ ಆಂಟೋನಿಯೋ ತಾವೇ ಸಿದ್ಧಪಡಿಸಿದ ಕಾಗದದ ಪಲ್ಪ್‌ನೊಂದಿಗೆ ತೆಂಗಿನ ಗರಿ, ಲಾಂಟಾನಾ ಕೊಂಬೆ, ಇತ್ಯಾದಿಗಳನ್ನು ತೆರೆದ ಅವಕಾಶದಲ್ಲಿ ಗಾಳಿಯ ನಡುವೆ ಸ್ವಚ್ಛಂದವಾಗಿ ತೂಗಾಡುವ ರೀತಿಯಲ್ಲಿ ಆಹ್ಲಾದ ಅನುಭವ ನೀಡುವಂತೆ ಪ್ರಕೃತಿಯ ವಸ್ತುಗಳೊಂದಿಗೆ ಚೆಲ್ಲಾಟವಾಡಿದರೆ, ಆಯೇಶಾರವರು ತಮ್ಮ, ಇನ್ನೇನು ಇಲ್ಲವಾಗುವ ಮನೆಯ ಭ್ರಮೆಯಲ್ಲಿ ಸಿಲುಕಿ ಶಾಶ್ವತ ಮನೆಯಾದ ಈ ಮಣ್ಣಿನ ನಡುವೆ ಕಾಗದದ ಪುಟ್ಟ ಪುಟ್ಟ ಬಾವುಟಗಳಂಥ ಅವಕಾಶಗಳಲ್ಲಿ ಮನೆಯ ಅಂದವಾದ ನಕ್ಷೆಯನ್ನು ರೇಖಿಸಿ ಹುಡುಕಾಡಿದ್ದಾರೆ!

ಬಿ.ಎಚ್. ಶ್ರೀನಿವಾಸ್ ಪ್ರಸಾದ್‌ರವರ 'ಸ್ಥಳ ಪುರಾಣಗಳು' ಅಭಿವ್ಯಕ್ತಿಯ. ಒಂದು ದೃಶ್ಯ
ಸ್ಥಳ : ಬೆಂಗಳೂರಿನ ಬಸವನಗುಡಿಯ ಸಮುದಾಯ ನಾಟಕ ತಂಡದ ಶಿಥಿಲ ಕಟ್ಟಡ. 1999.

ಚಿತ್ರ - 10



ಯೂಸುಫ್ ಅರಕ್ಕಲ್ ರೊಳಗಿನ ಶಿಲ್ಪಿ, ಚಿತ್ರಕಾರ ಕಾಗದದ ಒರಟು ಮೈವಳಿಕೆಯ ಚಪ್ಪಟೆ ಅವಕಾಶ ಹಾಗೂ ಪಲ್ಪ್‌ನ ಉಬ್ಬು ರೂಪಗಳ ಶಿಲ್ಪಗಳೊಂದಿಗಿನ ವಿಶಿಷ್ಟ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳು ಅವರ ಎಂದಿನ ನೆಲದ ಸೊಗಡಿನ ಸಂವೇದನೆಗೆ ಹತ್ತಿರವಾಗಿಯೇ ಮೂಡಿಬಂದಿದ್ದರೆ ಅದಿಥಿಡೇ, ಜನ್ನಿಪಿಂಟೋ ಅಭಿವ್ಯಕ್ತಿಗಳು ಸ್ತ್ರೀಸಂವೇದನೆಗೆ ಪೂರಕವಾಗಿವೆ. ಕಾಗದವನ್ನು ಅಪರೂಪಕ್ಕೆ ಇವರುಗಳು ಆಯೇಶಾರಂತೆ ಅತ್ಯಂತ ಆಪ್ತವಾಗಿಯೇ ಹತ್ತಿರವಾಗಿಸಿಕೊಡಿದ್ದಾರೆ, ಸಿಂಥೆಟಿಕ್ ಬಣ್ಣಗಳ ಅತಿಕ್ರಮಣದ ಆಘಾತ (?!) ಮೀರಿ ಪರಿಸರದ ಕೊಡುಗೆಯ ವಸ್ತುಗಳ ಬಣ್ಣಗಳ ಬಗ್ಗೆ ಪ್ರೀತಿ ತೋರಿರುವ ಸಿ.ಎಫ್. ಜಾನ್ ಬಾಳೆಯ ಮರದ ಒಣಪದರಗಳ ಕಂದು ಬಣ್ಣವನ್ನು ಕಾಗದದ ಅವಕಾಶದ ನಡುವೆ ಗರ್ಭೀಕರಿಸಿ ರೂಪ ಹಾಗೂ ಬಣ್ಣವಾಗಿಸಿಕೊಂಡಿದ್ದ ರೀತಿ ವಿಶಿಷ್ಟ. ಅಝೀಝ್‌ರ ಅಭಿವ್ಯಕ್ತಿಗಳೂ ಅವರ ಒಳಗಿನ ನೋಟಗಳನ್ನು ಹೊರಬಿಂಬಿಸುವಂತಿತ್ತು.

ನಮ್ಮ ನಡುವೆ ಇಂದು ಸಶಕ್ತವಾಗಿ ಎಚ್ಚರಗೊಂಡು ನಡೆಯುತ್ತಿರುವ ಪರಿಸರ ಸಂರಕ್ಷಣೆಯ ಪರಿವಾದ ಚಳುವಳಿಗಳ ಹಿನ್ನೆಲೆಯಲ್ಲಿ ಈ ಕಾರ್ಯಗಾರ ಸಾಕಷ್ಟು ಪ್ರಭಾವಶಾಲಿ ಪರಿಣಾಮವನ್ನು ಸಮಕಾಲೀನ ಕಲಾರಂಗದಲ್ಲಿ ಮೂಡಿಸುವಷ್ಟು ಆಪ್ತನೆಲೆಯಲ್ಲಿ ಕಲಾವಿದರ ಪರಸ್ಪರ ಆತ್ಮೀಯ ಸಂವಾದದ ಮುಖಾ ಮುಖಿಯಲ್ಲಿ ನಡೆದದ್ದು ಅಪೂರ್ವ, ಬಣ್ಣಗಳಿಲ್ಲ, ಬಣ್ಣಗಳನ್ನು ಮೀರಿದ ಆದರೇ ಎಲ್ಲ ಬಣ್ಣಗಳನ್ನೂ ತನ್ನೊಳಗೆ ಹೊಂದಿರುವ ಬಿಳಿಯ ಕಾಗದ ವಿಶಿಷ್ಟವಾದ ಜೈವಿಕ ಬಣ್ಣಗಳೊಂದಿಗೆ ಜೈವೀಕವಲ್ಲವಾದರೂ, ಹೆಚ್ಚು ಗೌರವಾನ್ವಿತ ರೀತಿಯುಲ್ಲಿ ವೈಭವೀಕರಿಸಿ ದುಡಿಸಿಕೊಳ್ಳಲ್ಪಟ್ಟಿದ್ದು ನೋಡುವ ಕಣ್ಣು ಮನಸ್ಸುಗಳಿಗೆ ಹತ್ತಿರವಾದದ್ದು ಸಹಜವೇ ಆಗಿದೆ. ಈ ವಿಶಿಷ್ಟ ಕಾರ್ಯಾಗಾರ 1999ರಲ್ಲಿ ಬೆಂಳೂರಿನ ಹೊರವಲಯದ ದೊಡ್ಡ ಗುಬ್ಬಿಯಲ್ಲಿ ನಡೆಯಿತು.

ಕಲಾಭಿವ್ಯಕ್ತಿಯಲ್ಲಿ ದೇಶೀಸೊಗಡು

ಭೂತ ಭವಿಷ್ಯಗಳ ನಡುವಿನ ಅಪೂರ್ಣ ವರ್ತಮಾನ ಕಾಲದ ಕಲೆಯ ಅಲೆ ಹಲವು ಆಯಾಮಗಳಲ್ಲಿ ಬಿತ್ತರಗೊಳ್ಳುತ್ತಿದೆ. ಭಾರತೀಯ ಆಧುನಿಕೋತ್ತರ ಹಾಗೂ ಇಂದಿನ

ವಸಾಹತೋತ್ತರ ಕಲೆಯ ಭಾಷೆಯ ಬೆಳವಣಿಗೆಗೆ ವೇಗವರ್ಧಕದಂತೆ ಸ್ಥಳೀಯ ನೆಲದ ಸೊಗಡು ಪ್ರಭಾವ ಬೀರುತ್ತಿದೆ. ಈ ದೇಶಿ ಸೊಗಡು ಶಕ್ತಿಯುತವಾಗಿ ನಮ್ಮ ಕಲಾವಿದರ ಅಭಿವ್ಯಕ್ತಿಗಳಲ್ಲಿ ಹರಿಯಲಾರಂಭಿಸಿದೆ. ಕಲೆ ಕಮಾಡಿಟಯಾಗಿರುವುದರ ನಡುವೆಯೆ ಕಲಾ ಅಭಿವೃದ್ದಿಯು ರೂಪಾಂತಗೊಂಡಿರುವುದು ಗಮನಾರ್ಹ. ಬೆಂಗಳೂರಿನಲ್ಲಿ (ಮೇ 8-15, 1999)' ಸ್ಥಳ ಪುರಾಣಗಳು-Two conversations and a Dialogue'ಶೀರ್ಷಿಕೆಯಡಿ ವ್ಯವಸ್ಥೆಯಾಗಿದ್ದ ಇನ್‌ಸ್ಟಾಲೇಷನ್ ಕಲೆಯ ಪ್ರದರ್ಶನ

ಅಲಸೂರಿನ ಕೆರೆ, ಬಸವನಗುಡಿಯ ಸಮುದಾಯ ನಾಟಕ ತಂಡದ ಕಚೇರಿ ಹಾಗೂ ಕನ್ನಡ ಭವನದ 'ಚಿತ್ರ' ಗ್ಯಾಲರಿಗಳಲ್ಲಿ ನಡೆಯಿತು.

ಎನ್. ಪುಷ್ಪಮಾಲಾರವರು ಕ್ಯೂರೇಟ್ ಮಾಡಿದ್ದ ಈ ವಿಶಿಷ್ಟ ಕಲಾ ಪ್ರದರ್ಶನದಲ್ಲಿ, ಆಯ್ಕೆ ಮಾಡಿಕೊಂಡಿದ್ದ ಸೈಟ್‌ಗಳ ಬಗೆಗೆ ಈಗಾಗಲೇ ಪ್ರಚಲಿತವಿರುವ ಕಥೆಗಳು, ಭೌಗೋಳಿಕ ದೃಶ್ಯಾನುಭವಗಳೊಂದಿಗೆ ಜನಸಾಮಾನ್ಯರು ಹಾಗೂ ಕಲಾಭಿಮಾನಿಗಳು ಪಾಲ್ಗೊಳ್ಳುವಂತಹ, ಸಂವಾದ ನಡೆಸುವಂಥ ವಾತಾವರಣ ಸೃಷ್ಟಿಯ ಉದ್ದೇಶಕ್ಕಾಗಿ ಇನ್‌ಸ್ಟಾಲೇಷನ್1999 ಕಲೆಯನ್ನು ದುಡಿಸಿಕೊಳ್ಳಲಾಗಿತ್ತು.

ಅಲಸೂರು ಕೆರೆಯಲ್ಲಿ ಶ್ಯಾಮಲಾ, ಸಮುದಾಯದ ಕಛೇರಿಯ ಶಿಥಿಲ ಕಟ್ಟಡದಲ್ಲಿ ಶ್ರೀನಿವಾಸ ಪ್ರಸಾದ್, ಚಿತ್ರ ಗ್ಯಾಲರಿಯಲ್ಲಿ ರಮೇಶ್ ಕಲ್ಕೂರ್ ಅಭಿವ್ಯಕ್ತಿಸಿದ್ದರು. ಶಿಲ್ಪ, ಚಿತ್ರ ಮತ್ತು ವಾಸ್ತು ಶಿಲ್ಪಗಳನ್ನು ಒಳಗೊಂಡಿರಬಹುದಾದ, ಮಿಶ್ರಮಾಧ್ಯಮವನ್ನು ದುಡಿಸಿಕೊಂಡ, ಆಯ್ಕೆ ಮಾಡಿಕೊಂಡ ಸೈಟಿನ ಹೊರ- ಒಳನೋಟಗಳೊಂದಿಗೆ, ಅಂದರೆ ಭೌಗೋಳಿಕ- ಐತಿಹಾಸಿಕ, ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳೊಂದಿಗೆ ಹೊಂದಿಕೊಂಡಂತೆ ಸೃಷ್ಟಿಸಿ, ಪ್ರದರ್ಶನವನ್ನು ಸಂಯೋಜಿಸಲಾಗಿತ್ತು. ಚಿತ್ರ, ಶಿಲ್ಪ, ಪ್ರಿಂಟ್‌ಗಳ ಸಾಧ್ಯತೆಗಳನ್ನು ಮೀರಿ ಇಂದು ಹೆಚ್ಚು ಪ್ರಚಲಿತವಿರುವ ಇನ್‌ಸ್ಟಾಲೇಷನ್ ಕಲೆ ನಮ್ಮಲ್ಲೂ ಶಕ್ತಿಯುತವಾಗಿ ಈಗಾಗಲೇ ಕಾಣಿಸಿಕೊಂಡಿರುವುದು ಗಮನಾರ್ಹ.

ಸ್ಥಳ ಪುರಾಣಗಳ ಈ ಇನ್‌ಸ್ಟಾಲೇಷನ್ ಕಲೆಯಲ್ಲಿ ಹೆಚ್ಚು ಪ್ರಭಾವ ಶಾಲಿಯಾಗಿ ರೂಪಿಸಿದವರು ರಮೇಶ್ ಕಲ್ಕೂರ್. ಕಬ್ಬನ್ ಪಾರ್ಕಿನ ಶಿಲ್ಪಗಳ, ಬ್ರಿಟಿಷ್ ರಾಜ್ ಸಂದರ್ಭವನ್ನು ವಸ್ತುವಾಗಿಸಿ ಇಂದಿನ ನೆಲೆಯಲ್ಲಿ ನೋಡಿದ್ದ ರೀತಿ ಅನನ್ಯ. ಅಲಸೂರಿನ ಕೆರೆಯ ಕುದುರೆ ಲಾಳದ ಅಕಾರದ ದ್ವೀಪದ ನಡುವೆ ಶಾಮಲಾರವರು ಒಳ- ಹೊರ ಅವಕಾಶಗಳನ್ನು ತುಂಬಲು ಮಾಡಿದ್ದ ಉದ್ದೇಶ ಪ್ರಮಾಣಿಕವಾದದ್ದಾದರೂ ಆಯ್ದ ಸೈಟಿನ ಅವಕಾಶಕ್ಕೆ ತಮ್ಮ ಕಲ್ಪನೆಯ ರೂಪವನ್ನು ಸರಿಯಾಗಿ ಹೊಂದಿಸದಿದ್ದದ್ದು, ಸೈಟಿನ ವಿಶಿಷ್ಟ ವಾತಾವರಣವನ್ನು ತಮ್ಮ ಇತಿ-ಮಿತಿಯ ಇನ್‌ಸ್ಟಾಲೇಷನ್ ಕಲೆಯಿಂದ ಮೀರಲಾರದ



ಅವರ ಪ್ರಯತ್ನದಲ್ಲಿ ಸ್ಥಳೀಯ ಮಾಧ್ಯಮ, ಜೇನಿನ ಮೇಣ ಇತ್ಯಾದಿ ಬಳಕೆಯಾಗಿದ್ದುದು ಮುಖ್ಯವೆನಿಸುತ್ತದೆ.

ಸಮುದಾಯ ಎರಡು ದಶಕಗಳ ಹಿಂದಿನಿಂದಲೂ, ಅತ್ಯಂತ ಚಟುವಟಿಕೆಯಿಂದಿರುವ ಸಾಮಾಜಿಕ-ಸಾಂಸ್ಕೃತಿಕ ಎಚ್ಚರದ ಪ್ರತೀಕದಂತಹ ರಂಗ ತಂಡ. ಅದರ ಬಸವನ ಗುಡಿಯ ಶಿಥಿಲ ಕಟ್ಟಡ ಹಲವು ದಶಕಗಳ, ರಂಗಭೂಮಿಯ ಐತಿಹಾಸಿಕ ದಾಖಲೆಯ ಪುಟಗಳನ್ನು ಹೊಂದಿದೆ. ದೃಶ್ಯಮಾಧ್ಯಮಕ್ಕೆ ತನ್ನದೇ ಆದ ರೀತಿಯ ಕೊಡುಗೆಯನ್ನು ಅದು ನೀಡಿರುವ ಹಿನ್ನೆಲೆಯ ಈ ಸ್ಥಳ ನಿರ್ದಿಷ್ಟ ಇನ್‌ಸ್ಟಾಲೇಷನ್ ಈಗಾಗಲೇ ಹೇಳಿರುವಂತೆ ಚಿತ್ರ, ಶಿಲ್ಪ, ವಾಸ್ತುಶಿಲ್ಪ, ಅಭಿನಯ, ಇತ್ಯಾದಿಗಳನ್ನು ಫರ್‌ಫಾರ್‌ಮೆನ್ಸ್‌ನ್ನೂ ಸಂಯೋಜಿಸಿ ಶ್ರೀನಿವಾಸ್ ಪ್ರಸಾದ್ ದುಡಿಸಿಕೊಂಡರು. ಸಮುದಾಯದ ನಾಟಕಗಳ ನೆನಪುಗಳು ಕಾಡುವಂತೆ, ವೇಷ-ಭೂಷಣ, ಉಡುಗೆ ತೊಡಿಗೆಗಳು, ಜೀವಂತ ಕುರಿಗಳು, ಹಲವು ಹಂತಗಳ ವಾಸ್ತು ರಚನೆ ಇತ್ಯಾದಿಗಳು, ಅಲ್ಲಿನ ಶಿಥಿಲ ಗೋಡೆ- ಸೂರುಗಳನ್ನು ಅವರಿಸಿದ್ದ ಹತ್ತುವ -ಇಳಿಯುವ ಮರದ ಮೆಟ್ಟಿಲುಗಳ ನಡುವೆ 'ಸ್ಥಳದ ಪುರಾಣದ' ಭೂತಕಾಲವನ್ನು ವರ್ತಮಾನಕ್ಕೆ ತಂದುಕೊಟ್ಟವು.

ನಗರ ಸಂಸ್ಕೃತಿಯ ರಾಜಕಾರಣ

'ನಗರೀಕರಣ' ತಂದೊಡ್ಡುತ್ತಿರುವ ಹಲವು ಸಮಸ್ಯೆಗಳಿಂದ ಅಘಾತಗೊಂಡಿರುವ ನಾವೆಲ್ಲ ಗ್ರಾಮ್ಯ ಪರಿಸರವನ್ನು ಕಲುಷಿತಗೊಳಿಸುತ್ತಿರುವ ವಿಶ್ವ ರಾಜಕಾರಣದ ಭೌಗೋಳೀಕರಣದ ಪ್ರಭಾವವನ್ನು ಅನುಭವಿಸುತ್ತಿದ್ದೇವಷ್ಟೆ. 'ನಗರ ಸಂಸ್ಕೃತಿ'ಯ ಅಯಾಮಗಳನ್ನು ಈ ರಾಜಕಾರಣ ಹಲವು ರೀತಿಗಳಲ್ಲಿ ಅಲುಗಾಡಿಸುತ್ತಿರುವ ಸಂದರ್ಭದ ನಡುವೆಯೇ ನಗರ ತೊರೆಯುತ್ತಿರುವ ಬೆರಳೆಣಿಕೆಯ ಜನರ ನಡುವೆ ನಗರ ಸಂಸ್ಕೃತಿಯತ್ತ ಸೆಳೆಯಲ್ಪಡುತ್ತಿರುವರ ಸಂಖ್ಯೆ ಬಲು ಹೆಚ್ಚು. ಇಲ್ಲೇ ಇದ್ದು, ಬಿದ್ದು, ಒದ್ದಾಡುತ್ತಿರುವವರ 'ಅನುಭವ ಅನಿವಾರ್ಯತೆ'ವಿಚಿತ್ರ; ವಿಶಿಷ್ಟ. ಹೊಸ ಸಂದರ್ಭ, ಹೊಸ ಸಂವೇದನಾ ನೆಲೆಗಳು

ಶ್ಯಾಮಲಾರವರು ಮಧ್ಯಪ್ರದೇಶದ ಪಚ್ಚಮಡಿ ಗಿರಿಧಾಮದಲ್ಲಿ ಅಭಿವ್ಯಕ್ತಿಸಿದ್ದ ರೀತಿ ನೋಡಿ.

Banquet on the Earth Table", Iron Table, Bricks, Yellow clay, fire, Mandara Leaves, Food, 12.5′ x 12.5′, 2004.



ಪಲ್ಲವಿಸುತ್ತಿರುವ 'ನಗರ ಸಂಸ್ಕೃತಿ'ಯಲ್ಲಿ ಕವಿ ನಿಸಾರ್ ಅಹಮದ್‌ರ 'ಖಾಲಿ ಸೈಟುಗಳು' ಕವನ ಅಪ್ರಸ್ತುತ ಆಗುವಂಥ ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ನಗರದ ಖಾಲಿ ಬಿದ್ದ ಎಲ್ಲ ಸೈಟುಗಳ ಅಕ್ರಮ-ಕ್ರಮ-ಸಕ್ರಮ ವಾಸ್ತುಶಿಲ್ಪಗಳಿಂದ ಭರ್ತಿಯಾಗುತ್ತಿರುವ ದಿನಗಳಿವು. ಈ'ನಗರ'ದ ನಾಗರಿಕರಿಗಾಗಿ ಮೇಲೇಳುವ ಕಟ್ಟಡಗಳ ನಿರ್ಮಾಣದ ಅವಧಿಯ ಅನುಭವಗಳೂ ವಿಶಿಷ್ಟ. ನಗರಾನುಭವದ ಸೆರಗಿನಲ್ಲಿ ಅಡಗಿರುವ ಮುಖಗಳು ಹಲವು. ಅಲ್ಲಿ ದುಡಿಯುವ ನೆಲೆಯಿಲ್ಲದ, ಮುಖವಿಲ್ಲದ ಜನರ, ಹಲವು ರೀತಿಗಳಲ್ಲಿ, ಹಲವು ಕಾರಣಗಳಿಗಾಗಿ ಬಳಸುವ 'ಪ್ಲಾಸ್ಟಿಕ್ ಸಂಸ್ಕೃತಿ'ಯ ಸ್ಫೂರ್ತಿ ಪಡೆದಿರುವ ಹಲವು ವಸ್ತುಗಳಲ್ಲಿ ನೀಲಿ ಟಾರ್ಪಾಲಿನ್ ಗಳು ಪ್ರಶಾಂತ್ ಸೋನಿಯವರನ್ನು ಆಕರ್ಷಿಸಿರುವುದೇ ಅಲ್ಲದೆ ಅವರ ನಗರಾನುಭವ ಗ್ರಹಿಕೆಗಳ ಪ್ರಮುಖ ಆಶಯದ ಧ್ವನಿಯ ಘನೀಭವಿಸಿದ 'ಪದಾರ್ಥ'ದಂತೆ ದುಡಿಸಿಕೊಳ್ಳಲ್ಪಟ್ಟಿವೆ. ಈ ನೀಲಿ ಟಾರ್ಪಾಲಿನ್ ಇಂದಿನ ನಗರ ಸಂಸ್ಕೃತಿಯನ್ನು ಅಭಿವ್ಯಕ್ತಿಸಲು ಗಮನಾರ್ಹ ರೀತಿಯ ಆಳಹರವುಗಳಿಂದ ಕಾಣಿಸಿಕೊಂಡಿರುವ ಪ್ರದರ್ಶನ ಸಾಕ್ಷಿ ಗ್ಯಾಲರಿಯಲ್ಲಿ (ನವೆಂಬರ್ 21-28,2001) 'ಅನ್‌ಸೀನ್/ಸೀನ್' ಶೀರ್ಷಿಕೆಯಡಿ ನಡೆಯಿತು. ಕಟ್ಟಡ ಕಟ್ಟುವಿಕೆಯಲ್ಲಿರುವ ಹಲವು ಮುಖಗಳ ಒಳ/ಹೊರ ನೋಟಗಳನ್ನು ನೋಡುವ ಪ್ರಯತ್ನದ ಈ ಇನ್‌ಸ್ಟಾಲೇಷನ್ ಪ್ರದರ್ಶನ, ನಿರ್ಮಾಣ ಹಂತದ ಕಟ್ಟಡಕ್ಕೆ 'ದೃಷ್ಟಿ'ಯಾಗಬಹುದಾದ ಭಾರತೀಯ ಕಾರಣದಿಂದ ಮುಚ್ಚುವ ಟಾರ್ಪಾಲಿನ್, ಅದೂ ನೀಲಿ ಬಣ್ಣದ ಟಾರ್ಪಾಲಿನ್ ಅನ್ನು ಹಲವು ರೀತಿಗಳಲ್ಲಿ ಪ್ರಶಾಂತ್ ಸೋನಿ ಗ್ರಹಿಸಿದ್ದಾರೆ. ಟಾರ್ಪಾಲಿನ್ ಪದಾರ್ಥ (ಮಟೀರಿಯಲ್) ಈ ಮೊದಲು ಕೆಲವರ ಚಿತ್ರ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳಲ್ಲಿ (ನವದೆಹಲಿಯಲ್ಲಿರುವ ಗುಲ್ಬರ್ಗದ ಈರಣ್ಣ, ಬೆಂಗಳೂರಿನ ರಾಘವೇಂದ್ರರಾವ್ ಈ ದೃಷ್ಟಿಯಿಂದ ಇಬ್ಬರು)ಕಾಣಿಸಿಕೊಂಡಿದೆಯಾದರೂ, ಪ್ರಶಾಂತ್ ತಮ್ಮ ಗ್ರಹಿಕೆಯ ಆಳದ ಹಲವು ಪದರಗಳನ್ನು ಬಿಚ್ಚಿಡಲು ವೈವಿಧ್ಯಮಯವಾದ ರೂಪ ದೃಶ್ಯಾಂಶಗಳನ್ನು ನಿರ್ಮಿಸಿಕೊಂಡಿದ್ದಾರೆ. ಸಿಮೆಂಟ್ ಕೆಲಸಗಾರರ ಕೈಗವಸು, ಷೂಗಳ ಜತೆ ತಲೆಯ ರಕ್ಷಣೆಗೆ ಬಳಸುವ ಫೈಬರ್ ಶಿರಸ್ತ್ರಾಣಗಳು, ನೇತಾಡುವ ಹಲವು ಚೌಕಟ್ಟುಗಳ ನಡುವೆ ಸಂಯೋಜಿಸಲ್ಪಟ್ಟಿದ್ದ ರೀತಿ ಗಮನ ಸೆಳೆಯುವಂತಿತ್ತು. ಮುಳ್ಳುತಂತಿಯನ್ನೂ ತಂದುಕೊಂಡಿದ್ದ 'ಪಿಲ್ಲೋ ಅಂಡರ್ ಕನ್ ಸ್ಟ್ರಕ್ಷನ್' ಆಕರ್ಷಕ. ಅಧಿಕಾರ ಮತ್ತು ದುರಾಸೆಗಳ'ಬಣ್ಣದ ಸಂಸ್ಕೃತಿ'ಯ ಅನುಭವದ ಕೆಲವು ಒಳನೋಟಗಳೂ, ಕಾರ್ಮಿಕ, ಶೋಷಿತರ ಒಡಲಾಳದ ಬೆಂಕಿಯ ಬೇಗೆಯ ಮುಖಗಳೂ ವಾಚ್ಯವೆನ್ನುವ ರೀತಿಯಲ್ಲಿ ಮೂಡಿ ಬಂದಿದ್ದವು. ನೋಡಲು ಸುಂದರವಾಗಿಲ್ಲದ, ಆದರೆ ಅನುಭವ ಮೂಲದ ಅನನ್ಯ ಅಭಿವ್ಯಕ್ತಿಯಾಗಿ ಈ ಪ್ರದರ್ಶನ ಬಹುಕಾಲ ಕಾಡುವಂತೆ ಯೋಜಿತವಾಗಿತ್ತು.

ಹೊದಿಯುವ ಕವುದಿ ಮತ್ತು ಅನುಭವದ ಪದರುಗಳು

ಕಲಾವಿದರು ಒಂದೆಡೆ ಸೇರುವುದೇ ಅಪರೂಪ. ಇಂದಿನ ದಿನಗಳಲ್ಲಿಯಂತೂ ಸಾಧ್ಯವೇ ಇಲ್ಲದಂತಹ ಸಂದರ್ಭಗಳು ನಮ್ಮಮುಂದಿವೆ. ಆದರೆ 'ವಿಸ್ತಾರ್' ಹಾಗೂ 'ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್' ನಂತಹ ಸಂಸ್ಥೆಗಳ ನೆರವಿನ ನೆಪದಿಂದಾಗಿ

ದೃಶ್ಯಕಲೆಯ ಚಿತ್ರ, ಛಾಯಾಚಿತ್ರ, ಇನ್‌ಸ್ಟಾಲೇಷನ್ ಕಲೆಗಳೇ ಅಲ್ಲದೆ ಸಮಕಾಲೀನ ನೃತ್ಯ-ದೇಹ ಭಾಷೆಗಳೂ ಬೆಂಗಳೂರಿನ ಸುಮುಖ ಗ್ಯಾಲರಿಯಲ್ಲಿ (ಮೇ9ಮತ್ತು 10,2003) 'ಖ್ಬಿಲ್ಬೆಡ್' ಶೀರ್ಷಿಕೆಯಡಿ ಹಲವು ಕಲಾವಿದರಿಂದ ಪ್ರದರ್ಶಿಸಲ್ಪಡುವುದು ಸಾಧ್ಯವಾಯಿತು. ಸಿ.ಎಫ್. ಜಾನ್, ತ್ರಿಪುರಾ ಕಶ್ಯಪ್ ಹಾಗೂ ಟಿ.ಎಮ್. ಅಝೀಸ್ ಮುಖ್ಯವಾಗಿ ಪಾಲ್ಗೊಂಡಿದ್ದರು. ಜತೆಗೆ ವಿಸ್ತಾರ ಆಶ್ರಯದಲ್ಲಿ ಕಳೆದ 10 ವರ್ಷಗಳಲ್ಲಿ ಬೆಂಗಳೂರಿನಲ್ಲಿ ನಡೆದ ಕಲಾ ಪ್ರದರ್ಶನಗಳಲ್ಲಿ ಹಲವು ಅಪೂರ್ವ ರೀತಿಗಳಲ್ಲಿ ಅಭಿವ್ಯಕ್ತಿಸಿದ್ದ ರಾಘವೇಂದ್ರರಾವ್, ಸುರೇಖಾ ರವರುಗಳ ಅಭಿವ್ಯಕ್ತಿ ಹೊಸ ಸಂದರ್ಭದಲ್ಲಿ ಕಾಣಿಸಿಕೊಂಡಿದ್ದವು. ವಿಡಿಯೋ ಪ್ರದರ್ಶನ ಈ ಹಿಂದಿನ ಹಲವು ಪ್ರದರ್ಶನಗಳನ್ನು ದೃಶ್ಯಾತ್ಮಕವಾಗಿ, ನಿರಂತರವಾಗಿ ತೋರುತ್ತಿತ್ತು. ಉರ್ದು ಸುದ್ದಿ ಬಿತ್ತರವಾಗುವ ಸಂಬಂಧಿತ ಕೋಮು ಗಲಭೆಯ ಅನುಭವಗಳ ಗ್ರಹಿಕೆಯಂತಹ 'ನೋವು ಮತ್ತು ಹಿಂಸೆಗಳ ಮೌನ-ಧಗಧಗಿಸುತ್ತಿರುವ ನಗರದ ಪುಟಗಳಿಂದ' ಎಂಬ ಶೀರ್ಷಿಕೆಯಲ್ಲಿ ಈ ಹಿಂದೆ ವೆಂಕಟಪ್ಪ ಗ್ಯಾಲರಿಯಲ್ಲಿ ನಡೆದ ಪ್ರದರ್ಶನದಲ್ಲಿದ್ದ ರಾಘವೇಂದ್ರರಾವ್‌ರವರ ಸುಟ್ಟು ಕರಕಲಾದ, ಚಂದಿಯ ಕಪ್ಪು ಬಟ್ಟೆಗಳನ್ನು ಇಳಿಬಿಡಲಾಗಿದ್ದು ಸುಟ್ಟ ಸ್ಥಳಗಳಲ್ಲಿ ಆ ಸಂದರ್ಭದ ರೇಖಾ ಅಭಿವ್ಯಕ್ತಿಗಳಿದ್ದವು. ಹಾಗೆಯೇ 'ಗಡಿ-ಒಂದು ಕಲಾ ಸಂದರ್ಭ' ಎಂಬ ಹೆಸರಿನಲ್ಲಿ ಕನಕಪುರ ರಸ್ತೆಯ ಶಂಕರ ಕಲಾ ಕೇಂದ್ರದಲ್ಲಿ ಹಿಂದೆ ಪ್ರದರ್ಶಿತವಾಗಿದ್ದ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳಿಂದ ಸುರೇಖಾರವರ ಕೃತಿಗಳನ್ನು ಆಯ್ದು ಹೊಸ ರೀತಿಯಲ್ಲಿ ಪುನರ್ ಸೃಷ್ಟಿಸಲಾಗಿತ್ತು. ಜತೆಗೆ ಸುತ್ತಲಿನ ಬದುಕಿನ ಹಲವು ಪುಟಗಳಂತಹ ಗ್ರಹಿಕೆಗಳನ್ನು ಕೇರಳದ ಸಮುದ್ರದ ಅಂಚಿನ ಮರಳನ್ನು, ಅಲ್ಲಿನ ಮಕ್ಕಳನ್ನು ದುಡಿಸಿಕೊಂಡು ಸಿ.ಎಫ್. ಜಾನ್ ಹಾಗೂ ಅಝೀಸ್ ಕೆಲವು ವರ್ಷಗಳ ಹಿಂದೆ ಅಭಿವ್ಯಕ್ತಿಸಿದ್ದ ಛಾಯಾಚಿತ್ರಗಳನ್ನು ಹಾಗೂ ಸಮಕಾಲೀನ ನೃತ್ಯ ಗಾತಿ ತ್ರಿಪುರಾ ಕಶ್ಯಪ್ ರೂಪಿಸಿ ಮುದ್ರಿಸಿದ್ದ ಛಾಯಾ ಚಿತ್ರಗಳನ್ನೂ ಪ್ರದರ್ಶನದಲ್ಲಿಡಲಾಗಿತ್ತು. ಈ ಎಲ್ಲದರ ನಡುವೆ ಮೇ 10ರ ಸಂಜೆ 7ಗಂಟೆಗೆ ತ್ರಿಪುರಾ ಕಶ್ಯಪ್, ಭರತ್ ಶರ್ಮಾರ ಸಂಗೀತ, ಬೆಳಕು ಇತ್ಯಾದಿಗಳ ನಡುವೆ ತಮ್ಮ ದೇಹವನ್ನು 'ಖ್ಬಿಲ್ಬೆಡ್' ಶೀರ್ಷಿಕೆಗೆ ಪೂರಕವಾಗಿ ಹಾಗೂ ಕವುದಿಯನ್ನು ವಿಶಿಷ್ಟವಾಗಿ ದುಡಿಸಿಕೊಂಡರು.

ಛಾಯಾಚಿತ್ರಗಳ ಜತೆ ಈ ದೃಶ್ಯಾಭಿನಯ ಈ ಹಿಂದಿನ ಹಲವು ಪ್ರಯತ್ನಗಳಿಗಿಂತಲೂ ಗಣನೀಯವಾಗಿ ಮೂಡಿಬಂದಿತು. ನೆಲದ ಮೇಲೆ ಹಾಸಿದ ಕವುದಿಯ ಮೇಲೆ ಇಡಿಯಾಗಿ ಹಾಗೂ ಗ್ಯಾಲರಿಯ ಸೂರಿನಿಂದ ಬಿಡಿ ಬಿಡಿಯಾಗಿ ವಿಭಾಗಗೊಂಡಂತೆ ಇಳಿಬಿಟ್ಟಿದ್ದ ಬಿಳಿಯ ತೆರೆ-ಮರೆಗಳಲ್ಲಿ ಹಲವು ನೆನಪುಗಳು ಕಾಡುವಂತಹ ದೃಶ್ಯರೂಪಗಳು, ಹಲವು ಪದರ, ತುಣುಕುಗಳ ಒಗ್ಗೂಡಿದ ಕವುದಿಯನ್ನು ಹಲವು ಕನಸು ಹಾಗೂ ನೈಜ ಅನುಭವಗಳ ಕಾಡುವಿಕೆಯಂತೆ ಸಾಂಕೇತವಾಗಿ ಬಳಸಲಾಗಿತ್ತು. ಅದರ ಹಲವು ಪದರಗಳಲ್ಲಿ ನಮ್ಮ ಹಲವು ಗ್ರಹಿಕೆಗಳು ಮಡುಗೊಂಡಿರುವಂತೆ ತ್ರಿಪುರಾ ಅದನ್ನು ಹಲವು ರೀತಿಗಳಲ್ಲಿ ತಮ್ಮ ದೇಹದ ಆಂಗಿಕವನ್ನು ಸಂಯೋಜಿಸಿ ದುಡಿಸಿಕೊಂಡರು, ತೊಟ್ಟಿಲು, ಜೋಳಿಗೆಯಿಂದಾರಂಬಿಸಿ, ನಮ್ಮ ನಿದ್ರೆ, ಕನಸು, ಕಾಮಗಳ ಮೂಲದಂತಹ ಹಾಗೂ ಸಾವಿನಲೂ ಸಮೀಪಿಸುವ ಅಥವಾ ಜತೆಗೇ ಉಳಿಯುವ ಕವುದಿಯ ಹಲವು ಮುಖಗಳನ್ನು

ಪ್ರದರ್ಶನದ ಸಂದರ್ಭದಲ್ಲಿ ತೆರೆದು ತೋರುವ ಅನುಭವ ಉಂಟು ಮಾಡಲಾಯಿತು. ಸಂಪೂರ್ಣ ದೇಶೀಯ ಅನುಭವ ಗ್ರಹಿಕೆಗಳ ಮೂಲದ ಅಭಿವ್ಯಕ್ತಿಯದು, ಕತ್ತಲು ಬೆಳಕುಗಳನ್ನು ದೃಶ್ಯಾತ್ಮಕ ಅನುಭವ ಉಂಟಾಗುವ ದೃಷ್ಟಿಯಿಂದ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಪ್ರಯತ್ನ ಗಮನ ಸೆಳೆಯುವಂತಿತ್ತು.

ವೀಕ್ಷಕನ ಪಾರಮ್ಯ ಸಾಧಿಸುವ ಇನ್‌ಸ್ಟಾಲೇಷನ್-ಅಭಿವ್ಯಕ್ತಿ

ಕೇರಳ ಮೂಲದ, ಪ್ರಸ್ತುತ ಮುಂಬಯಿವಾಸಿ ಬೋಸ್ ಕೃಷ್ಣಮಾಚಾರಿ ತಮ್ಮ 'ತಿರುಗಿ ಬೀಳುವ ಮನಸ್ಥಿತಿಯ ಅಭಿವ್ಯಕ್ತಿಗಳಿಗಾಗಿ ಪರಿಚಿತರು. ವಿಭಿನ್ನ ಹಾದಿ ತುಳಿದವರಿಗೆ ಯಶಸ್ಸು, ಖ್ಯಾತಿ ಕಟ್ಟಿಟ್ಟ ಬುತ್ತಿಯಂತೆ ಬೋಸ್ ಇತ್ತೀಚಿನ ವರ್ಷಗಳಲ್ಲಿ ತಮ್ಮ 'ಕಲೆಯ ಪರಿಚಾರಿಕೆ'ಯೇ ಅಲ್ಲದೆ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳಿಂದಾಗಿಯೂ ಹೆಚ್ಚು ಗಮನ ಸೆಳೆದಿದ್ದಾರೆ. ಅವರ ಕಲಾ ಪ್ರದರ್ಶನಗಳು ಇಡೀ ಭಾರತವನ್ನು ಆವರಿಸುವಂತೆ ಆಯೋಜಿಸಲ್ಪಟ್ಟಿರುತ್ತವೆ. ಈ ಸಾಲಿಗೆ ಹೆಚ್ಚಿನ ಗಾಂಭೀರ್ಯತೆಯಿಂದ ಸೇರುವ LAVA (Laboratory of visual Arts) ಇನ್‌ಸ್ಟಾಲೇಷನ್ ಅಭಿವ್ಯಕ್ತಿಯ ಪ್ರದರ್ಶನ ಬೆಂಗಳೂರಿನ, ಇಂತಹ ವಿಶಿಷ್ಟ ಪ್ರದರ್ಶನಗಳಿಗಾಗಿಯೇ ಎಂಬಂತೆ ವಿಶೇಷವಾಗಿ ಸಜ್ಜುಗೊಂಡಂತಿರುವ SUMUKHA ಗ್ಯಾಲರಿಯಲ್ಲಿ ನಡೆಯಿತು. LAVA ಇನ್‌ಸ್ಟಾಲೇಷನ್ ನಮ್ಮ ಜನರಿಗಾಗಿ (ಕೇವಲ ಗಂಭೀರ ಕಲಾಭಿಮಾನಿಗಳಿಗಾಗಿ ಎಂದು ಹೇಳಲಾರೆ) ಸಮಕಾಲೀನ-ತಾತ್ಕಾಲಿಕ ದೃಶ್ಯಕಲೆಯ ಪ್ರಯೋಗಾಲಯದಂತೆಯೇ ಸಜ್ಜುಗೊಂಡಿತ್ತು. ' I am trying to make available within my Limitations, what I really missed during my student years' ಎಂದು ಹೇಳಿಕೊಂಡಿರುವ ಬೋಸ್ 20 ವರ್ಷಗಳ ಹಿಂದೆ ನಮಗೆಲ್ಲ ಏನೇನು ಸೌಲಭ್ಯಗಳು ದೃಶ್ಯಕಲೆಯ ಕಲಿಕೆ, ಅಧ್ಯಯನಗಳಿಗೆ ಇರಬೇಕಿತ್ತೋ ಅವೆಲ್ಲ ಇಲ್ಲದೆ ಪಟ್ಟ ಪಾಡಿನ ಬೆಂಕಿಯ ಅನುಭವ ಮರುಕಳಿಸುವಂತೆ ಈ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯನ್ನು ರೂಪಿಸಿದ್ದಾರೆ. ಇಂದು ಇರುವ ಬಹುಮಾಧ್ಯಮ ಅನುಕೂಲಗಳೇ ಅಲ್ಲದೆ ಇನ್ನಿತರ ಸೌಲಭ್ಯಗಳು ಅಂದರೆ ಸುಸಜ್ಜಿತ ದೃಶ್ಯಕಲೆಯ ಗ್ರಂಥ ಬಂಡಾರ, ಡಿ.ವಿ.ಡಿ., ಸಿ.ಡಿ., ಇತ್ಯಾದಿಗಳು ದೃಶ್ಯಕಲೆಯ ಹಲವು ಮುಖಗಳಾದ ಸಿನಿಮಾ, ವಾಸ್ತು ಶಿಲ್ಪ, ವಿನ್ಯಾಸ, ಫ್ಯಾಷನ್, ಸಾಂಸ್ಕೃತಿಕ ಅಧ್ಯಯನ, ತತ್ವಶಾಸ್ತ್ರಗಳನ್ನು ಆಲಂಗಿಸಿವೆ. ಇವೆಲ್ಲದರ ನಡುವೆ ಕಲೆಯ ಅಭಿವ್ಯಕ್ತಿಗೆ ಪೂರಕ ಹಿನ್ನೆಲೆ, ಆಳಗಳನ್ನು ದೊರಕಿಸಿಕೊಡಬಹುದೆಂಬ ನಂಬಿಕೆ ಈ ಕಲಾವಿದರದು. ಸಂಸ್ಥೆಯೊಳಗಿನ ಒಂದು ಕೋಣೆಯಂತೆ, ಮ್ಯೂಸಿಯಂ ಒಳಗಿನ ಒಂದು ಕಲಾ ಯೋಜನೆಯಂತೆ ಈ ಇನ್‌ಸ್ಟಾಲೇಷನ್ ಕಲ್ಪನೆ ಗರಿಗೆದರಿದೆ. ಈ ಸೃಷ್ಟಿ ಒಂದೆಡೆ ಶಾಶ್ವತವಾಗಿ ನೆಲೆಗೊಂಡಾಗ ಕಲಾ ಅಭ್ಯಾಸಿಗಳಿಗೆ, ತತ್ವವೇತ್ತರಿಗೆ, ಉತ್ತಮ ತಾಣವಾಗಬಲ್ಲದು.

ಕೃಷ್ಣಮಾಚಾರಿ ಭೋಸ್‌ರವರ ಲಾವಾ...

ಸುಮುಖ ಗ್ಯಾಲರಿಯ ಬೃಹತ್ ಅಂಕಣದೊಳಗೆ ಹುಟ್ಟಿಕೊಂಡಿದ್ದ, ಪ್ರತ್ಯೇಕ

ಅಸ್ತಿತ್ವವನ್ನು ಅಚ್ಚರಿ ಎನ್ನನಿಸುವಂತೆ ಸಾಧಿಸಿದ್ದ ಈ ಅಭಿವ್ಯಕ್ತಿ ನನ್ನಂತಹವನಿಗೆ ನನ್ನದೇ, ನನಗಾಗಿಯೇ ರೂಪಿಸಿಕೊಟ್ಟಿರುವ ಅಧ್ಯಯನ ಕೋಣೆ ಎನಿಸಿದ್ದು ಉಂಟು. ಎರಡು ದಿನಗಳು ಇಡೀ ಅಲ್ಲಿದ್ದ ಹಲವು ದೃಶ್ಯ ಸಂಸ್ಕೃತಿಯ ಗ್ರಂಥಗಳೇ ಅಲ್ಲದೆ ಡಿ.ವಿ.ಡಿ., ಸಿ.ಡಿ.ಗಳ ಮೂಲಕ ದೃಶ್ಯಕಲೆಯ, ನನಗೆ ಅಗತ್ಯವಾಗಿದ್ದ ಎಷ್ಟೋ ವಿಷಯಗಳ ಕುರಿತು 'ಮೊದಲ ಓದಿನ'ರೀತಿಯಲ್ಲಿನ ಗ್ರಹಿಕೆಗಳನ್ನು ಗ್ರಹಿಸಿದ್ದು, ಟಿಪ್ಪಣಿಗಳನ್ನು ಮಾಡಿಕೊಂಡಿದ್ದು ಉಂಟು. ಕಲಾವಿದ ಬೋಸ್‌ರಿಗೆ 'ಇದು ನನಗಾಗಿ ಸಿದ್ಧಪಡಿಸಿ ಇಟ್ಟಂತಿದೆ; ಧನ್ಯವಾದಗಳು' ಎಂದು ಸಂದೇಶ ರವಾನಿಸಿದ್ದೂ ಉಂಟು.

ಪ್ರಸ್ತುತ ಅಸ್ತಿತ್ವದಲ್ಲಿರುವ ದೃಶ್ಯಕಲೆಯ ಸಾಂಸ್ಥಿಕ ರಾಜಕಾರಣ, ಅಲ್ಲಿನ ಓಬಿರಾಯನ ಕಾಲದ ಪಠ್ಯಚಟುವಟಿಕೆಗಳು ಇತ್ಯಾದಿಗಳಿಗೆ ಸವಾಲಾಗುವಂತೆ ಮೂಡಿಬಂದಿರುವ ಈ ಅಭಿವ್ಯಕ್ತಿ ಪ್ರದರ್ಶನದ ಸಂದರ್ಭದಲ್ಲಿ ಯಾರು ಬೇಕಾದರೂ ಬಂದು ತಮಗೆ ಅಗತ್ಯವಾದುದನ್ನು ಬಳಸಿಕೊಳ್ಳಬಹುದಿತ್ತು. ಕಲಾ ವಿದ್ಯಾರ್ಥಿಗಳಿಗೆ, ದೃಶ್ಯಕಲೆಯ ಇತಿಹಾಸಕಾರರು, ವಿಮರ್ಶಕರು, ಕಲಾವಿದರು ಮೊದಲಾದವರಿಗೆ ಇದೊಂದು ಅಚ್ಚರಿಯಾಗಿ ನೆರವಾಯಿತು. ದೃಶ್ಯ-ಅಧ್ಯಯನ ಶೀಲರಿಗೆ ಪುಸ್ತಕಗಳನ್ನಿಟ್ಟಿದ್ದ ಕಪಾಟು, ಕುಳಿತು ಬರೆಯುವ, ಓದುವ, ಡಿ.ವಿ.ಡಿ., ಸಿ.ಡಿ.ಗಳನ್ನು ನೋಡುವ, ಕೇಳುವ ಕಾರಣಕ್ಕಾಗಿ ರೂಪಿಸಿದ್ದ ಪೀಠೋಪಕರಣಗಳ ವಿಶಿಷ್ಟ ವಿನ್ಯಾಸ ಇತ್ಯಾದಿಗಳೆಲ್ಲ ಖುಷಿ ನೀಡುವಂತಿತ್ತು.

ಮೂಲತಃ ಇನ್‌ಸ್ಟಾಲೇಷನ್ ಚಿತ್ರ-ಶಿಲ್ಪ ಇತ್ಯಾದಿಗಳನ್ನು ಮೀರಿದ ವಿಶಿಷ್ಟ ಅಭಿವ್ಯಕ್ತಿ. ನಿರ್ದಿಷ್ಟ ಸ್ಥಳದ ಪೂರಕ ಸೌಲಭ್ಯಗಳನ್ನು ದುಡಿಸಿಕೊಳ್ಳುವುದರ ಜತೆ ಜತೆಗೇ ವೀಕ್ಷಕರನ್ನೂ ತನ್ನೊಳಗೇ ಅರಗಿಸಿಕೊಂಡುಬಿಡುವುದು. ವೀಕ್ಷಕನಿಲ್ಲದೆ ಈ ಅಭಿವ್ಯಕ್ತಿ ಇಲ್ಲ. ಬೋಸ್‌ರ LAVAದಲ್ಲಿ ವೀಕ್ಷಕರು ನಡೆದುಕೊಂಡ ರೀತಿಯೂ ವಿಶಿಷ್ಟ. ಇನ್‌ಸ್ಟಾಲೇಷನ್‌ನ ನೂರಾರು ಪುಸ್ತಕಗಳ ನಡುವೆ ಇದ್ದ ಕೆಲವು ಪುಸ್ತಕಗಳು 'The Dialectics of seeing, Walter Benjamin and the Arcades project', 'David Hockney portraits', 'The private face of a public art', 'Duchamp-in context', 'The Death of Feminism', 'What good are the arts', 'Hitler & the power of Aesthetics' ಇನ್ನೂ ಎಷ್ಟೋ ಪುಸ್ತಕಗಳು, ಯಾವುದನ್ನು ಹೇಳುವುದು? ಯಾವುದನ್ನು ಬಿಡುವುದು? ಎಂಬಂತಹ ಪಟ್ಟಿ. ಆಗಾಗ ಕಾಫಿಯ ವ್ಯವಸ್ಥೆ. ಓದಿ ಬೇಸರಗೊಂಡಾಗ ದೃಶ್ಯಲೋಕವನ್ನು ಆವರಿಸಿಕೊಳ್ಳಬಹುದು. ಇನ್‌ಸ್ಟಾಲೇಷನ್ ಕಲೆಗೆ ಅತ್ಯುತ್ತಮ ಉದಾಹರಣೆಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಈ ಅಭಿವ್ಯಕ್ತಿ ಪಾತ್ರ. ಆದರೆ ಒಬ್ಬ ಕಲಾ ವಿದ್ಯಾರ್ಥಿಗೇ ಈ ಎಲ್ಲ ಸೌಲಭ್ಯಗಳೂ ಹಿಂದೆ ಇರಲಿಲ್ಲ. ಈಗ ಇದೆ. ಅಗತ್ಯವೂ ಇದೆ. ಆದರೆ ಇವೆಲ್ಲ ಇಲ್ಲದೆ ಬೋಸ್ ಕೃಷ್ಣಮಾಚಾರಿ ರೂಪುಗೊಂಡದ್ದು ಸಾಧ್ಯವಾಗಿದ್ದು ಬಹುಮುಖ್ಯ. ಎಲ್ಲ ಆಶ್ಚರ್ಯಕಾರಕ, ಅತಿ ಅಗತ್ಯ ಸಮಕಾಲೀನ ಸೌಲಭ್ಯಗಳೆಲ್ಲವೂ ದೊರೆತವರೆಲ್ಲ

ಕಲಾವಿದರು, ಉತ್ತಮ ಕಲಾವಿದರು ಆಗುತ್ತಾರೆ ಎಂದು ಯಾರು ಹೇಳುತ್ತಾರೆ? ಕಲಾ ಶಾಲೆಗಳಿಂದ ಕಲಿತು ಹೊರ ಬಂದವರೆಲ್ಲಾ ಕಲಾವಿದರಾಗಿಲ್ಲ; ಅದು ಸಾಧ್ಯವೂ ಇಲ್ಲ. ಅವರೊಳಗಿನ ಹಸಿವು, ಅಭಿವ್ಯಕ್ತಿಸಬೇಕೆಂಬ ತೀವ್ರತೆ ಹೆಚ್ಚಾಗುವ ಬದುಕಿನ ಆಳವನ್ನು ಮುಟ್ಟುವ 'ಮನುಷ್ಯತ್ವ'ಬೇಕು. ಅದನ್ನು ಯಾರೂ, ಯಾರಿಗೂ ಕೊಡಲಾರರು. ಕಲಾವಿದನೇ ತನ್ನ ಸುತ್ತ ಆ ಸಂದರ್ಭವನ್ನು ಸಾಧ್ಯ ಮಾಡಿಕೊಳ್ಳಬೇಕು.

ಬೆಂಗಳೂರಿನ ಬೀದಿಯಲ್ಲಿ ನಿದ್ರಿಸಿದ ಬರ್ಲಿನ್ ಕಲಾವಿದೆ

